
ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 26 ಸಂಚಿಕೆ 23 ಜೂನ್ 13, 2004 ಬೆಲೆ ರೂ. 3.00



ಜಾತ್ಯತೀತ ಸರ್ಕಾರದ ಕನಿಷ್ಠ ಕಾರ್ಯಕ್ರಮ ಜನತೆಯ ಮುಂದೆ







ಕರ್ನಾಟಕಕ್ಕೆ ಕಾಲಿಟ್ಟ ಸಮ್ಮಿಶ್ರ ಸರ್ಕಾರ



ಅಕ್ಕಿ ಕದ್ದು ಸಿಕ್ಕಿ ಬಿದ್ದವರು



ಬುಶ್ ವಿರುದ್ಧ ಕ್ಯಾಸ್ಟ್ರೋ ಗುಡುಗು



ಸಿಪಿಐ(ಎಂ) ಏಕೆ ಸರ್ಕಾರ ಸೇರಲಿಲ್ಲ?

ಇತಿಹಾಸದ ಪುಟಗಳಿಂದ

ಇರ್ಲಿ ಬಿಡಿ ಇನ್ನೂ ಮೂರು ದಿನ

ಕಮ್ಯೂನಿಸ್ಟ್ ಪಾರ್ಟಿ ನಿಷೇದಕ್ಕೊಳಗಾಗಿದ್ದ ಸಂದರ್ಭ... 1949 - 50 ರ ಸಮಯ... ಕಮ್ಯೂನಿಸ್ಟ್ ಕಾರ್ಯಕರ್ತರು ಭೂಗತರಾಗಿ ಸಂಘಟಿಸುತ್ತಿದ್ದ (ಕಾರ್ಗತ್ತಲ ಕಾಲ.... ಪ್ರತಿದಿನವೂ ಊರಿಂದೂರಿಗೆ ರಾತ್ರೋರಾತ್ರಿ ಪಯಣ. ಅಲ್ಲಿ ಯಾರಾದರೂ ಸಂಗಾತಿಗಳ ಮನೆಯಲ್ಲಿ "ಆಶ್ರಯ" (ಷೆಲ್ಟರ್) ವ್ಯವಸ್ಥೆ ... ಒಂದು ದಿನ ಹೀಗಾಯಿತು. ... ಸಂಗಾತಿ ನಾಯನಾರ್ ಕಣ್ಣಾನೂರು ಜಿಲ್ಲೆಯ ಒಂದು ಊರಿಗೆ ಬರುವ ವ್ಯವಸ್ಥೆಯಾಗಿತ್ತು. ಆ ದಿನ ರಾತ್ರಿ ಷೆಲ್ಟರ್‌ಗೆ ಕುಂಜ್ಞಾಕಣ್ಣನ್ ಎಂಬ ಸಂಗಾತಿಗೆ ವ್ಯವಸ್ಥೆ ಮಾಡಲು ಒಪ್ಪಿಸಲಾಗಿತ್ತು. ಆದರೆ ಆ ಸಂಗಾತಿಯ ಬೇಜವಾಬ್ದಾರಿತನದಿಂದ ಆ ವ್ಯವಸ್ಥೆ ಆಗಲಿಲ್ಲ. ಸಂಗಾತಿ ನಾಯನಾರ್ ಹಾಗೂ ಮತ್ತೊಬ್ಬ ಸಂಗಾತಿ ಬಂದೇಬಿಟ್ಟರು. ಪರಿಸ್ಥಿತಿ ಪೇಚಿಗೀಡುಮಾಡಿತ್ತು. ಕಮ್ಯೂನಿಸ್ಟರನ್ನು ಕಂಡರೆ ಸಾಕು ಗಬಕ್ಕನೆ ಹಿಡಿದು ಹಾಕಲು ಪೊಲೀಸ್ ಸಮೂಹ ಗಸ್ತು ಹೊಡೆಯುತ್ತಿತ್ತು. ರಾತ್ರಿಪೂರ್ತಿ ಷೆಲ್ಟರ್‌ಗಾಗಿ ಕೇಳಿ ಕೇಳಿ ಪರದಾಟ...

'ಸ್ವಾಮಿ ನಾಯನಾರ್ ಬಂದಿದ್ದಾರೆ. ಇವತ್ತೊಂದು ರಾತ್ರಿ ಷೆಲ್ಟರ್ ವ್ಯವಸ್ಥೆ ಮಾಡಿ', ಜೊತೆಗೆ ಬಂದಿದ್ದ ಸಂಗಾತಿ ಕೇಳಿದ.

'ಅಯ್ಯಯ್ಯೋ.... ಸಾಧ್ಯವಿಲ್ಲ....' ಎಂಬ ಉದ್ಗಾರ. ಕೊನೆಗೆ ರಾತ್ರಿ ಪೂರ್ತಿ ಸುತ್ತಿದರೂ 'ಷೆಲ್ಟರ್' ಸಿಗಲಿಲ್ಲ. ಸೂರ್ಯ ಮೇಲೇರುತ್ತ ಬರುತ್ತಿದ್ದಾನೆ.... ಬೆಳಕರಿದರೆ ನಾಯನಾರ್ ಜೈಲಿಗೆ ಸೇರುತ್ತಾರೆ.... ಕೊನೆಗೆ ಒಬ್ಬ ರೈತನ ಮನೆಗೆ ನಾಯನಾರ್ ಮತ್ತು ಜೊತೆಯ ಸಂಗಾತಿ ಹೋದರು. 'ಸ್ವಾಮಿ, ಇವತ್ತೊಂದು ದಿನ ನಾಯನಾರ್‌ರವರು ಮನೆಯಲ್ಲಿರುತ್ತಾರೆ. ದಯವಿಟ್ಟು ಅವಕಾಶ ಕೊಡಿ. ಸಂಜೆ ಬಂದು ಕರೆದೊಯ್ಯುತ್ತೇನೆ' ಎಂದು ಜೊತೆಯಲ್ಲಿದ್ದ ಸಂಗಾತಿ ಕೇಳಿದರು.

'ಹೇ.. ಸಾಧ್ಯವಿಲ್ಲ... ಸಾಧ್ಯವಿಲ್ಲ.... ನೀವು ಕಮ್ಯೂನಿಸ್ಟರು ನಿಮ್ಮ ಸಹವಾಸ ಮಾಡಿದವರುಂಟೆ..!' ಎಂದು ರೈತನ ಅಂಬೋಣ.

ಎಷ್ಟು ಗೋಜಲಾಡಿದರೂ ರೈತ ಒಪ್ಪಲಿಲ್ಲ. ಕೊನೆಗೆ ಒಂದು ನಿರ್ಧಾರಕ್ಕೆ ಬಂದೇಬಿಟ್ಟರು.

'ನೋಡಪ್ಪ, ನೀನೇನೇ ಹೇಳಿದರೂ ನಾವು ಹೊರಗೆ ಹೋಗೊಲ್ಲ. ಏನು ಬೇಕಾದರೂ ಮಾಡಿಕೊ, ಪೊಲೀಸರಿಗೆ ತಿಳಿಸಿದರೆ ನಮ್ಮಿಬ್ಬರ ಜೊತೆಗೆ ನಿನ್ನನ್ನೂ ಎಳೆದುಕೊಂಡು ಹೋಗಲಿ.....!' ಎನ್ನುತ್ತ ರಿಕಾಣಿ ಹೂಡೇಬಿಟ್ಟರು.

ರೈತ ತಬ್ಬಿಬ್ಬು!

ಕೊನೆಗೆ ಬೇರೆ ದಾರಿಯಿಲ್ಲದೇ ರೈತ ಸುಮ್ಮನಾದ. ನಾಯನಾರ್‌ರವರನ್ನು ಬಿಟ್ಟು ಜೊತೆಯಲ್ಲಿದ್ದ ಸಂಗಾತಿ ತಮ್ಮ ಮನೆಗೆ ಹೋಗಿ ಬೇರೆ ಷೆಲ್ಟರ್ ವ್ಯವಸ್ಥೆ ಮಾಡಿ ನಾಯನಾರ್ ರೈತನ ಮನೆಗೆ ಹೋದರು.. ರೈತ ಹೇಳಿದ, ಇರಲಿ ಬಿಡಿ ಇನ್ನೂ ಮೂರು ದಿನ ನಮ್ಮ ಮನೆಯಲ್ಲೇ!

ಈ ಸಂಗಾತಿಗೆ ಆಶ್ಚರ್ಯ!

ಕೇವಲ ಒಂದು ದಿನದ ಬಲವಂತದ ಷೆಲ್ಟರ್ ರೈತನನ್ನು ನಾಯನಾರ್ ಅಭಿಮಾನಿಯನ್ನಾಗಿಸಿತ್ತು. ○



1936 ರಿಂದ 1942 ರ ನಡುವೆ ಕಮ್ಯುನಿಸ್ಟ್ ಪಕ್ಷವನ್ನು ಬಹಿಷ್ಕರಿಸಿದ್ದ ಅವಧಿಯಲ್ಲಿ ಪೋಲೀಸರು ಒಂದು ನೆಪವೊಡ್ಡಿ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಭೇಟೆಯಾಡುತ್ತಿದ್ದರು. ನಾಯನಾರ್ ಅವರು ಅತ್ಯಂತ ಕೋಲಾಹಲಕಾರಿಯಾದ 'ಮೊರಾಜಾ' ಮತ್ತು ಕಯ್ಯೂರು' ಪ್ರಕರಣಗಳಲ್ಲಿ ಪೋಲೀಸರಿಗೆ ಬೇಕಾಗಿದ್ದರು. ಅವರ ಭೂಗತ ಜೀವನದ ಕೆಲವು ಘಟನೆಗಳು ಇಲ್ಲಿವೆ.

ಮಂಗಳೂರಿನ ಕಡಲು ಹಲವು ನೆನಪುಗಳ ಒಡಲು


ಒಬ್ಬ ಸಣ್ಣ ಬಾಲಕ. ರಾತ್ರಿಯಿಡಿ ಪ್ರಯಾಸದ ಪ್ರಯಾಣದ ಬಳಿಕ ಮಂಗಳೂರು ತಲುಪಿದ.

ರೈಲ್ವೆ ನಿಲ್ದಾಣದಲ್ಲಿ ಬಂದಿಳಿದದ್ದೇನು ಸುಲಭವಾಗಿತ್ತು. ಹೋಗುವುದೆಲ್ಲಿಗೆ? ಅಲ್ಲೇ ಇದ್ದ ಒಬ್ಬಾತನೊಂದಿಗೆ ಒಂದೆರಡು ಮಾತುಗಳನ್ನು ಉಸುರಿಸಿದ. ಆತನಿಗಿದೂ ಅರ್ಥವಾಗದೇ ಹಾಗೇ ಒಮ್ಮೆ ಹುಡುಗನತ್ತ ತಿರುಗಿ ನೋಡಿ ಹೋದ.

ಇನ್ನೇನು ಮಾಡುವುದು? ತನಗೆ ಕನ್ನಡ ಬರುತ್ತಿಲ್ಲ ಮಂಗಳೂರಿನ ರಸ್ತೆಯ ಮೇಲೆ ನಿಧಾನಕ್ಕೆ ನಡೆಯತೊಡಗಿದ. ಭಾರಿ ಮಹಲುಗಳು ಗಿಜಿಗಿಡಲಾರಂಭಿಸಿದ್ದ ರಸ್ತೆಗಳು, ಜನಗಳು. ಒಂದು ರೀತಿಯ ರೋಮಾಂಚನ. ತನ್ನ ಹಳ್ಳಿಗಿಂತಲೂ ಭಿನ್ನವಾದ ಚಿತ್ರ ಇಲ್ಲಿದೆ. ಆದರೆ ಹೊಟ್ಟೆಯಲ್ಲಿ ಹಸಿವು ತಾಳಹಾಕುತ್ತಿತ್ತು. ಆಯಾಸ ಹೆಚ್ಚಾಗಿದ್ದರಿಂದ ಎಲ್ಲಾದರೂ ಮಲಗೋಣವೇ ಅನ್ನಿಸುತ್ತಿತ್ತು. ಇದಾವುವೂ ಸಾಧ್ಯವಿಲ್ಲ. ಆದ್ದರಿಂದ ಸೋತ ಕಾಲುಗಳನ್ನು ಎಳೆಯುತ್ತ ಬಾಲಕ ಸಾಗಿದ.

ಆದೇ ರಸ್ತೆಯಲ್ಲಿ ಬರುತ್ತಿದ್ದ ಗಡ್ಡದ ವ್ಯಕ್ತಿಯೊಬ್ಬ ತನ್ನತ್ತ ಗಮನವಿಟ್ಟು ನೋಡಿದ್ದರಿಂದ 'ಮಾರ್ ಬಾಸಿಲ್ ಕಾಲೇಜಿ'ಗೆ ಹೋಗುವುದು ಹೇಗೆ ಎಂದು ಕೇಳಿದ. ಆತನಿಗೆ ಭಾಷೆ ಅರ್ಥವಾಗಿತ್ತು. ದಾರಿ ತೋರಿಸಿದ ಆ ಬಾಲಕನ ದೊಡ್ಡ ಅಣ್ಣ ಕೆಲಸ ಮಾಡುತ್ತಿದ್ದ ಕಾಲೇಜದು. ಹಾಸ್ಟೇಲ್‌ನಲ್ಲಿ ಆತನನ್ನು ಭೇಟಿಯಾದಾಗ 'ಮನೆ ಬಿಟ್ಟು ಓಡಿ ಬಂದದ್ದೇಕೆಂದು' ಬೈದು ಕೆಲವು ದಿನಗಳು ತಂಗಿದ್ದು ಆತ ಮತ್ತೆ ತನ್ನ ಹಳ್ಳಿಗೆ ವಾಪಾಸಾದ. ಆದರೆ ಆ ನಗರದ ಚಿತ್ರ ಅಚ್ಚಳಿಯದೇ ಮನಸ್ಸಿನಲ್ಲಿ ಮೂಡಿತ್ತು. ಆತ ಕೇಳಿದ್ದ ಕಾರ್ಮಿಕ, ಬಂಡವಾಳಗಾರ ಮತ್ತು ಬಿಕ್ಷುಕರು, ಮುಂತಾದ ಪದಗಳು ಹೆಚ್ಚು ಅರ್ಥವಾದಂತಾಗಿತ್ತು. ಇವು ಭೂಮಾಲಿಕ - ಗೇಣಿದಾರ ಶಬ್ದಗಳಿಗಿಂತಲೂ ಭಾರಿ ವ್ಯಾಪ್ತಿಯಲ್ಲಿರುವುದನ್ನು ಕಂಡುಕೊಂಡಿದ್ ದ.

ಮುಂದೆ ಕಯ್ಯೂರು ರೈತ ಹೋರಾಟದಲ್ಲಿ ಬ್ರಿಟೀಷ್ ಪೊಲೀಸರಿಗೆ ಬೇಕಾದ 'ಆರೋಪಿ' ಈತ. ಹೀಗಾಗಿ ಭೂಗತನಾಗಿದ್ದರಿಂದ ಹಳ್ಳಿಯಿಂದ ಹಳ್ಳಿಗೆ ಕೆಸರು, ಗದ್ದೆ, ರಸ್ತೆಗಳನ್ನು ದಾಟಿ ಪ್ರಯಾಣಿಸಬೇಕಾಗಿತ್ತು. ರಾತ್ರಿ ಪಕ್ಷದ ಕಾಯಕರ್ತರಿಗೆ ತರಗತಿ ನೀಡುವುದು. ನಂತರ ಮುಂದಿನ ಊರಿಗೆ. ಹೀಗೆ ತಲಚೇರಿಯಿಂದ ಕಾಸರಗೋಡಿಗೆ ನೂರು ಮೈಲುಗಳ ಪ್ರಯಾಣ ತೀವ್ರ ಕಾಯಿಲೆಯಿಂದಾಗಿ ಇನ್ನು ನಡೆಯುವುದು ಅಸಾಧ್ಯವಾಗಿತ್ತು. ಕಮ್ಯೂನಿಸ್ಟರನ್ನು ಭೇಟೆಯಾಡಲು ಪೊಲೀಸರು ಎಲ್ಲಾ ಕಡೆ ಬಲೆ ನೇಯ್ದಿದ್ದರು. ಅವರ



ಯುವಕರಾಗಿದ್ದಾಗ ನಾಯನಾರ್

ಪಟ್ಟಿಯಲ್ಲಿ ಈ ಯುವಕನು ಒಬ್ಬ ಸಿಕ್ಕಿಬಿದ್ದರೆ ಮರಣದಂಡನೆ ನಿಶ್ಚಿತ.

ಆರೋಗ್ಯ ತೀರಾ ಹದಗೆಟ್ಟಿದ್ದರಿಂದ ಆಸ್ಪತ್ರೆ ಸೇರಲೇಬೇಕಿತ್ತು. ಆಸ್ಪತ್ರೆ ಸೇರುವುದೆಂದರೆ ಸಿಕ್ಕಿಬಿದ್ದಂತೆ ಸರಿ. ಆದ್ದರಿಂದ ಹೇಗೋ ಕಾಸರಗೋಡಿನಿಂದ ಮಂಗಳೂರಿನತ್ತ ಹೊರಟ ರೈಲು ಹತ್ತಿದ್ದಾಯ್ತು.

ಮಂಗಳೂರು ರೈಲ್ವೆ ನಿಲ್ದಾಣದಲ್ಲಿಯೂ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು. ಅಲ್ಲಿಂದ ಕಣ್ತಪ್ಪಿಸಿ ಹೋಗಿ ಈ ಯುವಕ ಕಮ್ಯೂನಿಸ್ಟ್ ಪಕ್ಷದ ಹಿತೈಷಿಯಾಗಿದ್ದ ಒಬ್ಬ ಹೊಟೇಲ್ ಕೆಲಸಗಾರನ ಮನೆ ಸೇರಿದ. ಕೇಳಿದವರಿಗೆಲ್ಲ ಆತ ಸಹೋದರ. ಆರೋಗ್ಯ ತೀರಾ ಹದಗೆಟ್ಟಿದ್ದರಿಂದ ಇನ್ನು ಆಸ್ಪತ್ರೆಗೆ ಸೇರುವುದು. ಆಸ್ಪತ್ರೆಯಲ್ಲಿದ್ದ ಕಂಪೌಂಡರ್ ಒಬ್ಬ ಯುವಕನ ಸ್ನೇಹಿತ. ಹೀಗಾಗಿ ಆಸ್ಪತ್ರೆ ಸೇರಿದ್ದೂ ಆಯ್ತು.

ಯುವಕ ಆಸ್ಪತ್ರೆ ಸೇರಿದ ಸಂಗತಿ ಪೊಲೀಸರಿಗೆ ತಿಳಿದುಹೋಯ್ತು. ಯುವಕನಿದ್ದ ಆಸ್ಪತ್ರೆಗೂ ಒಂದು ಕಂಪೌಂಡರನನ್ನು 'ಮಲೆಯಾಳಿಯೊಬ್ಬ ಆಸ್ಪತ್ರೆಗೆ ಬಂದು ಸೇರಿದ್ದಾನೆಯೇ ಅಂತ ಪೊಲೀಸರು ಕೇಳಿದರು. ಇಲ್ಲಿ ಯಾರೂ ಸೇರಿಲ್ಲವಲ್ಲ ಎಂಬ ಉತ್ತರವನ್ನು ತುಂಬಾ ಸಹಜವೆನ್ನುವಂತೆ ಕಂಪೌಂಡರ್ ಹೇಳಿದ. ಪೊಲೀಸರು ಹಿಂತಿರುಗಿದರು. ಯುವಕ ನಿಟ್ಟುಸಿರುಬಿಟ್ಟ.

ಆದರೆ..... ಒಂದೆರಡು ದಿನಗಳಲ್ಲಿಯೇ ಕಾಸರಗೋಡಿನ ಪೊಲೀಸ್ ಇನ್ಸ್‌ಪೆಕ್ಟರ್ ಸಹ ಇದೇ ಆಸ್ಪತ್ರೆ ಸೇರಿದ. ಅದೂ ಯುವಕನ ಪಕ್ಕದ ಮಂಚದಲ್ಲೇ....!

ಇನ್ಸ್‌ಪೆಕ್ಟರನನ್ನು ಕಾಣಲು ಅನೇಕ ಅಧಿಕಾರಿಗಳು, ಪೊಲೀಸರು ಬರತೊಡಗಿದರು. ಇನ್ನೂ ಇಲ್ಲಿರುವುದೇ ಅಪಾಯವೆಂದು ಬಗೆದ ಯುವಕ ಜಾಗ ಖಾಲಿ ಮಾಡಲು ಅಣಿಯಾದ. ಪೊಲೀಸರು ದಿನಾಲು ಈತನ ಬಗ್ಗೆ ವಿಚಾರಿಸುತ್ತಿದ್ದರು. ಈ ಬಗ್ಗೆ ಕಂಪೌಂಡರು ಗೆಳೆಯನೊಂದಿಗೆ ಚರ್ಚಿಸಿದ ಬಳಿಕ 'ಬಿಡುಗಡೆ' ಯಾಗಲು ಅಣಿಯಾದ. ವೇಷ ಬದಲಿಸಿಕೊಂಡ ಆತ ನಿಧಾನವಾಗಿ ಆಸ್ಪತ್ರೆಯ ಹಿಂಬಾಗಿಲಿನ ಮೂಲಕ ಪರಾರಿಯಾದ. ರೈಲ್ವೆ ನಿಲ್ದಾಣ ತಲುಪಿದಾಗ ಅಲ್ಲೆಲ್ಲ ಕಾವಲು. ಭೂಗತ ಕಮ್ಯೂನಿಸ್ಟ್ ಒಬ್ಬ ಈಗ ತಲೆಮರೆಸಿಕೊಂಡು ರೈಲ್ವೆ ನಿಲ್ದಾಣಕ್ಕೆ ಬರಲಿದ್ದಾನೆಂದು ಅವರು ಜಾಗೃತರಾಗಿದ್ದರು. ಕೊನೆಗೂ ಸುತ್ತಿಬಳಸಿ ರೈಲುಹತ್ತಿ ಕಾಸರಗೋಡನ್ನು ತಲುಪಿದ್ದಾಯಿತು.

ಬಾಲಕನಾಗಿದ್ದಾಗ ಮಂಗಳೂರು ಪ್ರಥಮ ಭೇಟಿಯಲ್ಲಿ ರೋಮಾಂಚನಕಾರಿ ಅನುಭವ ನೀಡಿದ್ದರೆ ಎರಡನೆಯ ಬಾರಿಗೆ ಅದು ತಮಗೆ ಅತಿ ಖ್ಯಾತನಾಮಯವಾಗಿತ್ತೆಂದು ಕಾಮ್ರೇಡ್. ಇ.ಕೆ.ನಾಯನಾರ್ ಸ್ಮರಿಸುತ್ತಾರೆ. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು, ಕೇರಳದ ಮುಖ್ಯಮಂತ್ರಿಯೂ ಆಗಿದ್ದ, ಕಾಂ.ಇ.ಕೆ.ನಾಯನಾರ್‌ರವರು ಹಲವಾರು ಬಾರಿ ಮಂಗಳೂರಿಗೆ ಭೇಟಿ ನೀಡಿದ್ದರು. ಜನರೊಂದಿಗೆ ಬೆರೆತಿದ್ದರು. ಭಾರೀ ಬಹಿರಂಗ ಸಭೆಗಳನ್ನುದ್ದೇಶಿಸಿ ಮಾತನಾಡಿದ್ದರು. ಆದರೆ ಆ ಎರಡು ಘಟನೆಗಳು ಎಂದೆಂದಿಗೂ ಮರೆಯಲಾಗದವುಗಳು ಎಂದು ಈಗಲೂ ಸ್ಮರಿಸುತ್ತಾರೆ.

ಕಾಂ. ಇ.ಕೆ.ನಾಯನಾರ್‌ಗೆ ಶ್ರದ್ಧಾಂಜಲಿ

ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿಯ ವತಿಯಿಂದ ಇತ್ತೀಚಿಗೆ ನಿಧನರಾದ ಕಾಂ.ಇ.ಕೆ.ನಾಯನಾರ್ ಅವರಿಗೆ ಶ್ರದ್ಧಾಂಜಲಿ ಸಭೆಯನ್ನು ದಿನಾಂಕ 23.5.2004 ರಂದು ಮೈಸೂರಿನ ಸಿಪಿಐ(ಎಂ) ಪಕ್ಷದ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಮಾತನಾಡಿದ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಎನ್.ವಿಜಯಕುಮಾರ್ ಆಧುನಿಕ ಕೇರಳ ಕಟ್ಟುವ ಕೆಲಸದಲ್ಲಿ ಕಾಂ.ನಾಯನಾರ್ ನಿರ್ವಹಿಸಿದ ಪಾತ್ರವನ್ನು ವಿವರಿಸಿದರು. ಸಣ್ಣ ವಯಸ್ಸಿನಲ್ಲೆ ಭೂಗತ ಜೀವನ ನಡೆಸಿದ್ದನ್ನು, ಕೇರಳದಲ್ಲಿ ಕಮ್ಯೂನಿಸ್ಟ್ ಚಳುವಳಿ ಕಟ್ಟಿ ಬೆಳೆಸಲು ನಡೆಸಿದ ನಿರಂತರ ಹೋರಾಟದ ಬಗ್ಗೆ ವಿವರಿಸಿದರು. ಪೀಪಲ್ಸ್ ಪ್ಲಾನ್ ಜಾರಿಗೆ ತರುವ ಮೂಲಕ ಜನರ ಬಳಿಗೆ ಆಡಳಿತ ಎಂಬ ಅವರ ದೂರದೃಷ್ಟಿಯನ್ನು ವಿವರಿಸಿ, ಕೇರಳದ ಪ್ರಗತಿಗೆ ದುಡಿದ ಮಹಾನ್ ಕ್ರಾಂತಿಕಾರಿ ಎಂದರು.

ದೇಶಾಭಿಮಾನಿ ಓದುಗರ ವೇದಿಕೆಯ ಕಾಂ.ಮನೋಹರ್ ಮಾತನಾಡುತ್ತ ಕೇರಳದಲ್ಲಿ ಕಾಂ.ನಾಯನಾರ್ ನಡೆಸಿದ ಹಲವಾರು ಹೋರಾಟಗಳನ್ನು ಸ್ಮರಿಸಿದರು. ಕೇರಳದಲ್ಲಿ ಇಂದು ಸಂಪೂರ್ಣ ಸಾಕ್ಷರತೆ ಇರಲು ಕಾಂ.ನಾಯನಾರ್ ಸರಕಾರದ ಕಾರ್ಯಕ್ರಮಗಳು ಎಂದ ಅವರು, ಅವರಿಗೆ ಹೆಗಲನ್ನು ಕೊಟ್ಟ ಅವರ ಕುಟುಂಬ ಸದಸ್ಯರ ತ್ಯಾಗವನ್ನು ಸ್ಮರಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯವರಾದ ಕಾಂ.ಎನ್.ಎಸ್.ಪ್ರಭಾಕರ್ ಆಧುನಿಕ ಕೇರಳ ನಿರ್ಮಾಣದಲ್ಲಿ ಕಾಂ. ಇ.ಎಂ.ಎಸ್, ಕಾಂ.ಎ.ಕೆ.ಜಿ ಯವರಷ್ಟು ಮಹತ್ತರ ಪಾತ್ರವನ್ನು ಕಾಂ.ನಾಯನಾರ್ ನಿರ್ವಹಿಸಿದರು ಎಂದರು. ಮೈಸೂರಿಗೆ ಕಾಂ.ನಾಯನಾರ್ ಬೇಟಿಯ ಸಂದರ್ಭ ಅವರು ಪಕ್ಷದ ಸದಸ್ಯರೊಂದಿಗೆ ಕಳೆದ ಸಮಯವನ್ನು ನೆನಪಿಸಿಕೊಂಡ ಕಾಂ.ಪ್ರಭಾಕರ್, ಭಾರತದ ಕಮ್ಯೂನಿಸ್ಟ್ ಚಳುವಳಿಯ ಅಗ್ರಪಂಕ್ತಿಯ ನಾಯಕರಲ್ಲಿ ಕಾಂ.ನಾಯನಾರ್ ಸಹ ಒಬ್ಬರು ಎಂದರು.

ಸಭೆಯು ನಾಯನಾರ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ತನ್ನ ಸಂತಾಪ ಸೂಚಿಸಿತು.

ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಸದಸ್ಯರುಗಳು, ದೇಶಾಭಿಮಾನಿ ಓದುಗರ ವೇದಿಕೆಯ ಸದಸ್ಯರುಗಳು, ಕಾರ್ಮಿಕರು ಭಾಗವಹಿಸಿದ್ದರು.

ಕಾಂಗ್ರೆಸ್ - ಜನತಾದಳ(ಎಸ್) ಸರ್ಕಾರ


ಜನಾದೇಶ ಮೀರದಂತೆ ಎಚ್ಚರ ಅಗತ್ಯ


ಮುಖ್ಯಮಂತ್ರಿಯಾಗಿ ಧರ್ಮಸಿಂಗ್, ಉಪಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಶುಕ್ರವಾರ ಪ್ರಮಾಣ ವಚನ ಸ್ವೀಕರಿಸುವುದರೊಂದಿಗೆ ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಮೈತ್ರಿಕೂಟದ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಈ ಮೂಲಕ ಮೇ 13 ರಂದೇ ಪ್ರಕಟಗೊಂಡ ಚುನಾವಣಾ ಫಲಿತಾಂಶದ ಬಳಿಕ್ಷ ಉಂಟಾಗಿದ್ದ ದೀರ್ಘಕಾಲದ ಗೊಂದಲ, ಅನಿಶ್ಚತತೆ ಕೊನೆಗೊಂಡಿದೆ. ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾದಳದ ಮೈತ್ರಿಕೂಟದ ಸರ್ಕಾರದಲ್ಲಿ ಸಚಿವಸಂಪುಟ ರಚನೆಯಾಗಬೇಕು. ಅದೂ ಒಂದೆರೆಡು ದಿನಗಳಲ್ಲಿ ಪೂರ್ಣಗೊಳ್ಳಬಹುದು. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಟ್ಟು, ಜಾತ್ಯತೀತ ಸರ್ಕಾರವನ್ನು ಅಧಿಕಾರಕ್ಕೆ ತರಬೇಕೆಂಬ ಕಾಂಗ್ರೆಸ್ ಮತ್ತು ಜನತಾದಳ(ಎಸ್) ನ ಪ್ರಯತ್ನ ಈ ಹಂತದಲ್ಲಿ ಸಫಲವಾಗಿದೆ. ಮುಖ್ಯಮಂತ್ರಿ ಸ್ಥಾನ ಯಾವ ಪಕ್ಷಕ್ಕೆ ಬಿಡಬೇಕೆಂಬ ಪ್ರಶ್ನೆ ಇತ್ಯರ್ಥಗೊಳ್ಳುತ್ತಿದ್ದಂತೆಯೇ ಸಚಿವ ಸಂಪುಟ, ಮುಖ್ಯವಾದ ಮಂತ್ರಿ ಖಾತೆಗಳೂ ಪರಸ್ಪರ ಹಂಚಿಕೆಯಾಗಿದೆಯೆಂದೂ ಹೇಳಲಾಗಿದೆ.

ಹಲವಾರು ಕಸರತ್ತುಗಳ ಬಳಿಕವಾದರೂ ಕರ್ನಾಟಕದ ಆಡಳಿತವನ್ನು ಕೋಮುವಾದಿ ಶಕ್ತಿಗಳಿಗೆ ಒಪ್ಪಿಸದೇ, ಅದನ್ನು ದೂರವಿಟ್ಟು ಜಾತ್ಯತೀತ (ಸೆಕ್ಯುಲರ್) ಸರ್ಕಾರ ರಚನೆಗೊಂಡುದುದು ಸ್ವಾಗತಾರ್ಹ ಬೆಳವಣಿಗೆ. ಅಧಿಕಾರ ಹಿಡಿಯಲು ಹವಣಿಸಿದ್ದ ಬಿಜೆಪಿ - ಜೆಡಿ(ಯು) ನ ಕೋಮುವಾದಿ ಮೈತ್ರಿಕೂಟದ ನಾಯಕರು ಜನಾದೇಶವನ್ನು ಧಿಕ್ಕರಿಸಲಾಗಿದೆಯೆಂದೂ, ಇದು ಅಪವಿತ್ರ ಮೈತ್ರಿಯೆಂದೂ ಬೊಬ್ಬೆ ಹಾಕುತ್ತಿದ್ದಾರೆ. ನಿಲುಕದ ದ್ರಾಕ್ಷಿ ಹುಳಿಹುಳಿ ಎಂಬುದೇ ಬಿಜೆಪಿಯ ಪ್ರಚಾರದ ವೈಖರಿ.

ಜನಾದೇಶವೇನು?

ಈ ವಿಧಾನಸಭಾ ಚುನಾವಣೆಯಲ್ಲಿ ಯಾವೊಂದು ಪಕ್ಷಕ್ಕೆ ಸ್ವಂತ ಬಲದ ಮೇಲೆ ಸರ್ಕಾರ ರಚಿಸಲು ಜನತೆ ಅನುವು ಮಾಡಿಲ್ಲ. ಯಾವ ಪಕ್ಷಕ್ಕೂ ಬಹುಮತವಿಲ್ಲ. ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಜನವಿರೋಧಿ ನೀತಿಗಳನ್ನು ಜನತೆ ತಿರಸ್ಕರಿಸಿದೆ. ಅದೇ ಸಂದರ್ಭದಲ್ಲಿ ಇದರ ಲಾಭವನ್ನು (ಜನ ಪರ್ಯಾಯವಾಗಿ ಕಂಡದ್ದು) ಬಿಜೆಪಿ ಹಲವಡೆ ಪಡೆದಿದೆ. ಅದಕ್ಕೆ 79, ಮೈತ್ರಿ ಪಕ್ಷ ಜೆಡಿ(ಯು)ಗೆ 5 ನೀಡಿತಾದರೂ ಈ





ಕೋಮುವಾದಿ ಕೂಟದ ಕೈಗೆ ಅಧಿಕಾರ ನೀಡಲು ಜನತೆ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿ(ಎಸ್) ನಡುವೆ ಸ್ಪರ್ಧೆ ಏರ್ಪಟ್ಟಿದ್ದರೂ ಇಬ್ಬರಿಗೂ ಸಾಮಾನ್ಯವಾದ ಎದುರಾಳಿ ಬಿಜೆಪಿ ಕೂಟವಾಗಿತ್ತು. ಕೋಮುವಾದಿ ಕೂಟವನ್ನು

> **ಈ ವಾರ ಕರ್ನಾಟಕ**
> ಒಂದು ನೋಟ
> **ಎಸ್.ವೈ.ಗುರುಶಾಂತ್**

ನಿರಕಾರಿಸಿದ ಹಿನ್ನಲೆಯಲ್ಲಿ, ಸೆಕ್ಯುಲರ್ ಸರ್ಕಾರದ ರಚನೆಗೆ ಜನತೆಯು ನೀಡಿದ ಆದೇಶವಾಗಿತ್ತು. ಆದಾಗ್ಯೂ ಹಲವು ಕುತಂತ್ರಗಳಿಂದ ಸರ್ಕಾರ ರಚಿಸಲು ಬಿಜೆಪಿ ಕೂಟ ಯತ್ನಿಸಿತಾದರೂ ಯಶಸ್ವಿಯಾಗಲಿಲ್ಲ. ಓಗಾಗಿ ಕಾಂಗ್ರೆಸ್ ಮತ್ತು ಜನತಾದಳ(ಎಸ್)ನ ಮೈತ್ರಿ ಸರ್ಕಾರ ರಚಿತಗೊಳ್ಳುವ ಅನಿವಾರ್ಯತೆ (ಕಾಂಗ್ರೆಸ್ 65 ಜೆಡಿಎಸ್ 58) ಬಂದೊದಗಿದೆ. ಜನತೆ ನೀಡಿದ ಒಟ್ಟು ರಾಜಕೀಯ ಸಂದೇಶದಂತೆ ಕಾಂಗ್ರೆಸ್ ಸರ್ಕಾರದ ನೇತೃತ್ವ ವಹಿಸದೇ ಜನತಾದಳ(ಎಸ್)ಗೆ ಅವಕಾಶ ಬಿಡಬೇಕಾಗಿತ್ತು. ಆದರೆ ಇದಕ್ಕೆ ಒಪ್ಪದೇ ಮುಖ್ಯಮಂತ್ರಿ ಸ್ಥಾನ ತನಗೇ ಸಿಗಬೇಕೆಂದು ಕಾಂಗ್ರೆಸ್ ಪಟ್ಟು ಹಿಡಿದು ಕೂತಿದ್ದು ಸಮರ್ಥನೀಯವಲ್ಲ. ರಾಜ್ಯದಲ್ಲಿ ಸರ್ಕಾರವೇ ರಚನೆಗೊಳ್ಳದೆ, ಮತ್ತೊಂದು ಚುನಾವಣೆಗೆ ಹೋಗಬೇಕಾದೀತೆ-ಅದೂ ಸಾಧ್ಯವಿಲ್ಲ ಎಂಬಂತಹ ಸ್ಥಿತಿಯಲ್ಲಿ ಈಗಿನ ಸೂತ್ರ ಅನಿವಾರ್ಯವಾಗಿದೆ.

ಜನಾದೇಶ ಉಲ್ಲಂಘಿಸುವಿರೋ, ಎಚ್ಚರ!

ಅಂತೂ ಸರ್ಕಾರ ರಚನೆಯಾಗಿದೆ. ಈ ಹೊಸ ಮೈತ್ರಿಕೂಟದ ಸರ್ಕಾರ ಹೇಗೆ ಕೆಲಸ ಮಾಡುತ್ತದೆ ಎಂದು ಜನತೆ ನಿರೀಕ್ಷಿಸುತ್ತಿದ್ದಾರೆ. ಕಾಂಗ್ರೆಸ್‌ನ ಮುಖ್ಯಮಂತ್ರಿ ಇದ್ದರೂ ಹಿಂದಿನ ಕೃಷ್ಣರ ಸರ್ಕಾರದಂತೆ ಅಲ್ಲ, ಒಂದು ಭಿನ್ನವಾದ ಸಂದರ್ಭ ಎಂಬುದನ್ನು ಧರಂಸಿಂಗ್ ಒಳಗೊಂಡು ಎಲ್ಲರೂ ಗಮನಿಸಬೇಕು. ಜಾಗತೀಕರಣ-ಉದಾರೀಕರಣದ ಆರ್ಥಿಕ ನೀತಿಗಳನ್ನಪ್ಪಿ ವಿಶ್ವಬ್ಯಾಂಕ್ ನಿರ್ದೇಶನಗಳನ್ನು ಜಾರಿಗೆ ತಂದು ಜನತೆಗೆ ಅಪಾರವಾದ ಸಂಕಷ್ಟಗಳ ಹೊರೆ ಹೇರಿದ್ದ, ಸಿಇಓ ಮಾದರಿಯ ಜನದ್ರೋಹಿ ನೀತಿಗಳನ್ನು ಜನ ಧಿಕ್ಕರಿಸಿದ್ದಾರೆ. ತಮ್ಮ ಕೇಳಿಕೆಗಳನ್ನು ಮಂಡಿಸಿದರೆ ದಮನಿಸುವ, ದಲಿತ,ಮಹಿಳೆ, ದುರ್ಬಲರ ಮೇಲೆ ದುರಾಕ್ರಮಣ ಮಾಡುವುದನ್ನು ಪ್ರತಿಭಟಿಸಿದ್ದಾರೆ. ಕೋಮುವಾದಿಗಳ ಕುಕೃತ್ಯ, ಕೋಮುವಾದಿ ದಳ್ಳುರಿ ಹಬ್ಬಿಸುವ ಪಿತೂರಿಗಳಿಗೆ ಧಿಕ್ಕಾರ ಹೇಳಿದ್ದಾರೆ ಮಾತ್ರವಲ್ಲ, ಕೋಮುವಾದಿಗಳೊಂದಿಗೆ ರಾಜೀ ಧೋರಣೆ ಅನುಸರಿಸಿದ, ಮೃದು ಹಿಂದುತ್ವ ನಿಲುವು ತಳೆದ ಕಾಂಗ್ರೆಸ್ ಸರ್ಕಾರದ ಆಡಳಿತಾತ್ಮಕ - ರಾಜಕೀಯ ಕ್ರಮಗಳನ್ನು, ನಿಷ್ಕ್ರಿಯತೆಯನ್ನು ಜನತೆ ಸಹಿಸಿಲ್ಲ. ಹೀಗೆ ಒಟ್ಟಾರೆಯಾಗಿ ಈ ನೂತನ ಮೈತ್ರಿಕೂಟದ ಸರ್ಕಾರ ನಾಡಿನ ಜನಾದೇಶಕ್ಕೆ ಬದ್ಧವಾಗಿ ಕೆಲಸ ಮಾಡಬೇಕು. ಇದರ ಅಂತಃಸತ್ವದ ಕಾರ್ಯಸೂಚಿಯನ್ನು ರೂಪಿಸಿ ಹೋರಾಡಬೇಕು. ಮಂತ್ರಿ ಹುದ್ದೆ-ಖಾತೆ, ಸ್ಥಾನಗಳ ಹಂಚಿಕೆಗೆ ಕಿತ್ತಾಡುವ ಅಥವಾ 'ಹೋರಾಡು'ವುದಕ್ಕಿಂತ ಈ ಗಂಭೀರ ಪ್ರಶ್ನೆಗಳ ಸುತ್ತ ಈ ಸರ್ಕಾರ ಬೆಳೆಸುವ, ಎಚ್ಚರಿಸುವ - ನಡೆಯುವಂತೆ ನೋಡಿಕೊಳ್ಳುವ ಹೊಣೆ ಜನತಾದಳ(ಎಸ್)ನ ಮೇಲೂ ಇದೆ. ಒಂದು ಭಿನ್ನವಾದ ಜನಪರ ಸರ್ಕಾರವಾಗಿ ಹಿಂದಿನ ದಿವಾಳಿಕೋರ ನೀತಿಗಳನ್ನೇ ಮುಂದುವರಿಸಿದಲ್ಲಿ ಜನತೆ ತಕ್ಕಪಾಠವನ್ನು ಕಲಿಸುತ್ತಾರೆ ಎಂಬ ಎಚ್ಚರ ಎಲ್ಲಾ ಪ್ರಗತಿಪರರದ್ದು, ಎಡಶಕ್ತಿಗಳದ್ದು. ಆದ್ದರಿಂದ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ರೂಪಿಸುವಾಗ ಇವೆಲ್ಲ ಅಂಶಗಳನ್ನು ಗಮನಹರಿಸಿಕೊಳ್ಳಬೇಕು.

ಕೋಮುವಾದಿಗಳ ಅಪಾಯ - ಹೆಜ್ಜೆಹೆಜ್ಜೆಗೂ:

ಈ ಸರ್ಕಾರದ ವೈಫಲ್ಯ, ಕೊರತೆಗಳನ್ನು ಬಳಸಿ ಕೋಮುವಾದಿ ಬಿಜೆಪಿ ಕೂಟ ಮೇಲೇರಲು ಹವಣಿಸುತ್ತದೆ. ತೀವ್ರ ಧಾಳಿಯನ್ನು ನಡೆಸುವ ಮೂಲಕ ತಾನೇ ನಿಜವಾದ ಪರ್ಯಾಯವೆಂದು ಜನತೆಯ ನಡುವೆ ಬಿಂಬಿಸುವ, ನಂಬಿಸುವ ಗಂಭೀರವಾದ ಅಪಾಯ ಕಣ್ಣೆದುರೇ ಇದೆ.

ಸಿಪಿಐ(ಎಂ) ಪಾತ್ರ: ಈ ವಿಶಿಷ್ಟ ಸಂದರ್ಭದಲ್ಲಿ ಶಾಸನ ಸಭೆಯಲ್ಲಿ ಸಿಪಿಐ(ಎಂ) ಒಂದು ಸ್ಥಾನ ಪಡೆದು ಪ್ರಾತನಿಧ್ಯ ಹೊಂದಿದ್ದು ಜನತೆಯ ಆಶೋತ್ತರಗಳನ್ನು ಸದಾ ಕಾಯಲು, ಎತ್ತಿ ಹಿಡಿದು ಹೋರಾಡುವ ಪ್ರಮುಖ ಪಾತ್ರ ನಿರ್ವಹಿಸಲಿದೆ. ಮುಂದಿನ ವಾರ ಪ್ರಕಟವಾಗುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಸರ್ಕಾರದ ಮುಂದಿನ ಹಾದಿಯ ಸೂಚಿಯಾಗುತ್ತದೆ, ಕಾದುನೋಡೋಣ.

ಪಕ್ಷಾಂತರಿಗಳಿಗೆ ಒಳ್ಳೆಯ ಪಾಠ.....

ಚುನಾವಣೆಯ ಬಿಸಿ ಸಾವಕಾಶ ತಗ್ಗುತ್ತಿದೆ. ಅವಧಿಗೆ ಮುನ್ನ ಸುರಿದ ಮಳೆ... ರೈತರೆಲ್ಲಾ ಹೊಲಕ್ಕಿಳಿಯಬೇಕಾದ ಅನಿವಾರ್ಯತೆ... ಮಕ್ಕಳನ್ನು ಶಾಲೆಗೆ ಸೇರಿಸುವ ಗಡಿಬಿಡಿ.... ಯಥಾಪ್ರಕಾರ ಮುಂದುವರಿದ ಮೀನುಗಾರರ ಸಂಕಷ್ಟ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತೆ ನಿರೀಕ್ಷೆಗಳು ಸಾವಕಾಶ ಮೊಳಕೆಯೊಡೆಯತೊಡಗಿದೆ.

ಹಾಗೆಂದ ಮಾತ್ರಕ್ಕೆ ಚುನಾಣೆಯ ಸುದ್ದಿಯೇ ಇಲ್ಲ ಎಂದಲ್ಲ. ಸ್ವಾರಸ್ಯಕರವಾದ ಚರ್ಚೆ ನಡೆಯುತ್ತಿರುವುದು ಈ ಪಕ್ಷಾಂತರಿಗಳ ಬಗ್ಗೆ. ಅವರಲ್ಲಿ ಕೆಲವರು ಒಂದು ಪಕ್ಷದಲ್ಲಿ ಸೀಟು ಸಿಗಲಿಲ್ಲ ಎಂದು ಹೋದರೆ, ಇನ್ನು ಕೆಲವರು ಗೆಲ್ಲುವ ಪಕ್ಷದಲ್ಲಿ ಏನಾದರೂ ಲಾಭ ಆಗಬಹುದು ಎಂದು ಹೋದವರು, ಇನ್ನು ಕೆಲವರು ಆರ್ಥಿಕ ಮುಗ್ಗಟ್ಟನ್ನು ನೀಗಿಸಿಕೊಳ್ಳಲು ಹೋದವರು. ಆದರೆ ಉ.ಕ. ಜಿಲ್ಲೆಯಲ್ಲಿ ಹೀಗೆ ಹೋದ ಅನೇಕರು ಜನರ ನಗೆಚಾಟಿಕೆಯ ವಸ್ತುವಾಗಿದ್ದಾರೆ.

ಚುನಾವಣೆಗೆ ಒಂದೆರೆಡು ತಿಂಗಳು ಇರುವಾಗಲೂ ಜಾತ್ಯತೀತ ಜನತಾದಳದ ರಾಜ್ಯ ಉಪಾಧ್ಯಕ್ಷರಾಗಿದ್ದ ಆರ್.ಎಸ್.ನಾಯ್ಕ ಕಾಂಗ್ರೆಸ್‌ಗೆ ಹಾರಿದರು. ಕಾಂಗ್ರೆಸ್ ಅತಿಭ್ರಷ್ಟ ಎಂದೆಲ್ಲಾ ಹಿಗ್ಗಾಮುಗ್ಗ ಬೈಯುತ್ತಿದ್ದ ನಾಯ್ಕರು ಮಾಜಿ ಸಚಿವರೂ ಹೌದು. ಅಲ್ಲಿ ಎಂಎಲ್‌ಎ ಸೀಟು ಸಿಗದಿದ್ದಾಗ ಜಾತ್ಯಾತೀತಕ್ಕೆ ಬಂದವರು. ನಂಬಿಕೆಗೆ ಅರ್ಹರಿರಬಹುದೆಂದು ದೇವೇಗೌಡರು ರಾಜ್ಯ ಉಪಾಧ್ಯಕ್ಷರನ್ನಾಗಿಸಿದರು. ಆದರೆ ಭಟ್ಕಳ ಕ್ಷೇತ್ರದಲ್ಲಿ ಚುನಾವಣಾ ಸೀಟು ಸಿಗದಿದ್ದಾಗ ಕಾಂಗ್ರೆಸ್‌ಗೆ ಮತ್ತೆ ಹಾರಿದರು. ಅಲ್ಲಿ ಸೀಟು ಸಿಗದಿದ್ದರೂ ತೊಂದರೆ ಇಲ್ಲ. ಕಾಂಗ್ರೆಸ್ ರಾಜ್ಯದಲ್ಲಿ ಆಡಳಿತಕ್ಕೆ ಬರಬಹುದೆನ್ನುವ ಲೆಕ್ಕಾಚಾರ ಇತ್ತು. ಆದರೆ ಲೆಕ್ಕಾಚಾರ ತಪ್ಪಿಹೋಗಿ ಮತ್ತೆ ನಿರರ್ಥಕವಾಯಿತು.

ದಾಮೋದರ ಹರ್ಡಿಕರ ತೀರಾ ಹಿಂದಿನಿಂದ ಭಟ್ಕಳದಲ್ಲಿ ರಾಜಕಾರಣ ನಡೆಸಿದವರು. ರಾಮಕೃಷ್ಣ ಹೆಗಡೆಯವರ ಹೆಸರು ಹೇಳಿಕೊಂಡು ಜಿಲ್ಲೆಯ ಎಲ್ಲಾ ನಾಯಕರು ನವ ನಿರ್ಮಾಣ, ಲೋಕಶಕ್ತಿ, ಸಂಯುಕ್ತ ಎಂದೆಲ್ಲಾ ಗುಳೆ ಎದ್ದು ಹೊರಟಾಗ ಹರಡೀಕರ ಗಟ್ಟಿಯಾಗಿ ಜಾತ್ಯತೀತ ದಳದೊಂದಿಗೆ ನಿಂತವರು. ಅಲ್ಲಿಂದಲೇ ಹಿಂದೆಲ್ಲಾ ಚುನಾವಣೆಗೆ ನಿಂತು ಸೋತವರು. ಆದರೆ ಈಗ ಚುನಾವಣೆಗೆ ನಾಲ್ಕು ದಿನಗಳು ಇರುವಾಗ ಜೆಡಿಎಸ್ ಬಿಟ್ಟು ಕಾಂಗ್ರೆಸ್ ಗೆ ಹಾರಿದರು. 'ಜೆಡಿಎಸ್ ನೀತಿ ಸರಿ ಇಲ್ಲ, ಕಾಂಗ್ರೆಸ್ ಪರವಾಗಿಲ್ಲ' ಎನ್ನುವ ಘೋಷಣೆಗೆ ಜನ ಕೇಳಿದರು 'ಇಷ್ಟು ದಿನ ಇವರಿಗೆ ಗೊತ್ತಾಗದ ಸತ್ಯ ಚುನಾವಣೆಗೆ ನಾಲ್ಕು ದಿನ ಇರುವಾಗ ದಿಢೀರನೆ ಅರಿವಾದದ್ದು ಹೇಗೆ? ಬೇರೆ ಇನ್ನೇನೋ ಕಾರಣವಿರಬೇಕು' ಎಂದರು. ಮರುದಿನವೇ ಪತ್ರಿಕೆಯಲ್ಲಿ ಯಶೋಧರ ನಾಯ್ಕ (ಜೆಡಿಎಸ್‌ನಿಂದ ಭಟ್ಕಳ ಕ್ಷೇತ್ರದ ಸೋತ ಅಭ್ಯರ್ಥಿ) ಹಣಕ್ಕಾಗಿ ದುಂಬಾಲು ಬಿದ್ದಿದ್ದು ನಾಲ್ಕು ಲಕ್ಷ ರೂ ಗಳನ್ನು ಹರ್ಡಿಕರ್ ಅವರು ಹಾರಿದ ಹಿಂದಿನ ಉದ್ದೇಶ ಪ್ರಕಟಿಸಿದರು. ಹರ್ಡೀಕರ ಅವರಿಗೆ ಮಾಡಿದ ಸಾಲ ತೀರಿಸುವಲ್ಲಿ ಒಂದು ಸಮಸ್ಯೆಯಾಗಿದೆ ಎಂದು ಜನ ಹೇಳುತ್ತಿದ್ದಾರೆ. ಅದು ಏನೇ ಇರಲಿ, ಭಟ್ಕಳ ಕ್ಷೇತ್ರದಲ್ಲಿ ಕಾಂಗ್ರೆನ ಜೆ.ಡಿ.ನಾಯ್ಕ ಅವರು ಸೋತು ಹರ್ಡೀಕರ ಮತ್ತೆ ಅತಂತ್ರರಾದರು.

ಘಟ್ಟದ ಮೇಲೆ ಬಂದರೆ ಸಿಗುವವರು ಮಾಜಿ ಸಚಿವ ಪ್ರೇಮಾನಂದ ಜೈವಂತ. ಅನೇಕ ದಿನಗಳಿಂದ ಜೆಡಿಎಸ್‌ನಲ್ಲಿದ್ದು, ದೇಶಪಾಂಡೆಯವರಿಗೆ ವಾಚಾಮಗೋಚರ ಬೈಯುತ್ತಿದ್ದ ಅವರು ಸಿದ್ದಾಪುರ ಕ್ಷೇತ್ರದಲ್ಲಿ ಸೀಟು ಸಿಗುತ್ತಿಲ್ಲ ಎನ್ನುವ ಕಾರಣಕ್ಕೋ ಅಥವಾ ಜಿಲ್ಲಾ ಸಮಿತಿಯ ಮೇಲಿನ ವೈಮನಸ್ಸಿನಿಂದಲೋ ಜೆಡಿಎಸ್‌ನೊಂದಿಗೆ ಭಿನ್ನಾಭಿಪ್ರಾಯ ಹೊಂದಿ ನಾಮಪತ್ರ ಕೊಡುವ ದಿನ ಕಾಂಗ್ರೆಗೆ ಸೇರಿದರು. ಸೀಟು ಸಿಗಲಿಲ್ಲವೆಂದು ಜೆಡಿಎಸ್ ಅಪತ್ಯವಾಗಿ, ಕಾಂಗ್ರೆಸ್‌ನಲ್ಲಿ ಗೆದ್ದೆ ಬಿಡುವೆನೆಂದು ಓಡಾಡಿ ಕೊನೆಗೂ ಬಿಜೆಪಿ ಕೈಯಿಂದ ಚುನಾವಣೆಯಲ್ಲಿ ಸೋತು ಕುಳಿತಿದ್ದಾರೆ. ಇನ್ನು ದೊಡ್ಡ ಹಂತದಲ್ಲಿ ಕಾಂಗ್ರೆಸ್ಸಿಗೆ ಗುಳೆ ಹೋಗಿದ್ದು ಸಂಯುಕ್ತ ಜನತಾದಳದ ಮುಖಂಡರು. ಯಲ್ಲಾಪುರದ ಪ್ರಮೋದ ಹೆಗಡೆಯವರ ನೇತೃತ್ವದಲ್ಲಿ ದೊಡ್ಡ ಗುಂಪು ಕಾಂಗ್ರೆಸ್ಸಿಗೆ ಹೋಯಿತು. ಅವರು ಮುಖ್ಯವಾಗಿ ಯಲ್ಲಾಪುರ, ಸಿರ್ಸಿಗಳಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸುವ ಪ್ರಯತ್ನದಲ್ಲಿ ಕೈಸೋತರು. ಅನೇಕ ವರ್ಷಗಳಿಂದ ಪ್ರಮೋದ ಹೆಗಡೆ ಕಾಂಗ್ರೆ ವಿರೋಧಿ ಪಾಳೆಯದಲ್ಲಿ ಇದ್ದವರು. ದೇಶಪಾಂಡೆ ಬಿಟ್ಟು ಓಡಿದಾಗಲೂ ಅವರು ಕಾಂಗ್ರೆಸ್ಸಿಗೆ ಹೋಗಿರಲಿಲ್ಲ. (ಆಗಲೇ ಹೋಗಿದ್ದರೆ ಏನಾದರೂ ಪ್ರಯೋಜನ ಆಗುತ್ತಿತ್ತೇನೋ?). ಜಿಲ್ಲೆಯ ರಾಜಕಾರಣದಲ್ಲಿ ಒಂದಿಷ್ಟು ಹೆಸರನ್ನು ಉಳಿಸಿಕೊಂಡವರು. ಹೆಗಡೆಯವರು ಇದ್ದಾಗಲೇ ಜಾತ್ಯತೀತ ದಳಕ್ಕೆ ಹೋಗಲು ಹೊರಟವರು ಮತ್ತೆ ಹಿಂದೇಟು ಹಾಕಿ, ಈಗ ದಶಕಗಳಿಂದ ಬೈದಾಡುತ್ತಿದ್ದ ಕಾಂಗ್ರೆಗೆ ಹೋಗಿ ಜಿಲ್ಲಾ ವಕ್ತಾರರೂ ಆದರು. ಒಮ್ಮೆ ಹೊಂದಾಣಿಕೆಯ ನೆಪದಲ್ಲಿ ಕೋಮುವಾದಿ ಬಿಜೆಪಿಯನ್ನು ಬೆಂಬಲಿಸಿ ಈಗ ಕಾಂಗ್ರೆಗೆ ಬಂದು ತತ್ವರಹಿತ ರಾಜಕಾರಣಿಗಳ ಯಾದಿಗೆ ಸೇರಿದರು. ತಾವು ಮಾಡಿದ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ 'ಈಗ ಕಮ್ಯುನಿಸ್ಟರೂ ತಮ್ಮ ಕಮ್ಯುನಿಸ್ಟ್ ತತ್ವದಿಂದ ದೂರ ಸರಿಯುತ್ತಿದ್ದಾರೆ'

ಪುಟ 10 ಕ್ಕೆ

ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಭೀಕರ ಬರ ಆವರಿಸಿಕೊಂಡಿದ್ದರೂ ಬರ ಪರಿಹಾರ ಕಾಮಗಾರಿಗಳು ನಡೆಯಲಿಲ್ಲ. ಬರ ಪೀಡಿತ ಜನ ಗುಳೆ ಹೋಗುವುದು ನಿಲ್ಲಲಿಲ್ಲ. ಏಕೆ ? ಕೂಲಿಗಾಗಿ ಕಾಳು ಹೊರಟಿತ್ತು ಆಫ್ರಿಕಾದತ್ತ, ಖದೀಮರು ಹೊರಟಿದ್ದಾರೆ ಜೈಲಿನತ್ತ

ಅಕ್ಕಿ ಕದ್ದು ಸಿಕ್ಕಿ ಬಿದ್ದವರು

ಮಂಗಳೂರಿನ ನಾಲ್ಕು ಖಾಸಗಿ ಉಗ್ರಾಣಗಳಲ್ಲಿ ದಾಸ್ತಾನು ಮಾಡಿ ಇಡಲಾಗಿದ್ದ ಸುಮಾರು 9.98 ಕೋಟಿ ರೂ. ಮೌಲ್ಯದ 1,66,100 ಕ್ವಿಂಟಾಲ್ ಅಕ್ಕಿಯನ್ನು ಇತ್ತೀಚೆಗೆ ವಶಪಡಿಸಿಕೊಳ್ಳುವ ಮೂಲಕ ರಾಜ್ಯದಲ್ಲಿ ಬರ ಪರಿಹಾರದ 'ಕೂಲಿಗಾಗಿ ಕಾಳು' ಯೋಜನೆಗೆಂದು ಬಿಡುಗಡೆಯಾದ ಅಕ್ಕಿಯನ್ನು ಅಕ್ರಮವಾಗಿ ವಿದೇಶಕ್ಕೆ ಮಾರಾಟ ಮಾಡಲು ಯತ್ನಿಸುತ್ತಿದ್ದ ಜಾಲವೊಂದನ್ನು ಭೇದಿಸಲಾಗಿದೆ. ಮಂಗಳೂರಿನ ಸಹಾಯಕ ಆಯುಕ್ತ ಪ್ರಭಾಕರ ಶರ್ಮಾ ಮತ್ತು ಆಹಾರ ಹಾಗೂ ನಾಗರೀಕ ಪೂರೈಕೆ ಇಲಾಖೆಯ ಉಪನಿರ್ದೇಶಕಿ ವಿಜಯ ಲಕ್ಷ್ಮಿ ನೇತೃತ್ವದ ತಂಡ ಇಲ್ಲಿನ ಶಕ್ತಿನಗರ ಮತ್ತು ಬೈಕಂಪಾಡಿ ಕೈಗಾರಿಕಾ ಪ್ರದೇಶದ ನಾಲ್ಕು ಬೃಹತ್ ಉಗ್ರಾಣಗಳ ಮೇಲೆ ದಾಳಿ ನಡೆಸಿ ಭಾರೀ ಪ್ರಮಾಣದ ಅಕ್ಕಿ ದಾಸ್ತಾನನ್ನು ಮುಟ್ಟುಗೋಲು ಹಾಕಿದೆ. ಶಕ್ತಿನಗರದ ಕಾಮತ್ ಗೇರು ಬೀಜದ ಕಾರ್ಖಾನೆಯ ಎರಡು ಉಗ್ರಾಣಗಳಲ್ಲಿ 51 ಲಕ್ಷ ರೂ. ಬೆಲೆಯ 8,600 ಕ್ವಿಂಟಾಲ್ ಅಕ್ಕಿ ದೊರೆತಿದ್ದರೆ, ಎನ್.ಎಂ. ಪಿ.ಟಿ. ಉಗ್ರಾಣದಲ್ಲಿ 5.58 ಕೋಟಿ ರೂ. ಮೌಲ್ಯದ 93 ಸಾವಿರ ಕ್ವಿಂಟಾಲ್ ಅಕ್ಕಿಯು ಸಿಕ್ಕಿದೆ. ಬೈಕಂಪಾಡಿಯ ಸೋಮಯಾಜಿ ಉಗ್ರಾಣದಲ್ಲಿ 3.63 ಕೋಟಿ ರೂ. ಬೆಲೆಯ 60,500 ಕ್ವಿಂಟಾಲ್ ಅಕ್ಕಿ ದೊರೆತಿದ್ದರೆ ಕೇನ್‌ವೀಲ್ ಗೇರು ಬೀಜ ಕಾರ್ಖಾನೆಯ ಉಗ್ರಾಣದಲ್ಲಿ 26 ಲಕ್ಷ ರೂ. ಮೌಲ್ಯದ ನಾಲ್ಕು ಸಾವಿರ ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿದೆ.

ಶಕ್ತಿನಗರದ ಎರಡು ಉಗ್ರಾಣಗಳನ್ನು ಹಾಸನದ ಗುರುರಾಜ ರೈಸ್ ಮಿಲ್ಸ್ ಹೆಸರಲ್ಲಿ ತಿಂಗಳಿಗೆ 20 ಸಾವಿರ ರೂ. ಬಾಡಿಗೆಗೆ ಪಡೆಯಲಾಗಿತ್ತು ಎಂದು ತಿಳಿದು ಬಂದಿದೆ. ಸೋಮಯಾಜಿ ಉಗ್ರಾಣವನ್ನು ಡಿಲ್ಲಿ ಮೂಲದ ಮಿತ್ತಲ್ ಸಂಸ್ಥೆ ಬಾಡಿಗೆಗೆ ಪಡೆದಿತ್ತು. ಎನ್.ಎಂ.ಪಿ.ಟಿ. ಉಗ್ರಾಣದಲ್ಲಿ ಎಸ್.ಎಸ್.ಮೆರ್ರಿಟೈಂ ಹೆಸರಿನ ಶಿಪ್ಪಿಂಗ್ ಸಂಸ್ಥೆ ಅಕ್ಕಿ ದಾಸ್ತಾನು ಮಾಡಿತ್ತು. ಕೆನ್‌ವೆಲ್ ಉಗ್ರಾಣದಲ್ಲಿ ದೊರೆತ ಅಕ್ಕಿ ಚೀಲಗಳು ಫರೀದ್‌ಕೋಟ್ ಜಿಲ್ಲೆಯ ಕೋಟ್‌ಕಾಪುರದ ಯೂನೀಕ್ ರೈಸ್ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯ ಲೇಬಲ್ ಹೊಂದಿವೆ. ಈ ಲೇಬಲ್‌ಗಳು ನಕಲಿ ಅಥವಾ ಅಸಲಿ ಎನ್ನುವುದು ಇನ್ನು ನಿರ್ಧಾರವಾಗಬೇಕಾಗಿದೆ.



ಹಗರಣದ ಕೇಂದ್ರ ಬಿಂದು ಹಾಸನ:

ಈ ಬಹುಕೋಟಿ ರೂ.ಹಗರಣದ ಕೇಂದ್ರಬಿಂದು ಹಾಸನ ಆಗಿರುವ ಎಲ್ಲ ಸಾಧ್ಯತೆಗಳಿವೆ. ಇಲ್ಲಿನ ಗುರುರಾಜ ರೈಸ್ ಮಿಲ್‌ಗೆ ಗುಜರಾತ್‌ನಿಂದ ಒಳ್ಳೆಯ ರಫ್ತು ಗುಣಮಟ್ಟದ ಒಟ್ಟು 50 ಸಾವಿರ ಪ್ಲಾಸ್ಟಿಕ್ ಚೀಲಗಳು ಬಂದಿದ್ದು ದಾಳಿಯ ಸಮಯದಲ್ಲಿ ಕೇವಲ 13 ಸಾವಿರ ಖಾಲಿ ಚೀಲಗಳು ಸಿಕ್ಕವೆ. ಉಳಿದ 37 ಸಾವಿರ ಚೀಲಗಳಲ್ಲಿ ತುಂಬಿದ ಅಕ್ಕಿ ಮಂಗಳೂರಿನಲ್ಲಿ ಪತ್ತೆಯಾಗಿದೆ. ಆದ್ದರಿಂದ ಅಕ್ಕಿಯ ಕಳ್ಳಸಾಗಣೆ ಹಾಸನದಿಂದಲೇ ಆರಂಭವಾಗಿರುವುದು ದೃಢಪಡುತ್ತದೆ.

ಸುಮಾರು 70 ಸಾವಿರ ಕ್ವಿಂಟಾಲ್‌ನಷ್ಟು ಅಕ್ಕಿಯನ್ನು ಗುರುರಾಜ ರೈಸ್ ಮಿಲ್‌ನವರು ತಾವು ಖಾಸಗಿಯಾಗಿ ಹಾಸನ ಮಾರುಕಟ್ಟೆಯಲ್ಲಿ ಖರೀದಿಸಿದ್ದೆಂದು ಹೇಳಿಕೆ ನೀಡಿದ್ದಾರೆ. ಆದರೆ ಇಷ್ಟೊಂದು ಬೃಹತ್ ಪ್ರಮಾಣದ ಅಕ್ಕಿ ಹಾಸನ ಮಾರುಕಟ್ಟೆಗೆ ಬರುವುದೇ ಇಲ್ಲ ಎಂದು ತನಿಖಾ ತಂಡ ಅಭಿಪ್ರಾಯಪಟ್ಟಿದೆ. ಕಳೆದ ನಾಲ್ಕು ವರ್ಷಗಳಿಂದ ಸತತ ಬರಗಾಲ ಎದುರಿಸುತ್ತಿರುವ ಹಾಸನ ಜಿಲ್ಲೆಯಲ್ಲಿ ಬಹುತೇಕ ರೈಸ್ ಮಿಲ್‌ಗಳು ಬಂದ್ ಆಗಿವೆ. ಬರಗಾಲದ ಸಂದರ್ಭದಲ್ಲಿ ಹಾಸನದ ರೈಸ್ ಮಿಲ್‌ಗಳಲ್ಲಿ ಇಷ್ಟೊಂದು ಬೃಹತ್ ಪ್ರಮಾಣದ ಅಕ್ಕಿ ಸಂಗ್ರಹವಾಗಿರಬೇಕಾದರೆ ಅದು ಹೊರಗಿನಿಂದ ಬಂದದ್ದೇ ಆಗಿರಬೇಕು. ಹಾಸನ ಈ ಹಗರಣದ ಕೇಂದ್ರ ಬಿಂದುವಾಗಿದ್ದರೂ ರಾಜ್ಯದ ಚಿಕ್ಕಮಗಳೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಕೋಲಾರ, ಬಳ್ಳಾರಿ, ರಾಯಚೂರು, ದಾವಣಗೆರೆ, ಚಿತ್ರದುರ್ಗ, ಉತ್ತರ ಕನ್ನಡ ಜಿಲ್ಲೆಗಳಿಗೂ ವ್ಯಾಪಿಸಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

'ಕೂಲಿಗಾಗಿ ಕಾಳು' ಆಫ್ರಿಕಾದತ್ತ:

ಬೆಂಗಳೂರಿನಲ್ಲಿ ವಶಪಡಿಸಿಕೊಳ್ಳಲಾದ ಅಕ್ಕಿ ಚೀಲಗಳ ಮೇಲೆ ಭಾರತ ಆಹಾರ ನಿಗಮದ ಮುದ್ರೆಗಳು ಕಂಡುಬಂದಿರುವುದರಿಂದ ಇದು 'ಕೂಲಿಗಾಗಿ ಕಾಳು' ಯೋಜನೆಯಡಿ ರಾಜ್ಯಕ್ಕೆ ಬಂದ ಅಕ್ಕಿಯಾಗಿದೆ ಎಂದು ಮೇಲ್ನೋಟಕ್ಕೆ

ನಿತ್ಯಾನಂದಸ್ವಾಮಿ

ಕಂಡುಬರುತ್ತದೆ. ಆಫ್ರಿಕಾ ಖಂಡದ ಬಡರಾಷ್ಟ್ರಗಳಿಗೆ ಉಚಿತವಾಗಿ ವಿತರಣೆ ಮಾಡಲು ಸ್ವಿಸ್ ಮೂಲದ ಸಂಸ್ಥೆಯೊಂದಕ್ಕೆ ಈ ಅಕ್ಕಿ ಮಾರಾಟವಾಗಿರುವ ಅಂಶ ಈಗ ಬೆಳಕಿಗೆ ಬಂದಿದೆ. ಈ ಸಂಸ್ಥೆಯ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿದ್ದ ದೆಹಲಿ ಮೂಲದ ರಫ್ತು ವಹಿವಾಟು ಸಂಸ್ಥೆ ಮಂಗಳೂರು ಬಂದರಿನ ಮೂಲಕ ಸಾಗಣೆ ಮಾಡಲು ಈ ಅಕ್ಕಿಯನ್ನು ಅಲ್ಲಿಯ ಉಗ್ರಾಣಗಳಲ್ಲಿ ದಾಸ್ತಾನು ಮಾಡಿತ್ತು. ಹಾಸನದ ಗುರುರಾಜ ರೈಸ್ ಮಿಲ್ ಮೂಲಕ ಈ ಅಕ್ಕಿಯನ್ನು ರಾಜ್ಯದ ವಿವಿಧ ಜಿಲ್ಲೆಗಳಿಂದ ಕಾಳಸಂತೆಯಲ್ಲಿ ಖರೀದಿಸಿ ದೆಹಲಿ ಮೂಲದ ರಫ್ತು ಸಂಸ್ಥೆಗೆ ಸರಬರಾಜು ಮಾಡಿದ್ದು.

ಗೋಣಿ ಚೀಲಗಳಲ್ಲಿ ಸರಬರಾಜಾಗುವ ಅಕ್ಕಿಯನ್ನು ರೈಸ್‌ಮಿಲ್‌ಗಳಲ್ಲಿ ಪಾಲಿಶ್ ಮಾಡಿ ಅನಂತರ ಆ ಅಕ್ಕಿಗೆ ಪಾಮಾಯಿಲ್ ಬಳಸಿ ಹೊಳಪು ಬರುವಂತೆ ಮಾಡಿ ನಂತರ 50 ಕೆ.ಜಿ.ಯಂತೆ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಹಡಗಿಗೆ ಹೇರಲಾಗುತ್ತದೆ. ಈಗಾಗಲೇ ಒಂದೂವರೆ ತಿಂಗಳ ಹಿಂದೆ ಒಂದು ಹಡಗು ಮಂಗಳೂರು ಬಂದರಿನಿಂದಲೇ ಸುಮಾರು 20 ಕೋಟಿ ರೂ. ಮೌಲ್ಯದ ಅಕ್ಕಿಯನ್ನು ಹೊತ್ತುಕೊಂಡು ದಕ್ಷಿಣ ಆಫ್ರಿಕಾಕ್ಕೆ ತೆರಳಿದೆ ಎಂದು ಈಗ ತಿಳಿದುಬಂದಿದೆ. ಆಂಧ್ರಪ್ರದೇಶದಿಂದ ಬಂದಿರುವ ಈ ಅಕ್ಕಿಯನ್ನು ಇನ್ನೊಂದು ಹಡಗಿನಲ್ಲಿ ಮಂಗಳೂರಿನಲ್ಲಿ ತುಂಬಿಸಿಕೊಂಡು ದಕ್ಷಿಣ ಆಫ್ರಿಕಾಗೆ ಪ್ರಯಾಣ ಬೆಳಸಲಿತ್ತು.

ಸಾಮಾನ್ಯವಾಗಿ ಭಾರತ ಆಹಾರ ನಿಗಮದಿಂದ ರೈಲುಗಳಲ್ಲಿ ಸಾಗಿಸಲ್ಪಡುವ ಅಕ್ಕಿ ಜಿಲ್ಲಾ ಕೇಂದ್ರಗಳ ರೈಲು ನಿಲ್ದಾಣಗಳಿಗೆ ಬಂದು ಬೀಳುತ್ತದೆ. ರೈಲು ನಿಲ್ದಾಣದಿಂದ ಅಕ್ಕಿಯನ್ನು ಸಂಬಂಧಪಟ್ಟ ಏಜೆಂಟರ ಮೂಲಕ ನಿಗಮದ ಆಯಾ ಉಗ್ರಾಣಗಳಿಗೆ ತರಲಾಗುತ್ತದೆ. ಈ ಹಂತದಲ್ಲಿ ಅಕ್ರಮಗಳು ನಡೆಯುವ ಸಂಭವಗಳು ವಿರಳ ಎನ್ನಲಾಗುತ್ತದೆ. ಆದರೆ ನಂತರ ನಿಗಮದ ಉಗ್ರಾಣಗಳಿಂದ ಲಾರಿಗಳಲ್ಲಿ ರಾಜ್ಯ ಉಗ್ರಾಣ ನಿಗಮದ ಉಗ್ರಾಣಗಳಿಗೆ ತಲುಪಿಸುವ ಹಂತದಲ್ಲಿ ಅಕ್ರಮಗಳು ನಡೆಯಲು ಹೆಚ್ಚು ಅವಕಾಶಗಳಿವೆ. ಹೀಗೆ ಕೂಲಿಗಾಗಿ ಬಂದ ಕಾಳು ಕಾಳಸಂತೆಯಲ್ಲಿ ಮಾರಾಟವಾಗುತ್ತದೆ. ಬರಪರಿಹಾರ ಅಕ್ಕಿ ಸಾಗಣೆಗೆ ಲಾರಿಗಳ ನಡುವೆ ಪೈಪೋಟಿ ಇರುವುದಕ್ಕೂ ಇದೇ ಕಾರಣವಾಗಿದೆ.



ಬರಪೀಡಿತರ ಗಂಜಿಗೆ ಕುತ್ತು:

ಬರ ಪರಿಹಾರಕ್ಕೆಂದು ನಿಗದಿಯಾದ ಅಕ್ಕಿ ಬರಪೀಡಿತರಿಗೆ ಗಂಜಿಯಾಗಿ ದೊರಕುವ ಬದಲು ಲಾಭ ಬಡುಕರ ಧಾನದಾಹ ನೀಗಿಸಲು ಬಳಕೆಯಾಗುತ್ತಿರುವುದು ಅತ್ಯಂತ ಶೋಚನೀಯ ಸಂಗತಿ. ಬರದಿಂದ ಹೊಟ್ಟೆ ಬಟ್ಟೆಗಿಲ್ಲದೆ ಜನ ಗುಳೆ ಹೋಗುತ್ತಿರುವಾಗ, ವೃದ್ಧರೂ, ರೋಗಿಗಳು ಹೊಟ್ಟೆಗಿಲ್ಲದೆ ಹಸಿವಿನ ಸಾವಿಗೆ ಬಲಿಯಾಗುತ್ತಿರುವಾಗ, ಬಡವರ ಪಾಲಿನ ಗಂಜಿಯನ್ನು ಕಸಿದುಕೊಳ್ಳಲು ಹೇಸದ ಜನಗಳು' ನಮ್ಮ ನಡುವೆ ಇದ್ದಾರೆ?

ಕೂಲಿಗಾಗಿ ಕಾಳು ಯೋಜನೆಯ ಆಹಾರ ಧಾನ್ಯದ ದುರುಪಯೋಗದ ಬಗ್ಗೆ ಆಂಧ್ರಪ್ರದೇಶದಲ್ಲಿ ಮೊದಲು ವ್ಯಾಪಕ ದೂರುಗಳು ಬಂದವು. ತಾನು ಬೆಂಬಲಿಸುತ್ತಿದ್ದ ಎನ್.ಡಿ.ಎ. ಸರ್ಕಾರದ ಮೇಲೆ ಒತ್ತಡ ಹೇರಿ ಚಂದ್ರಬಾಬು ನಾಯ್ಡು ಬಾರೀ ಪ್ರಮಾಣದಲ್ಲಿ ಅಕ್ಕಿಯನ್ನು ಪಡೆಯುತ್ತಿದ್ದರು. ಈ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ಹಣ ಮಾಡಿದರು. ಈಹಣ ಬಳಸಿ ರಸ್ತೆ ಮತ್ತು ಫ್ಲೈಓವರ್ ನಿರ್ಮಾಣ ಮಾಡಿದ್ದನ್ನು ಚಂದ್ರಬಾಬು ನಾಯ್ಡು ಸಮರ್ಥಿಸುತ್ತಿದ್ದರು. ಅಕ್ಕಿಯನ್ನು ಮಾರಾಟ ಮಾಡಿ ಹಣ ಗಳಿಸಿದ್ದು ಅಲ್ಲದೆ ಭಾರತ ಆಹಾರ ನಿಗಮವು ಆಂಧ್ರದಲ್ಲಿ ಅಕ್ಕಿಯನ್ನು ಖರೀದಿ ಮಾಡುವಂತೆ ಮಾಡಿ ಹಣ ಗಳಿಸಿದ್ದರು. ಆದರೆ ಬಡವರಿಗೆ ಮಾಡಿದ ಅನ್ಯಾಯಕ್ಕೆ ತಕ್ಕ ಶಿಕ್ಷೆ ಈಗ ಅನುಭವಿಸುತ್ತಿದ್ದಾರೆ.

ಕರ್ನಾಟಕದಲ್ಲಿಯೂ ಕಳೆದ ನಾಲ್ಕು ವರ್ಷಗಳಿಂದ ಸತತ ಬರಗಾಲ ಮುಂದುವರೆದಿದ್ದರೂ ಬರ ಪರಿಹಾರ ಕಾಮಗಾರಿಗಳು ಎಲ್ಲಿಯೂ ಸರಿಯಾಗಿ ನಡೆದಿಲ್ಲ. ವಾಜಪೇಯಿ ಸರ್ಕಾರ ಕರ್ನಾಟಕಕ್ಕೆ ಆಹಾರ ಧಾನ್ಯ ಬಿಡುಗಡೆ ಮಾಡುವಲ್ಲಿ ಪಕ್ಷಪಾತ ಮಾಡಿದ್ದು ನಿಜವಾದರೂ ಲಭ್ಯವಾದ ಆಹಾರ ಧಾನ್ಯವನ್ನು 'ಕೂಲಿಗಾಗಿ ಕಾಳು' ಯೋಜನೆಯ ಅಡಿಯಲ್ಲಿ ಸಮರ್ಪಕವಾಗಿ ಬಳಕೆಯಾಗಲಿಲ್ಲ. ಒದಗಿಸಲಾದ ಅಕ್ಕಿಯಲ್ಲಿ ಶೇಕಡ 70ರಷ್ಟು ಭಾಗ ಕಾಳಸಂತೆಯಲ್ಲಿ ಮಾರಾಟವಾಗಿದೆ.

ಕೂಲಿಕಾರರಿಗೆ ಕೆಲಸ ಒದಗಿಸುವ ಬದಲು ಯಂತ್ರಗಳನ್ನು ಬಳಸಿ ಯಂತ್ರಗಳ ಮಾಲೀಕರ ಮತ್ತು ಗುತ್ತಿಗೆದಾರರ ಜೇಬು ತುಂಬಿಸಲಾಗಿದೆ. 4 ವರ್ಷಗಳ ಬರ ಪರಿಹಾರ ಕಾಮಗಾರಿಗಳನ್ನು ಕೂಲಂಕಷ ತನಿಖೆಗೆ ಒಳಪಡಿಸಿದರೆ ಆಘಾತಕಾರಿ ಸತ್ಯಾಂಶಗಳು ಹೊರಬೀಳುವುವು.

ಸಮಗ್ರ ತನಿಖೆಗೆ ಆಗ್ರಹ:

ದೇಶದ ಗಮನ ಸೆಳೆದಿರುವ ಈ ಅಕ್ಕಿ ಹಗರಣದ ಪ್ರಕರಣವನ್ನು ಸಿಓಡಿಗೆ ಹಸ್ತಾಂತರಿಸಲಾಗಿದ್ದು ತನಿಖೆ ಆರಂಭವಾಗಿದೆ ಎನ್ನಲಾಗಿದೆ. ಪ್ರಭಾವಿ ರಾಜಕಾರಣಿಗಳ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳ ಸ್ಪಷ್ಟ ಕೈವಾಡವಿರುವ ಈ ಹಗರಣವನ್ನು ಬೇಧಿಸುವಲ್ಲಿ ಸಿಓಡಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.

ರಾಜ್ಯ ಸರ್ಕಾರದ ಕರ್ತವ್ಯ ಲೋಪವೇ ಈ ಹಗರಣಕ್ಕೆ ಕಾರಣವಾಗಿದೆ ಎಂದು ಬಿಜೆಪಿಯ ಸಂಸದ ಸದಾನಂದ ಗೌಡ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಈ ಹಗರಣದಿಂದ ಹೊಣೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಎನ್.ಡಿ.ಎ ಸರ್ಕಾರದ ಕೈವಾಡವೂ ಇಲ್ಲದಿರಲು ಸಾಧ್ಯವಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಈ ಹಗರಣದ ಕಾರ್ಯಾಚರಣೆ ನಡೆಯುತ್ತಾ ಬಂದಿದೆ. ಚುನಾವಣೆಗಳು ಮತ್ತು ನಂತರದ ರಾಜಕೀಯ ಬೆಳವಣಿಗೆಗಳ ಮರೆಯಲ್ಲಿ ಇದೆಲ್ಲವೂ ನಡೆದಿದೆ. ವಾಜಪೇಯಿ ಸರ್ಕಾರವು ಅಗತ್ಯ ವಸ್ತುಗಳ ಕಾಯ್ದೆಯನ್ನು ರದ್ದುಗೊಳಿಸಿದ್ದು ಆಹರ ಧಾನ್ಯಗಳ ಅಕ್ರಮ ಸಾಗಾಣಿಕೆ, ಸಂಗ್ರಹಕ್ಕೆ ಎಡೆಮಾಡಿಕೊಟ್ಟಿದೆ. ಸಮಗ್ರ ತನಿಖೆ ಯೊಂದರಿಂದ ಮಾತ್ರ ಈ ಬೃಹತ್ ವಂಚನಾ ಪ್ರಕರಣದ ಹಿಂದಿನ ಜಾಲವನ್ನು ಹೊರಗೆಳೆಯಬಹುದು.

ಅಕ್ಕಿ ಹಗರಣದ ಸಮಗ್ರ ತನಿಖೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘಗಳ ಜಂಟಿ ಆಶ್ರಯದಲ್ಲಿ 07.06.200 ರಂದು ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ

2004 ರ ಚುನಾವಣೆಗಳು ಸಿಪಿಐ(ಎಂ) ಪಕ್ಷದ ಪ್ರಭಾವವನ್ನು ಬಹಳಷ್ಟು ಹೆಚ್ಚಿಸಿದೆ. ಸಿಪಿಐ(ಎಂ) ಕೇಂದ್ರದಲ್ಲಿ ಸರ್ಕಾರವನ್ನು ಸೇರಬೇಕು ಎಂದು ಅದರ ಅಭಿಮಾನಿಗಳು ಒತ್ತಾಯಿಸಿದ್ದಾರೆ. ಸಿಪಿಐ(ಎಂ) ಸಂಯುಕ್ತ ಪ್ರಗತಿಪರ ಮೈತ್ರಿಕೂಟದ ಸರ್ಕಾರವನ್ನು ಏಕೆ ಸೇರಲಿಲ್ಲ ಎಂದು ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಇಲ್ಲಿ ವಿವರಿಸುತ್ತಾರೆ



ಸರ್ಕಾರದ ರಚನೆ ಬಗ್ಗೆ ಸಿಪಿಐ(ಎಂ) ನಿಲುವು

ನಿರ್ಣಾಯಕ ಗೆಲುವು

14ನೇ ಲೋಕಸಭೆಗೆ ನಡೆದ ಚುನಾವಣೆಯು ಬಿಜೆಪಿ ಮತ್ತವರ ಮಿತ್ರರಿಗೆ ನಿರ್ಣಾಯಕ ಸೋಲಿನಲ್ಲಿ ಪ್ರತಿಫಲನಗೊಂಡಿದೆ. ಬಿಜೆಪಿಯನ್ನು ಆರು ವರ್ಷಗಳ ನಂತರ ಕೇಂದ್ರ ಸರ್ಕಾರದಿಂದ ಹೊರದಬ್ಬಲಾಗಿದೆ. ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳ ಪ್ರಥಮ ಗುರಿಯಾಗಿದ್ದ ಈ ಕರೆಗೆ ಜನತೆ ಅದ್ಭುತವಾಗಿ ಸ್ಪಂದಿಸಿದ್ದಾರೆ.

ಸಿಪಿಐ(ಎಂ) ಪಕ್ಷವು ಈ ಚುನಾವಣೆಗೆ ತಂತ್ರಗಳನ್ನು ರೂಪಿಸುವಾಗ ಮೂರು ಮುಖ್ಯಗುರಿಗಳನ್ನು ಹೊಂದಿತ್ತು. ಅವುಗಳೆಂದರೆ, ಬಿಜೆಪಿ ಕೂಟದ ಸೋಲು, ಕೇಂದ್ರದಲ್ಲಿ ಜಾತ್ಯತೀತ ಸರ್ಕಾರದ ರಚನೆ ಮತ್ತು ಸಿಪಿಐ(ಎಂ) ಹಾಗೂ ಎಡಶಕ್ತಿಗಳ ಬಲವನ್ನು ವೃದ್ಧಿಸಿಕೊಳ್ಳುವುದು. ಈ ಮೂರು ಉದ್ದೇಶಗಳನ್ನು ಸಾಧಿಸಲಾಗಿದೆ ಎಂಬುದು ಗಮನಾರ್ಹವಾದುದು. 1999 ರ ಚುನಾವಣೆಗಳಲ್ಲಿ ಗೆದ್ದಿದ್ದ 296 ಸ್ಥಾನಗಳಿಗೆ ಹೋಲಿಸಿದರೆ ಬಿಜೆಪಿ ಮತ್ತದರ ಮಿತ್ರರು ಈ ಚುನಾವಣೆಯಲ್ಲಿ ಕೇವಲ 189 ಸ್ಥಾನಗಳನ್ನು ಗೆದ್ದಿದ್ದಾರೆ. ಅದರ ಮತಗಳಿಕೆ ಶೇ .5 ಅಂಶಗಳಷ್ಟು ಕುಸಿದಿದೆ. ಉತ್ತರ ಪ್ರದೇಶದ 80 ಸೀಟುಗಳ ಪೈಕಿ ಬಿಜೆಪಿ ಕೇವಲ 10 ರಲ್ಲಿ ಜಯಗಳಿಸಿದೆ. ಗುಜರಾತಿನಲ್ಲಿ ಬಿಜೆಪಿ 26 ಸ್ಥಾನಗಳಲ್ಲಿ ಕೇವಲ 14 ರಲ್ಲಿ ಜಯ ಸಾಧಿಸಿದೆ. ಕಳೆದ ಬಾರಿ 21 ಸ್ಥಾನಗಳನ್ನು ಗೆದ್ದಿತ್ತು. ಬಿಜೆಪಿಯ ಪ್ರಮುಖ ಮಿತ್ರರಲ್ಲಿ ಕೆಲವರಾದ ಆಂಧ್ರದ ಟಿಡಿಪಿ ಮತ್ತು ತಮಿಳುನಾಡಿನ ಎಐಎಡಿಎಂಕೆ ನೆಲಕಚ್ಚುವಂತಹ ಸೋಲನುಭವಿಸಿವೆ.

ಬೆಂಬಲಿತ ಸ್ವತಂತ್ರ ಅಭ್ಯರ್ಥಿಯೂ ಸೇರಿದಂತೆ ಸಿಪಿಐ(ಎಂ) 44 ಸ್ಥಾನಗಳಲ್ಲಿ ಜಯಗಳಿಸಿದೆ ಮತ್ತು ಎಡಪಕ್ಷಗಳು 61 ಸ್ಥಾನಗಳಲ್ಲಿ ಜಯಸಿವೆ. ಇದು ಸಂಸದೀಯ ಚುನಾವಣೆಗಳಲ್ಲಿ ಎಡಪಕ್ಷಗಳ ಅತ್ಯುತ್ತಮ ಸಾಧನೆ ಮತ್ತು 1967 ರಿಂದ ಸಿಪಿಐ(ಎಂ) ಪ್ರತ್ಯೇಕವಾಗಿ ಸ್ಪರ್ಧಿಸಲು ಆರಂಭಿಸಿದಂದಿನಿಂದ ಅತಿ ಹೆಚ್ಚಿನ ಸ್ಥಾನಗಳನ್ನು ಗಳಿಸಿದೆ. ಎಡಶಕ್ತಿಗಳ ಹೆಚ್ಚಿದ ಬಲವು ರಾಷ್ಟ್ರ ರಾಜಕಾರಣದಲ್ಲಿ ಎಡಶಕ್ತಿಗಳ ಮಧ್ಯಪ್ರವೇಶವನ್ನು ಹೆಚ್ಚಿಸಿದೆ ಮತ್ತು ಎಡ, ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಗೆ ಸಹಾಯ ಮಾಡಿದೆ.

ಎನ್‌ಡಿಎಯೇತರ ಪಕ್ಷಗಳು ಲೋಕಸಭೆಯಲ್ಲಿ ಅತಿಹೆಚ್ಚಿನ ಸ್ಥಾನಗಳನ್ನು ಗಳಿಸಿವೆ. ಹೊಸ ಲೋಕಸಭೆಯಲ್ಲಿ ಇವರ ಸಂಖ್ಯೆ 340 ಕ್ಕಿಂತ ಕಡಿಮೆಯೇನೂ ಇಲ್ಲ. ಇದರಿಂದಾಗಿ ಜಾತ್ಯತೀತ ಸರ್ಕಾರದ ರಚನೆ ಸುಲಭವಾಯಿತು. ಬಿಜೆಪಿಯನ್ನು ಸೋಲಿಸಲು ಸಹಾಯ ಮಾಡಿದ ಎಲ್ಲಾ ಪಕ್ಷಗಳು ಜಾತ್ಯತೀತ ಸರ್ಕಾರ ರಚನೆಗೆ ಬಹಿರಂಗವಾಗಿ ಬೆಂಬಲ ನೀಡಿವೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ - ಏಕಮಾತ್ರ ಸಾಧ್ಯತೆ

... ಮಿತ್ರರೂ ಸೇರಿ 219 ಸ್ಥಾನಗಳಲ್ಲಿ ಜಯಗಳಿಸಿವೆ. ಎಡಪಕ್ಷಗಳ 61 ಸ್ಥಾನಗಳು ಕೇಂದ್ರದಲ್ಲಿ ಜಾತ್ಯತೀತ ಸರ್ಕಾರ ರಚನೆಯನ್ನು ಖಾತ್ರಿಗೊಳಿಸಿದವು ಎಂಬುದು ವಾಸ್ತವ. ಎಡಪಕ್ಷಗಳ ಶಕ್ತಿಯಿಂದಾಗಿ ಕಾಂಗ್ರೆಸ್ ಮತ್ತದರ ಮಿತ್ರ ಪಕ್ಷಗಳ ಜೊತೆ ಜಾತ್ಯತೀತ ಸರ್ಕಾರ ರಚಿಸಲು ಯಾವುದೇ ಅಡೆತಡೆಗಳಿಲ್ಲ ಎಂಬುದು ಗ್ಯಾರಂಟಿಯಾದ ವಿಚಾರ. ಚುನಾವಣಾ ನಂತರದ ಈ ಸನ್ನಿವೇಶದಲ್ಲಿ ನೂತನ ಸರ್ಕಾರ ಕುರಿತಂತೆ ಪಕ್ಷದ ನಿಲುವನ್ನು ತಿಳಿಸಲು ಕೇಳಿಕೊಳ್ಳಲಾಯಿತು. ಈ ವಿಚಾರದ ಕುರಿತು ತೀರ್ಮಾನಿಸಲು ಮೇ 16, 17 ರಂದು ಪಕ್ಷದ ಕೇಂದ್ರ ಸಮಿತಿ ಸಭೆ ಸೇರಿತ್ತು. ಸುದೀರ್ಘ ಚರ್ಚೆಯ ನಂತರ ಕೇಂದ್ರ ಸಮಿತಿಯು ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಸೇರದೆ ಬೆಂಬಲ ನೀಡಬೇಕೆಂದು ತೀರ್ಮಾನಿಸಿತು. ಮುಂದುವರೆದು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಪರಿಶೀಲಿಸಬೇಕು ಮತ್ತು ಪಾಲಿಟ್‌ಬ್ಯೂರೋ ಅಗತ್ಯ ತೀರ್ಮಾನಗಳನ್ನು ಕೈಗೊಳ್ಳಬಹುದು ಎಂದು ಕೇಂದ್ರ ಸಮಿತಿ ತೀರ್ಮಾನಿಸಿತು.

ಸರ್ಕಾರಕ್ಕೆ ಬೆಂಬಲ

ಪಕ್ಷದ ರಾಜಕೀಯ-ತಾಂತ್ರಿಕ ನಿಲುವಿನ ಆಧಾರದಲ್ಲಿ ರೂಪಿಸಿದ್ದ ಚುನಾವಣಾ ತಂತ್ರದ ಬೆಳಕಿನಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವ ತೀರ್ಮಾನವನ್ನು ವಿವರಿಸಬೇಕಾಗಿದೆ. ಬಿಜೆಪಿ ಮತ್ತದರ ಮಿತ್ರರನ್ನು ಸೋಲಿಸುವುದು ಈ ಚುನಾವಣೆಗಳ ಮುಖ್ಯ ಉದ್ದೇಶವಾಗಿತ್ತು. ಬಿಜೆಪಿಯು ಪ್ರಭುತ್ವ ಮತ್ತದರ ಅಂಗಗಳನ್ನು ಕೋಮುವಾದೀಕರಣಗೊಳಿಸುವುದನ್ನು ಮತ್ತು ಆರ್‌ಎಸ್‌ಎಸ್ ನ ಉದ್ದೇಶದಂತೆ ಗಣತಂತ್ರದ ಜಾತ್ಯತೀತ-ಪ್ರಜಾಸತ್ತಾತ್ಮಕ ಅಡಿಪಾಯವನ್ನು ಬುಡಮೇಲುಗೊಳಿಸಲು ಮತ್ತೊಮ್ಮೆ ಅಧಿಕಾರಕ್ಕೆ ಬರದಂತೆ ತಡೆಯುವುದು ಅತ್ಯವಶ್ಯಕವಾಗಿತ್ತು. ಪರ್ಯಾಯ ಜಾತ್ಯತೀತ ಸರ್ಕಾರದ ರಚನೆಯೆಂದರೆ ಈ ಪ್ರಕ್ರಿಯೆಯನ್ನು ನಿಲ್ಲಿಸುವುದು ಮತ್ತು ತಿರುವು ಮುರುವುಗೊಳಿಸುವುದು.

ಈ ಸನ್ನಿವೇಶದಲ್ಲಿ ತನ್ನ ಮಿತ್ರಪಕ್ಷಗಳೊಡನೆ 219 ಸ್ಥಾನಗಳನ್ನು ಹೊಂದಿರುವ ಕಾಂಗ್ರೆಸ್ ನೇತೃತ್ವದ ಪರ್ಯಾಯ ಜಾತ್ಯತೀತ ಸರ್ಕಾರ ರಚನೆ ಮಾತ್ರವೇ ಏಕಮಾತ್ರ ಸಾಧ್ಯತೆ. ಕಾಂಗ್ರೆಸ್ ನೇತೃತ್ವದಲ್ಲಿ ಸ್ಥಿರ ಸರ್ಕಾರವನ್ನು ಖಾತ್ರಿಗೊಳಿಸುವುದು ಮತ್ತು ಸಿಪಿಐ(ಎಂ) ಹಾಗೂ ಎಡಪಕ್ಷಗಳು ಈ ಸರ್ಕಾರದಲ್ಲಿ ಯಾವ ಪಾತ್ರವಹಿಸಬೇಕು ಎಂಬುದು ಮಾತ್ರವೇ ಇದ್ದಂತಹ ಪ್ರಶ್ನೆ.

ತನ್ನ ಕೋಮುವಾದಿ ಅಜೆಂಡಾ ದೊಡನೆ ಬಿಜೆಪಿ-ಆರ್‌ಎಸ್‌ಎಸ್ ಕೂಟ ಒಡ್ಡಿದ್ದ ಅಪಾಯವನ್ನು ಎತ್ತಿ ತೋರಿಸುವುದು; ಸಾಮಾನ್ಯ ಜನತೆಯ ಜೀವನದಲ್ಲಿ ಆತಂಕ ಸೃಷ್ಟಿಸಿದ್ದ ಅಪಾಯಕಾರಿ ಆರ್ಥಿಕ ನೀತಿಗಳ ವಿರುದ್ಧ ಜನರನ್ನು ಸಂಘಟಿಸುವುದು ಮತ್ತು ದೇಶದ ಹಿತಾಸಕ್ತಿಗೆ ಅಪಾಯಕಾರಿಯಾಗಿದ್ದ ಬಿಜೆಪಿಯ ಸಾಮ್ರಾಜ್ಯಶಾಹಿ ಪರವಾದ ನೀತಿಗಳನ್ನು ಬಯಲಿಗೆಳೆಯುವುದು ಈ ಚುನಾವಣೆಯಲ್ಲಿ ಪಕ್ಷದ ಪ್ರಮುಖ ವಿಷಯವಾಗಿತ್ತು. ಪ್ರಚಾರಾಂದೋಲನ ನಡೆಸುವಾಗ ಎನ್‌ಡಿಎ ಮಿತ್ರರ ಅವಕಾಶವಾದಿತನವನ್ನು ಎತ್ತಿ ತೋರಿಸುವುದು ಎಂದು ತೀರ್ಮಾನಿಸಲಾಗಿತ್ತು.

ಸಿಪಿಐ(ಎಂ) ಮತ್ತು ಎಡಶಕ್ತಿಗಳ ಪರ್ಯಾಯ ಕಾರ್ಯಕ್ರಮಗಳೊಡನೆ ಪ್ರಚಾರಾಂದೋಲನವನ್ನು ನಡೆಸಲಾಯಿತು. ನಾವು ಹೊಂದಾಣಿಕೆ ಮಾಡಿಕೊಂಡಿರುವ ಪಕ್ಷಗಳ ಜೊತೆ ಪ್ರಚಾರ ಮಾಡುವಾಗಲೂ ನಮ್ಮ ಸ್ವತಂತ್ರ ನಿಲುವನ್ನು ಬಿಂಬಿಸಬೇಕೆಂಬುದು ನಮ್ಮ ತಿಳುವಳಿಕೆಯಾಗಿತ್ತು. ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಜೊತೆ ಯಾವುದೇ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕೇಂದ್ರ ಸಮಿತಿ ನಿರಾಕರಿಸಿತ್ತು. ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗಳು ಅದರ ವರ್ಗ ಹಿತಾಸಕ್ತಿಗಳಿಂದ ನಿರ್ದೇಶಿಲ್ಪಟ್ಟಿವೆ ಎಂಬ ಕಾರಣದಿಂದ ಈ ನಿಲುವು ತಳೆಯಲಾಗಿತ್ತು. ವಾಜಪೇಯಿ ಸರ್ಕಾರದ ಆರ್ಥಿಕ ನೀತಿಗಳನ್ನೇ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಗಳು ಅನುಸರಿಸುತ್ತಿದ್ದವು. ಎಡಪಕ್ಷಗಳು ಎಲ್ಲಿ ಬಲವಾಗಿವೆಯೋ ಅಲ್ಲೆಲ್ಲಾ ಕಾಂಗ್ರೆಸ್ ಅವಕಾಶವಾದಿ ಶಕ್ತಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಸೋಲಿಸುವ ಉದ್ದೇಶ ಹೊಂದಿದೆ.

ಈ ಹಿನ್ನೆಲೆಯಲ್ಲಿ ಜನವರಿ 2004 ರಲ್ಲಿ ಹೈದರಾಬಾದಿನಲ್ಲಿ ಸಭೆ ಸೇರಿದ್ದ ಕೇಂದ್ರ ಸಮಿತಿಯು ಚುನಾವಣೆಗೆ ನಿರ್ದಿಷ್ಟ ತಂತ್ರಗಳನ್ನು ರೂಪಿಸಿತ್ತು. ಸಭೆಯಲ್ಲಿ ಅಂಗೀಕರಿಸಿದ ವರದಿಯು ವಿವಿಧ ರಾಜ್ಯಗಳಲ್ಲಿ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಂದು ಗೂಡಿಸಬೇಕು. ಹಾಗೆ ಬಿಜೆಪಿ ಮತ್ತದರ ಮಿತ್ರರನ್ನು ಸೋಲಿಸಲು ವಿಶಾಲ ಶಕ್ತಿಗಳನ್ನು ಅಣಿನೆರೆಸಬೇಕು. ಹಾಗೆ ಮಾಡುವಾಗ ಕಾಂಗ್ರೆಸ್ ಜತೆ ಯಾವುದೇ ಹೊಂದಾಣಿಕೆ ಅಥವಾ ವೇದಿಕೆಯನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ. ಕಾಂಗ್ರೆಸ್‌ನ ವಿನಾಶಕಾರಿ ಆರ್ಥಿಕ ನೀತಿಗಳನ್ನು ಬಯಲಿಗೆಳೆಯಬೇಕು. ಎಡಶಕ್ತಿಗಳ ಶಕ್ತಿ ಮತ್ತು ಪ್ರಭಾವವನ್ನು ಹೆಚ್ಚಿಸಲು ನಮ್ಮ ರಾಜಕೀಯ ವೇದಿಕೆಯ ಸುತ್ತ ಜನರನ್ನು ಅಣಿ ನೆರೆಸಬೇಕು.

1999 ರ ಚುನಾವಣೆಯಂತೆ ಚುನಾವಣೆಗಾಗಿ ಅಖಿಲ ಭಾರತ ಮಟ್ಟದ ಹೊಂದಾಣಿಕೆಯನ್ನು ಏರ್ಪಡಿಸಲು ಸಾಧ್ಯವಿಲ್ಲ. ಪ್ರತೀ ರಾಜ್ಯದಲ್ಲಿರುವ ಪರಿಸ್ಥಿತಿಯನ್ನು ನೋಡಬೇಕು. ಮತ್ತು ಅಲ್ಲಿರುವ ಶಕ್ತಿಗಳ ಬಲಾಬಲಗಳನ್ನು ನೋಡಿ ನಮ್ಮ ಚುನಾವಣಾ ತಂತ್ರಗಳನ್ನು ರೂಪಿಸಬೇಕು. ಅದು ಬಿಜೆಪಿ ಮತ್ತಿತರ ಮಿತ್ರರನ್ನು ಗುರಿಯಾಗಿಸಿಕೊಂಡಿರಬೇಕು. ಮತ್ತು ಕಾಂಗ್ರೆಸ್ಸೇತರ ಜಾತ್ಯತೀತ ಪಕ್ಷಗಳ ಜತೆ ತಿಳುವಳಿಕೆಗೆ ಬರಬೇಕು. ಬಿಜೆಪಿ ವಿರೋಧಿ ಮತಗಳು ವಿಭಜನೆಗೊಳ್ಳುವುದನ್ನು ಕಡಿಮೆಗೊಳಿಸುವಂತೆ ನೋಡಿಕೊಳ್ಳಬೇಕು.

ಅಲ್ಲಿರುವ ಶಕ್ತಿಗಳ ಬಲಾಬಲ ನೋಡಿಕೊಂಡು ಪ್ರತಿಯೊಂದು ರಾಜ್ಯದಲ್ಲಿ ನಿರ್ದಿಷ್ಟ ತಂತ್ರಗಳನ್ನು ರೂಪಿಸಲಾಯಿತು, ಸಾಧ್ಯವಾದಲೆಲ್ಲಾ ಬಿಜೆಪಿ ವಿರೋಧಿ ಮತ ವಿಭಜನೆ ಸಾಧ್ಯವಾದಷ್ಟು ಕಡಿಮೆಯಾಗಲು ಇದು ಸಹಾಯ ಮಾಡಿತು. ತಮಿಳುನಾಡು ಮತ್ತು ಬಿಹಾರದಲ್ಲಿ ಈ ರೀತಿ ರೂಪಿಸಿದ ಹೊಂದಾಣಿಕೆಗಳು ಬಿಜೆಪಿ ಮತ್ತದರ ಮಿತ್ರರಿಗೆ ನಿರ್ಣಾಯಕ ಸೋಲನ್ನು ಕರುಣಿಸಿದೆ. ಆಂಧ್ರಪ್ರದೇಶದಲ್ಲಿ ಈ ರೀತಿಯ ಹೊಂದಾಣಿಕೆಯು ಟಿಡಿಪಿ/ ಬಿಜೆಪಿ ಕೂಟವನ್ನು ಲೋಕಸಭೆಯಲ್ಲಿ ಮಾತ್ರವಲ್ಲ ವಿಧಾನಸಭಾ ಚುನಾವಣೆಯಲ್ಲೂ ಸೋಲಿಸಿತು.

ನಮ್ಮ ಪ್ರಚಾರಾಂದೋಲನದ ಮುಖ್ಯ ಉದ್ದೇಶ ಬಿಜೆಪಿ ಮತ್ತದರ ಕೂಟವನ್ನು ಸೋಲಿಸುವುದೇ ಆಗಿತ್ತಾದರೂ ನಾವು ಕಾಂಗ್ರೆಸ್‌ನಿಂದ ಪ್ರತ್ಯೇಕವಾಗಿದ್ದೆವು ಮತ್ತು ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರದಲ್ಲಿ ಮಾತ್ರವಲ್ಲ ಕರ್ನಾಟಕ, ಮಹಾರಾಷ್ಟ್ರ, ಅಸ್ಸಾಮ್ ರಾಜ್ಯಗಳಲ್ಲಿ ಕೂಡ ಜನರ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದ ಕಾಂಗ್ರೆಸ್ಸಿನ ನೀತಿಗಳನ್ನು ವಿರೋಧಿಸಿದೆವು.

ಕಾಂಗ್ರೆಸ್ ಜೊತೆ ಹೊಂದಾಣಿಕೆಯಲ್ಲಿ

ಕಾಂಗ್ರೆಸ್ ಜತೆ ಹೊಂದಾಣಿಕೆಯನ್ನಾಗಲೀ ಅಥವಾ ರಂಗವನ್ನಾಗಲೀ ರಚಿಸಿಕೊಳ್ಳದಿರಲು ಸಿಪಿಐ(ಎಂ) ತೀರ್ಮಾನಿಸಲು ಕಾರಣವೇನೆಂದರೆ ಕಾಂಗ್ರೆಸ್ಸಿನ ವರ್ಗಗುಣ. ದೊಡ್ಡ ಬಂಡವಾಳದಾರರು ಮತ್ತು ಭೂಮಾಲೀಕರ ಪ್ರತಿನಿಧಿಯಾಗಿ ಕಾಂಗ್ರೆಸ್ ಪಕ್ಷವು ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳಿಂದ ತನ್ನನ್ನು ಬೇರ್ಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಎಲ್ಲೆಲ್ಲಿ ಆಡಳಿತದಲ್ಲಿದೆಯೋ ಅಲ್ಲೆಲ್ಲಾ ಕಾಂಗ್ರೆಸ್ ವಾಸ್ತವವಾಗಿ ಅಂತಹ ನೀತಿಗಳನ್ನು ಹಠದಿಂದ ಜಾರಿಗೊಳಿಸುತ್ತಿದೆ. ಇಂತಹ ನೀತಿಗಳಿಂದಾಗಿಯೇ ಕರ್ನಾಟಕ ಮತ್ತು ಕೇರಳದ ಜನತೆ ಕಾಂಗ್ರೆಸ್ಸನ್ನು ಉಗ್ರವಾಗಿ ಶಿಕ್ಷಿಸಿದ್ದಾರೆ.

ಸಿಪಿಐ(ಎಂ) ಸರ್ಕಾರಕ್ಕೆ ಸೇರುತ್ತದೆ ಎಂಬುದರ ಅರ್ಥವೇನೆಂದರೆ, ಪಕ್ಷವು ಸರ್ಕಾರ ರಚಿಸುವ ಕಾಂಗ್ರೆಸ್ ನೇತೃತ್ವದ ಕೂಟದ ಭಾಗವಾಗುತ್ತದೆ ಎಂಬುದು. ಆ ಕೂಟಕ್ಕೆ ಈಗ ಸಂಯುಕ್ತ ಪ್ರಜಾಸತ್ತಾತ್ಮಕ ಒಕ್ಕೂಟ ಎಂದು ಹೆಸರಿಸಲಾಗಿದೆ. ಅಂತಹ ಸರ್ಕಾರಕ್ಕೆ ಸೇರುವುದೆಂದರೆ 17ನೇ ಮಹಾಧಿವೇಶನದಲ್ಲಿ ಪಕ್ಷ ರೂಪಿಸಿದ ಪಕ್ಷದ

ಪುಟ [illegible]



ಸಂಯುಕ್ತ ಪ್ರಗತಿಪರ ಮೈತ್ರಿಕೂ

ಸರ್ಕಾರದ ಸಾಮಾ

ಕಾಂಗ್ರೆಸ್ ನೇತೃತ್ವದ 15 ಪಕ್ಷಗಳ ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಸರ್ಕಾರದ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಪ್ರಕಟವಾಗಿದೆ. ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವ ಎಡ ಪಕ್ಷಗಳ ಎಲ್ಲಾ ಪ್ರಸ್ತಾವಗಳು ಸೇರ್ಪಡೆ ಆಗಲಿಲ್ಲ. ಕಾರ್ಯಕ್ರಮದ ಎಲ್ಲಾ ಅಂಶಗಳ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ.

ದೇಶದ ಬಹುತೇಕ ಜನ ಎದುರು ನೋಡುತ್ತಿದ್ದ ಪರ್ಯಾಯ ಜಾತ್ಯಾತೀತ ಸರ್ಕಾರವೊಂದು ಕೇಂದ್ರದಲ್ಲಿ ಈಗಾಗಲೇ ಅಧಿಕಾರ ವಹಿಸಿಕೊಂಡಿದೆ. ನೂತನ ಸರ್ಕಾರವನ್ನು ಸಂಯುಕ್ತ ಪ್ರಗತಿಪರ ಮೈತ್ರಿಕೂಟದ ಸರ್ಕಾರ ಎಂದು ಕರೆಯಲಾಗುತ್ತಿದ್ದು ಕಾಂಗ್ರೆಸ್‌ನೊಂದಿಗೆ ಚುನಾವಣಾಪೂರ್ವ ಮೈತ್ರಿ ಮಾಡಿಕೊಂಡ ಪಕ್ಷಗಳಾದ ಆರ್‌ಜೆಡಿ, ಡಿಎಂಕೆ, ಎನ್‌ಸಿಪಿ, ಪಿಎಂಕೆ, ಟಿಆರ್‌ಎಸ್, ಜೆಎಂಎಂ, ಎಲ್‌ಜೆಪಿ, ಎಂಡಿಎಂಕೆ, ಎಐಎಂಐಎಂ, ಪಿಡಿಪಿ, ಐಯುಎಂಎಲ್, ಆರ್‌ಪಿಐ(ಎ), ಆರ್‌ಪಿಐ(ಜಿ) ಮತ್ತು ಕೆಸಿ(ಜೆ) ಸಂ.ಪ್ರ.ಮೈತ್ರಿಕೂಟದ ಭಾಗವಾಗಿವೆ. ಡಾ.ಮನಮೋಹನ್ ಸಿಂಗ್ ಪ್ರಧಾನ ಮಂತ್ರಿಯಾಗಿರುವ ಈ ಸರ್ಕಾರಕ್ಕೆ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಎಐಎಫ್‌ಬಿ ಮತ್ತು ಆರ್‌ಎಸ್‌ಪಿ ಹೊರಗಿನಿಂದ ಬೆಂಬಲ ನೀಡುತ್ತಿವೆ.

ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಈಗಾಗಲೇ ಪ್ರಕಟವಾಗಿದೆ. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ತಮ್ಮ ಸಲಹೆಗಳನ್ನು ಪ್ರತ್ಯೇಕವಾಗಿ ಕಳುಹಿಸಿದ್ದರೂ ಅವುಗಳ ದಿಕ್ಕು ಒಂದೇ ಆಗಿತ್ತು. ಕೆಲವು ಅಂಶಗಳನ್ನು ಹೊರತುಪಡಿಸಿ, ಉಳಿದಂತೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಬಹುತೇಕ ಅಂಶಗಳನ್ನು ಎಡಪಕ್ಷಗಳು ಅನುಮೋದಿಸಿವೆ. ಎಡಪಕ್ಷಗಳು ಸರ್ಕಾರವನ್ನು ಬೆಂಬಲಿಸುವುದನ್ನು ಮುಂದುವರೆಸುತ್ತಿರುವಾಗಲೇ ತಮಗೆ ಸಹಮತ ಇಲ್ಲದ ವಿಷಯಗಳಲ್ಲಿ ತಮ್ಮ ಪರ್ಯಾಯ ಧೋರಣೆಗಳನ್ನು ಪ್ರತಿಪಾದಿಸಲು ಬದ್ಧರಾಗಿರುತ್ತವೆ.

ಯುಪಿಎ ಸರ್ಕಾರವು ಆಡಳಿತದಲ್ಲಿ 6 ಮೂಲಭೂತ ತತ್ವಗಳಿಗೆ ಬದ್ಧವಾಗಿ ನಡೆದುಕೊಳ್ಳಲಿದೆ.

1. ಸಾಮಾಜಿಕ ಸೌಹಾರ್ದತೆಯನ್ನು ಕಾಪಾಡುವುದು ಮತ್ತು ಪ್ರೋತ್ಸಾಹಿಸುವುದು. ಸಾಮಾಜಿಕ ನೆಮ್ಮದಿ ಮತ್ತು ಶಾಂತಿಯನ್ನು ಹಾಳುಮಾಡುವ ಶಕ್ತಿಗಳ ವಿರುದ್ಧ ಯಾವ ಪಕ್ಷಪಾತವಿಲ್ಲದೆ ಕಾನೂನು ಕ್ರಮ ಜರುಗಿಸುವುದು.
2. ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸುತ್ತಾ ಮುಂಬರುವ ದಶಕದಲ್ಲಿ ವಾರ್ಷಿಕ ಶೇ.7 ರಿಂದ 8 ರಷ್ಟು ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು.
3. ರೈತರ, ಕೃಷಿಕೂಲಿಕಾರರ, ಕಾರ್ಮಿಕರ ಮತ್ತು ಮುಖ್ಯವಾಗಿ ಅಸಂಘಟಿತ ವಲಯದ ಕಾರ್ಮಿಕರ ಅಭ್ಯುದಯವನ್ನು ಹೆಚ್ಚಿಸುವುದು.
4. ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಕಾನೂನು ದೃಷ್ಟಿಯಿಂದ ಮಹಿಳೆಯರ ಸಬಲೀಕರಣ.
5. ಪರಿಶಿಷ್ಟ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸಮಾನ ಅವಕಾಶಗಳು, ವಿಶೇಷವಾಗಿ ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರದಲ್ಲಿ.
6. ನಮ್ಮ ಉದ್ದಿಮೆದಾರರ, ವ್ಯಾಪಾರಸ್ಥರ, ಇಂಜಿನಿಯರುಗಳ, ಇತರ ಉದ್ಯೋಗಿಗಳ ಹಾಗೂ ಸಮಾಜದ ಉತ್ಪಾದಕ ಶಕ್ತಿಗಳ ರಚನಾತ್ಮಕ ಪ್ರತಿಭೆಗಳನ್ನು ಪ್ರೋತ್ಸಾಹಿಸುವುದು.

ಭ್ರಷ್ಟಾಚಾರರಹಿತ, ಪಾರದರ್ಶಕ, ಜವಾಬುದಾರ ಮತ್ತು ಜನತೆಗೆ ಸದಾ ಸ್ಪಂಧಿಸುವ ಆಡಳಿತವನ್ನು ಒದಗಿಸಲು ಯುಪಿಎ ಸರ್ಕಾರ ಬದ್ಧವಾಗಿದೆ.

ಉದ್ಯೋಗ : ರಾಷ್ಟ್ರೀಯ ಉದ್ಯೋಗ ಗ್ಯಾರಂಟಿ ಕಾಯ್ದೆಯನ್ನು ರಚಿಸುವುದು ಮತ್ತು ಆ ಮೂಲಕ ನಗರ ಮತ್ತು ಗ್ರಾಮೀಣ ಪ್ರದೇಶದ ಪ್ರತಿಯೊಂದು ಬಡ ಮತ್ತು ಕೆಳ ಮಧ್ಯಮವರ್ಗದ ಕುಟುಂಬದ ಒಬ್ಬ ಸದಸ್ಯನಿಗೆ ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸ ಒದಗಿಸುವುದು. ವ್ಯಾಪಕವಾದ 'ಕೂಲಿಗಾಗಿ ಕಾಳು' ಯೋಜನೆಯನ್ನು ಆರಂಭಿಸುವುದು. ಅಸಂಘಟಿತ ಮತ್ತು ಪರಂಪರಾಗತ ಕ್ಷೇತ್ರದ ಉದ್ದಿಮೆಗಳಿಗೆ ತಾಂತ್ರಿಕ, ಮಾರುಕಟ್ಟೆಯ ಮತ್ತು ಸಾಲ ಸೌಲಭ್ಯದ ನೆರವು ನೀಡಲು ನಿಧಿಯೊಂದನ್ನು ಸ್ಥಾಪಿಸುವುದು. ನಾರು, ಕೈಮಗ್ಗ, ವಿದ್ಯುತ್ ಮಗ್ಗ, ಸಿದ್ಧ ಉಡುಪು, ರಬ್ಬರ್, ಗೇರುಬೀಜ, ಕರಕುಶಲತೆಗಳು, ರೇಷ್ಮೆ, ಉಣ್ಣೆ, ಚರ್ಮ, ಮಡಿಕೆ ಮೊದಲಾದ ಗುಡಿ ಕೈಗಾರಿಕೆಗಳ ಆಧುನೀಕರಣಕ್ಕೆ ಹೊಸ ಕಾರ್ಯಕ್ರಮ ರೂಪಿಸುವುದು.

ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳ ಅಭಿವೃದ್ಧಿಗೆ ಗರಿಷ್ಠ ಬಂಡವಾಳ ಹೂಡಿಕೆ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮತ್ತು ಸ್ವಯಂ ಉದ್ಯೋಗಗಳಿಗೆ ಸಾಲ ಸೌಲಭ್ಯ ವಿಸ್ತರಣೆ, ಇದರಲ್ಲಿ ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳು, ವ್ಯಾಪಾರ, ಸಾರಿಗೆ, ಸಂಪರ್ಕ, ಪ್ರವಾಸೋದ್ಯಮ ಮೊದಲಾದವು ಸೇರಿರುತ್ತವೆ. ಹೊಸ ಜಾಗತಿಕ ಸವಾಲುಗಳನ್ನು ಎದುರಿಸಲು ಶಕ್ತವಾಗುವಂತೆ ಜವಳಿ ಕೈಗಾರಿಕೆಯನ್ನು ಪುನಃಶ್ಚೇತಗೊಳಿಸಲಾಗುವುದು. ಸಣಬು ಕೈಗಾರಿಕೆಗೆ ಪ್ರೋತ್ಸಾಹ.

ಕೃಷಿ : ನೀರಾವರಿ ಸೇರಿದಂತೆ ಕೃಷಿ ಕ್ಷೇತ್ರಕ್ಕೆ ಗರಿಷ್ಠ



ಸಾರ್ವಜನಿಕ ಹಣ ಹೂಡಿಕೆ, ಗ್ರಾಮೀಣ ಸಾಂಸ್ಥಿಕ ಸಾಲ ಸೌಲಭ್ಯ ವಿಸ್ತರಣೆ, ರೈತರ ಋಣಭಾರ ತಗ್ಗಿಸಲು ಕ್ರಮ, ಬೆಳೆ ಹಾಗೂ ಪಶುಸಾಕಣೆಕೆಗೆ ಪರಿಣಾಮಕಾರಿ ವಿಮೆ, ಒಣ ಬೇಸಾಯಕ್ಕೆ ಪ್ರೋತ್ಸಾಹದಾಯಕ ಕ್ರಮಗಳು, ಹಾಳು ಭೂಮಿ ಅಭಿವೃದ್ಧಿಗೆ ಕ್ರಮ, ಕೃಷಿ ಕಾರ್ಮಿಕರಿಗಾಗಿ ಸಮಗ್ರ ಕಾನೂನು, ಸಹಕಾರಿ ಸಂಘಗಳ ಪ್ರಜಾಸತ್ತಾತ್ಮಕ ಮತ್ತು ಸ್ವತಂತ್ರ ಕಾರ್ಯಾಚರಣೆಗಾಗಿ ಸಂವಿಧಾನ ತಿದ್ದುಪಡಿ, ರೈತರ ಆದಾಯವನ್ನು ಕುಗ್ಗಿಸುವ ನಿಯಂತ್ರಣಗಳನ್ನು ತೆಗೆದುಹಾಕುವುದು, ಕೃಷಿ ಉತ್ಪನ್ನಗಳ ಆಮದು ಸಂದರ್ಭದಲ್ಲಿ ರೈತರಿಗೆ ಹಾನಿಯಾಗುವುದನ್ನು ತಡೆಯಲು ಕ್ರಮ, ರೈತರ ಫಸಲಿಗೆ ಲಾಭದಾಯಕ ಬೆಲೆ, ಕಬ್ಬು ಬೆಳೆಗಾರರೂ ಸೇರಿದಂತೆ ಎಲ್ಲಾ ರೈತರ ಬಾಕಿಗಳನ್ನು ತುರ್ತು ಸಂದಾಯ ಮಾಡುವುದು.




ಶಿಕ್ಷಣ ಮತ್ತು ಆರೋಗ್ಯ : ಒಟ್ಟು ಆಂತರಿಕ ಉತ್ಪನ್ನದ ಶೇಕಡ 6 ರಷ್ಟನ್ನಾದರೂ ಶಿಕ್ಷಣಕ್ಕಾಗಿ ವೆಚ್ಚ ಮಾಡುವುದು, ಅದರಲ್ಲಿ ಅರ್ಧದಷ್ಟನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ ಗುಣಮಟ್ಟದ ಮೂಲಭೂತ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಅಗತ್ಯವಾದ ಹಣ ಸಂಗ್ರಹ ಮತ್ತು ಅದರ ಸಮರ್ಪಕ ವಿನಿಯೋಗಕ್ಕೆ ಒಂದು ರಾಷ್ಟ್ರೀಯ ಆಯೋಗ ರಚನೆ. ಕಳೆದ 5 ವರ್ಷಗಳಲ್ಲಾದ ಶಿಕ್ಷಣದ ಕೋಮುವಾದೀಕರಣವನ್ನು ತೆಗೆದುಹಾಕುವುದು, ಬಡವಿದ್ಯಾರ್ಥಿಗಳು ಉನ್ನತ ವೃತ್ತಿ ಆಧಾರಿತ ಶಿಕ್ಷಣ ಪಡೆಯುವ ಅವಕಾಶದಿಂದ ವಂಚಿತರಾಗುವುದನ್ನು ತಡೆಯುವುದು, ಶಾಲಾ ಮಕ್ಕಳಿಗಾಗಿ ಮಧ್ಯಾಹ್ನ ಊಟದ ರಾಷ್ಟ್ರೀಯ ಯೋಜನೆ, ಅಂಗನವಾಡಿಗಳ ಮೂಲಕ ಐಸಿಡಿಎಸ್ ವಿಸ್ತರಣೆ, ವಿದ್ಯಾರ್ಥಿಗಳ ದೈಹಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಪ್ರೋತ್ಸಾಹ.

ಒಟ್ಟು ಆಂತರಿಕ ಉತ್ಪನ್ನದ ಕನಿಷ್ಠ ಶೇಕಡ 2 ರಿಂದ 3ರಷ್ಟನ್ನಾದರೂ ಸಾರ್ವಜನಿಕ ಆರೋಗ್ಯಕ್ಕಾಗಿ ವೆಚ್ಚ ಮಾಡುವುದು. ಬಡಕುಟುಂಬಗಳಿಗೆ ಆರೋಗ್ಯ ವಿಮೆ ಜಾರಿ, ಎಲ್ಲಾ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸಾರ್ವಜನಿಕ ಹಣ ಹೂಡಿಕೆ. ಜೀವ ಉಳಿಸುವ ಔಷಧಿಗಳನ್ನು ಕಡಿಮೆ ಬೆಲೆಗಳಲ್ಲಿ ಒದಗಿಸುವುದು, ಔಷಧಿಗಳ ಬೆಲೆ ಏರಿಕೆ ತಡೆಯಲು ಕ್ರಮ.

ಮಹಿಳೆ ಮತ್ತು ಮಕ್ಕಳು : ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಒದಗಿಸಲು ಶಾಸನ, ಗೃಹಹಿಂಸೆ ಮತ್ತು ಲಿಂಗತಾರತಮ್ಯದ ವಿರುದ್ಧ ಕಾನೂನು ಜಾರಿ, ಪಂಚಾಯತಿಗಳ ಆದಾಯದ ಶೇಕಡ 33 ರಷ್ಟನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮೀಸಲಿಡುವುದು, ಕುಡಿಯುವ ನೀರು, ನೈರ್ಮಲ್ಯ, ಪ್ರಾಥಮಿಕ ಶಿಕ್ಷಣ, ಆರೋಗ್ಯ ಮತ್ತು ಪೌಷ್ಠಿಕ ಆಹಾರ ಮೊದಲಾದ ವಿಷಯಗಳಲ್ಲಿ ಜವಾಬ್ದಾರಿ ಹೊತ್ತುಕೊಳ್ಳಲು ಮಹಿಳೆಯರಿಗೆ ಪ್ರೋತ್ಸಾಹ, ಮಹಿಳೆಯರಿಗೆ ಮನೆ ಹಾಗೂ ಭೂಮಿಯಂತಹ ಆಸ್ತಿಯ ಒಡೆತನದ ವಿಷಯದಲ್ಲಿ ಮಹಿಳೆಯರಿಗೆ ಪುರುಷರೊಂದಿಗೆ ಸಮಾನ ಹಕ್ಕುಗಳು, ಮಕ್ಕಳ ಹಕ್ಕುಗಳಿಗೆ ರಕ್ಷಣೆ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಪ್ರಯತ್ನ, ಹೆಣ್ಣು ಮಗುವಿನ ಹಕ್ಕುಗಳಿಗೆ ರಕ್ಷಣೆ.

ಆಹಾರ ಭದ್ರತೆ : ಆಹಾರ ಮತ್ತು ಪೌಷ್ಠಿಕತೆಯ ಭದ್ರತೆಗಾಗಿ ಒಂದು ಸಮಗ್ರ ಕಾರ್ಯವ್ಯೂಹ ರಚನೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು, ಮುಖ್ಯವಾಗಿ ಅತ್ಯಂತ ಬಡ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಅತ್ಯಂತ ನಿರ್ಗತಿಕರಿಗೆ ಆಹಾರಧಾನ್ಯಗಳನ್ನು ಒದಗಿಸುವ ಯೋಜನೆ, ಆಹಾರಧಾನ್ಯಗಳ ತೀವ್ರ ಕೊರತೆಯಿರುವ ಪ್ರದೇಶಗಳಲ್ಲಿ ದಾನ್ಯಬ್ಯಾಂಕ್‌ಗಳನ್ನು ಸ್ಥಾಪಿಸುವುದೂ ಭಾರತ ಆಹಾರ ನಿಗಮದ ಕಾರ್ಯಾಚರಣೆಯನ್ನು ಉತ್ತಮಪಡಿಸಿ ಆಹಾರಸಬ್ಸಿಡಿಯ ಹೊರೆಯನ್ನು ಹೆಚ್ಚಿಸುವ ಅದರ ಅಸಮರ್ಥತೆಗಳನ್ನು ನಿಯಂತ್ರಿಸುವುದು. ಪೌಷ್ಠಿಕತೆಯ ಕಾರ್ಯಕ್ರಮಗಳನ್ನು, ಮುಖ್ಯವಾಗಿ ಹೆಣ್ಣು ಮಗುವಿಗಾಗಿ ವಿಸ್ತರಿಸುವುದು.

ಪಂಚಾಯತ್ ರಾಜ್ಯ : ಬಡತನ ನಿವಾರಣೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ನೀಡಲಾದ ಹಣವನ್ನು ವಿನಿಯೋಗಿಸಲು ವಿಳಂಬ ಮಾಡುವುದನ್ನು ಅಥವಾ ಬೇರೆ ಉದ್ದೇಶಗಳಿಗೆ ವೆಚ್ಚ ಮಾಡುವುದನ್ನು ತಡೆಯಲು ಕ್ರಮ, ಪಂಚಾಯತಿಗಳಿಗೆ ನೇರವಾಗಿ





ನಿಷ್ಟ ಕಾರ್ಯಕ್ರಮ

...ಸು ನೀಡುವುದನ್ನು ಪರಿಶೀಲಿಸುವುದು. ...ಯತ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ...ವುದು. ಗ್ರಾಮ ಸಭೆಗಳಿಗೆ ಹೆಚ್ಚಿನ ಅಧಿಕಾರ ...ವುದು.

...ಷ್ಟ- ಜಾತಿ ಮತ್ತು ಪಂಗಡಗಳು : ...ವನ್ನು ಅವಲಂಭಿಸಿ ಬದುಕುವ ದುರ್ಬಲ ...ವವರಿಗೆ ಸಾಮಾನ್ಯ ಅರಣ್ಯ ಸಂಪತ್ತಿನ ಮೇಲೆ ...ನ, ಹಕ್ಕುಗಳನ್ನು ನೀಡುವುದು, ಎಲ್ಲಾ ...ಲಾತಿ ಕೋಟಾಗಳನ್ನು ನಿಗದಿತ ಅವಧಿಯಲ್ಲಿ ... ಮಾಡುವುದು, ಎಲ್ಲಾ ಮೀಸಲಾತಿಗಳನ್ನು ...ಢೀಕರಿಸಲು ಒಂದು ಮೀಸಲಾತಿ ...ಯನ್ನು ರಚಿಸಬಹುದು, ದಲಿತರ ಮತ್ತು ...ವಾಸಿಗಳ ಭೂಮಿಗೆ ನೀರಾವರಿಯನ್ನು ...ಸುವ ಸಮಗ್ರ ಕಾರ್ಯಕ್ರಮ, ಭೂಮಿತಿ ... ಮತ್ತು ಭೂಮಿಯ ಮರುವಿತರಣೆ ಕಾನೂನು ... ಮೂಲಕ ಭೂಹೀನ ಕುಟುಂಬಗಳಿಗೆ ... ವಿತರಣೆ ಮಾಡುವುದು, ಭೂಮಿತಿ ಕಾಯ್ದೆ ...ಗೊಳಿಸುವುದನ್ನು ನಿರ್ಭಂದಿಸುವುದು, ...ವಾಸಿಗಳ ಹಕ್ಕುಗಳಿಗೆ ರಕ್ಷಣೆ, ತೀವ್ರವಾದಿಗಳ ...ಾಚಾರ ಮತ್ತು ಭಯೋತ್ಪಾದಕ ...ವಟಿಕೆಗಳ ಹಿಂದೆ ಇರುವ ಸಾಮಾಜಿಕ, ...ಕ ಪ್ರಶ್ನೆಗಳನ್ನು ಇತ್ಯರ್ಥಪಡಿಸುವುದು, ಸುಳ್ಳು ...ಕೌಂಟರ್‌ಗಳನ್ನು ನಿರ್ಬಂಧಿಸುವುದು, ...ಗೀ ರಂಗದಲ್ಲಿಯೂ ಮೀಸಲಾತಿಯನ್ನು ...ಗೊಳಿಸುವ ಬಗ್ಗೆ ಚರ್ಚೆ ಆರಂಭಿಸುವುದು.

...ಲಭೂತ ಸೌಕರ್ಯ : ರಸ್ತೆಗಳು, ...ರಿಗಳು, ಬಂದರುಗಳು, ರೈಲ್ವೆ, ವಿದ್ಯುತ್, ... ಸರಬರಾಜು, ಒಳಚರಂಡಿ ಮತ್ತು ...ಲ್ಯದಂತಹ ಮೂಲಭೂತ ಸೌಕರ್ಯಗಳಿಗೆ ...ತ ಹೆಚ್ಚಿನ ಆದ್ಯತೆ, ಖಾಸಗೀರಂಗದ ...ವನ್ನು ವಿಸ್ತರಿಸುವಾಗಲೇ ಮೂಲಭೂತ ...ರ್ಯ ವಿಸ್ತರಣೆಗೆ ಸಾರ್ವಜನಿಕ ಹೂಡಿಕೆ ...ಸುವುದು, ವಿದ್ಯುತ್ ಕಾಯ್ದೆ 2003ನ್ನು ಪುನರ್ ...ಲನೆಗೆ ಒಳಪಡಿಸುವುದು, 2004 ಜೂನ್ ...ಳಗೆ ವಿದ್ಯುತ್ ಮಂಡಳಿಗಳನ್ನು ತೆಗೆದು ...ಬೇಕೆಂಬ ಗಡವು ಮುಂದೆಹಾಕುವುದು, ...ತ್ ಉತ್ಪಾದನೆ ಮತ್ತು ವಿತರಣೆಯಲ್ಲಿ ಖಾಸಗಿ ...ಕ್ಕೆ ಹೆಚ್ಚಿನ ಪಾತ್ರ ಒದಗಿಸುವುದು.

...ರೈಲುಗಳ ಮತ್ತು ರೈಲು ಮಾರ್ಗಗಳ ..., ನಗರವಾಸಿಗಳ ಸಮಸ್ಯೆಗಳತ್ತ ...ನ, ಮುಖ್ಯವಾಗಿ ಕೊಳಚೆ ನಿವಾಸಿಗಳ ...ಕತೆಗಳನ್ನು ಈಡೇರಿಸುವುದು, ಬಲವಂತ ... ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವುದು, ನಗರ, ...ನಗರ ಪ್ರದೇಶಗಳ ಹಾಗೂ ಗ್ರಾಮೀಣ ...ಶಗಳ ಬಡವರಿಗೆ ವಸತಿ ಸೌಕರ್ಯ ...ವ್ಯಾಪಕ ಕಾರ್ಯಕ್ರಮ ರೂಪಿಸುವುದು.

ಗ್ರಾಮೀಣ ರಸ್ತೆಗಳು, ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ, ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿಗಳಿಗೆ ಆದ್ಯತೆ ನೀಡುವುದು, ನೆನೆಗುದಿಗೆ ಬಿದ್ದಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು.

ಸಾಮಾಜಿಕ ಸೌಹಾರ್ದತೆ, ಅಲ್ಪಸಂಖ್ಯಾತರ ಕಲ್ಯಾಣ: 1992 ರ ಪೂಜಾಸ್ಥಳಗಳ (ವಿಶೇಷ ಏರ್ಪಾಡು) ಕಾಯ್ದೆ ಜಾರಿಗೆ ಬದ್ಧತೆ, ಅಯೋಧ್ಯಾ ವಿವಾದ ಇತ್ಯರ್ಥಕ್ಕಾಗಿ ನ್ಯಾಯಾಲಯದ ತೀರ್ಪಿಗೆ ಕಾಯುತ್ತಿರುವಾಗಲೇ ವಿವಾದದ ಎರಡೂ ಕಡೆಯವರ ನಡುವೆ ಮಾತುಕತೆಯ ಮೂಲಕ ಸೌಹಾರ್ದಯುತ ಒಪ್ಪಂದಕ್ಕೆ ಬರುವುದಕ್ಕೆ ಪ್ರೋತ್ಸಾಹ ನೀಡುವುದು, ಕೋಮು ಹಿಂಸಾಚಾರ ತಡೆಗಟ್ಟಲು ಒಂದು ಮಾದರೀ ಸಮಗ್ರ ಶಾಸನ ರೂಪಿಸುವುದು ಮತ್ತು ರಾಜ್ಯಗಳಲ್ಲೂ ಅದನ್ನು ಅಂಗೀಕರಿಸಲು ಪ್ರೋತ್ಸಾಹಿಸುವುದು, ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳ ಆಯೋಗವನ್ನು ರಚಿಸಲು ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರುವುದು, ಅಲ್ಪಸಂಖ್ಯಾತರನ್ನು ಸಾಮಾಜಿಕವಾಗಿ




ಮತ್ತು ಆರ್ಥಿಕವಾಗಿ ಸಶಕ್ತಗೊಳಿಸಲು ಅವರ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳತ್ತ ವಿಶೇಷ ಗಮನ ನೀಡುವುದು, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ನಡುವೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವಿಭಾಗಗಳ ಕಲ್ಯಾಣ ಹೇಗೆ ಸಾಧ್ಯ ಎಂದು ಅಧ್ಯಯನ ಮಾಡಿ ವರದಿ ನೀಡಲು ಒಂದು ರಾಷ್ಟ್ರೀಯ ಆಯೋಗ ರಚಿಸುವುದು, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಅಗತ್ಯವಿರುವಷ್ಟು ಹಣಕಾಸು ನೀಡುವುದು, ಅಲ್ಪಸಂಖ್ಯಾತರ ಆಯೋಗಕ್ಕೆ ಸಂವಿಧಾನಾತ್ಮಕ ಸ್ಥಾನಮಾನ ನೀಡುವ ಕುರಿತು ಪರಿಶೀಲಿಸುವುದು, ಸಂವಿಧಾನದ 345 ಮತ್ತು 347ನೇ ಕಲಮುಗಳ ಪ್ರಕಾರ ಉರ್ದು ಭಾಷೆಯನ್ನು ಪ್ರೋತ್ಸಾಹಿಸುವುದು. ರಾಷ್ಟ್ರೀಯ ಸಮಗ್ರತಾ ಮಂಡಳಿಯನ್ನು ಪುನರ್ರಚಿಸಿ ಅದರ ಮೂಲ ಉದ್ದೇಶ ಜಾರಿಯಾಗುವಂತೆ ನೋಡಿಕೊಳ್ಳುವುದು.

ಜಲಸಂಪನ್ಮೂಲಗಳು : ನದಿಗಳ ಜೋಡಣೆಯ ಸಾಧ್ಯತೆಯನ್ನು ಸಮಗ್ರವಾಗಿ ಪರಿಶೀಲಿಸುವುದು, ಇತ್ಯರ್ಥವಾಗದೆ ಉಳಿದಿರುವ ಕಾವೇರಿ ನದಿ ನೀರಿನ ವಿವಾದದಂತಹ ವಿವಾದಗಳನ್ನು ಇತ್ಯರ್ಥಪಡಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದೂ ನಗರಗಳ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಕ್ರಮ, ಚೆನ್ನೈಯಿಂದ ಆರಂಭಗೊಂಡು ಕೋರಮಂಡಲ್ ಕರಾವಳಿಗುಂಟ ಉಪ್ಪು ನೀರು ತಿಳಿಮಾಡುವ ಘಟಕಗಳ ಸ್ಥಾಪನೆ, ಬೆಟ್ಟ ಪ್ರದೇಶಗಳಲ್ಲಿ ವಾಸಿಸುವ ಜನರ ಸಮಸ್ಯೆಗಳತ್ತ ಗಮನ. ಗ್ರಾಮೀಣ ಹಾಗೂ ನಗರ ಪ್ರದೇಶಗಳ ಜನತೆಯ ಕುಡಿಯುವ ನೀರಿನ ಪ್ರಶ್ನೆಗೆ ಅತಿ ಹೆಚ್ಚಿನ ಆದ್ಯತೆ, ಮಳೆ ನೀರಿನ ಕೊಯ್ಲು, ಕೆರೆಗಳ ಹೂಳೆತ್ತುವುದು ಇತ್ಯಾದಿ.

ಪ್ರಾದೇಶಿಕ ಅಭಿವೃದ್ಧಿ, ಕೇಂದ್ರ-ರಾಜ್ಯ ಸಂಬಂಧಗಳು: ರಾಜ್ಯಗಳ ನಡುವೆ ಮತ್ತು ರಾಜ್ಯಗಳ ಒಳಗೆ ಹೆಚ್ಚುತ್ತಿರುವ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಆರ್ಥಿಕ, ಆಡಳಿತಾತ್ಮಕ, ಹಣ ಹೂಡಿಕೆಯ ಮತ್ತಿತರ ಕ್ರಮಗಳನ್ನು ಕೈಗೊಳ್ಳುವುದು, ಹಿಂದುಳಿದ ರಾಜ್ಯಗಳ ಅನುದಾನ ನಿಧಿ ರಚಿಸುವ ಕುರಿತು ಆಲೋಚನೆ, ಪೂರ್ವ ಮತ್ತು ಈಶಾನ್ಯ ಪ್ರದೇಶಗಳ ತೀವ್ರ ಕೈಗಾರೀಕರಣಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು.

ರಾಜ್ಯಗಳ ಸಾಲದ ಹೊರೆಯನ್ನು ತಗ್ಗಿಸಲು ಪಾರದರ್ಶಕ ಕ್ರಮ, ಬಡ ಮತ್ತು ಹಿಂದುಳಿದ ರಾಜ್ಯಗಳಿಗೆ ವಿಶೇಷ ಆರ್ಥಿಕ ನೆರವು, ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ, ಬಿಹಾರ, ಜಮ್ಮು ಮತ್ತು ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳಿಗೆ ಹಿಂದೆ ಆಶ್ವಾಸನೆ ನೀಡಲಾದ ವಿಶೇಷ ಪ್ಯಾಕೇಜುಗಳ ಜಾರಿ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವುದು, ಪ್ರತ್ಯೇಕ ತೆಲಂಗಾಣ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಸೂಕ್ತ ಸಮಯದಲ್ಲಿ ವ್ಯಾಪಕ ಚರ್ಚೆಯ ನಂತರ ಎತ್ತಿಕೊಳ್ಳುವುದು, ಸರ್ಕಾರಿಯಾ ಆಯೋಗವು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಬಂಧಗಳನ್ನು ಪರಿಶೀಲಿಸಿ ಈಗ ಸಾಕಷ್ಟು ಕಾಲ ಗತಿಸಿದ್ದು ಬದಲಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲು ಒಂದು ಹೊಸ ಆಯೋಗವನ್ನು ನೇಮಿಸುವುದು.

ಜಮ್ಮು ಕಾಶ್ಮೀರ- ಈಶಾನ್ಯ ರಾಜ್ಯಗಳು: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ಕಾಲಮನ್ನು ಗೌರವಿಸಲು



ಬದ್ಧತೆ, ರಾಜ್ಯ ಸರ್ಕಾರದೊಂದಿಗೆ ಸಮಾಲೋಚನೆ ಮಾಡುತ್ತಾ ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಗುಂಪುಗಳೊಂದಿಗೆ ಮಾತುಕತೆಗಳನ್ನು ಮುಂದುವರೆಸುವುದು, ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ರಾಜ್ಯ ಸರ್ಕಾರಕ್ಕೆ ಎಲ್ಲಾ ಅಗತ್ಯ ನೆರವು ನೀಡುವುದು, ವಿದ್ಯುತ್, ಪ್ರವಾಸೋದ್ಯಮ, ಕರಕುಶಲತೆಗಳು ಮತ್ತು ರೇಶ್ಮೆಯಂತಹ ಕೇಂದ್ರಗಳಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುವುದು.

ಈಶಾನ್ಯ ರಾಜ್ಯಗಳಲ್ಲಿನ ಭಯೋತ್ಪಾದನೆ, ಹಿಂಸಾಚಾರ ಗಡಿಯಾಚೆಯಿಂದ ನುಸುಳುವಿಕೆ ದೃಢ ನಿಲುಮೆಯಿಂದ ತಡೆಗಟ್ಟಲು ರಾಷ್ಟ್ರೀಯ ಆದ್ಯತೆ ನೀಡುವುದು, ಮೂಲಭೂತ ಸೌಕರ್ಯಗಳನ್ನು ವಿಸ್ತರಿಸಲು ವಿಶೇಷ ನೆರವು, ಈಶಾನ್ಯ ರಾಜ್ಯಗಳ ಮಂಡಳಿಯನ್ನು ಬಲಪಡಿಸುವುದು, ರಾಜ್ಯಗಳ ಗಡಿಗಳನ್ನು ಉಳಿಸಿಕೊಳ್ಳುವುದು.

ಆಡಳಿತಾತ್ಮಕ ಸುಧಾರಣೆಗಳು: ಸಾರ್ವಜನಿಕ ಆಡಳಿತ ವ್ಯವಸ್ಥೆಯನ್ನು ಪರಿಷ್ಕರಿಸುವ ರೂಪರೇಷೆಗಳನ್ನು ಸಿದ್ಧಪಡಿಸಲು ಒಂದು ಆಡಳಿತಾತ್ಮಕ ಸುಧಾರಣೆಗಳ ಆಯೋಗವನ್ನು ರಚಿಸುವುದು. ಮಾಹಿತಿ ಹಕ್ಕು ಕಾಯ್ದೆಯನ್ನು ಇನ್ನಷ್ಟು ಅರ್ಥಪೂರ್ಣ ಗೊಳಿಸುವುದು, ಲೋಕಪಾಲ್ ಮಸೂದೆಯನ್ನು ಕಾನೂನಾಗಿ ಪಾಸ್ ಮಾಡುವುದು, ಉಚ್ಛ ನ್ಯಾಯಾಲಯಗಳಲ್ಲಿ ಮತ್ತು ಕೆಳ ನ್ಯಾಯಾಲಯಗಳಲ್ಲಿ ಆಗುತ್ತಿರುವ ವಿಳಂಬವನ್ನು ಕಡಿಮೆ ಮಾಡಲು ಮುತುವರ್ಜಿ ವಹಿಸುವುದು, ಕಾನೂನು ನೆರವು ಸೇವೆಯ ವಿಸ್ತರಣೆ, ನ್ಯಾಯಾಂಗ ಸುಧಾರಣೆಗಳಿಗೆ ಒತ್ತು, ಚುನಾಣಾ ಸುಧಾರಣೆಗಳ ಭಾಗವಾಗಿ ಚುನಾವಣೆಗಳನ್ನು ಸರ್ಕಾರದ ವೆಚ್ಚದಲ್ಲಿ ನಡೆಸುವತ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

ಕೈಗಾರಿಕೆ: ನಿಯಂತ್ರಣಗಳನ್ನು ತೆಗೆದು ಹಾಕುವುದು, ಅಗತ್ಯಬಿದ್ದಾಗ ಇನ್‌ಸೆಂಟಿವ್ಸ್ ನೀಡುವುದು ಮೊದಲಾದ ಕ್ರಮಗಳೂ ಸೇರಿದಂತೆ ಕೈಗಾರಿಕಾ ಬೆಳವಣಿಗೆಗೆ ವ್ಯಾಪಕವಾದ ಕ್ರಮಗಳನ್ನು ಕೈಗೊಳ್ಳುವುದು, ವಿದೇಶಿ ನೇರ ಹೂಡಿಕೆಗೆ ಪ್ರೋತ್ಸಾಹ ಮುಂದುವರೆಸುವುದು, ದೇಶೀಯ ಕೈಗಾರಿಕೆಗಳಿಗೆ ಅಗತ್ಯ ಬೆಂಬಲ, ಗುಡಿ ಕೈಗಾರಿಕೆಗಳು ಹಾಗೂ ಕರಕುಶಲ ಕೈಗಾರಿಕೆಗಳಿಗೆ ಪ್ರೋತ್ಸಾಹ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಬೃಹತ್ ಬೆಂಬಲ ಒದಗಿಸಲು ಒಂದು ವಿಶೇಷ ಪ್ಯಾಕೇಜ್ ಪ್ರಕಟಿಸುವುದು, ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಕ್ರಮ.

ಹಣಕಾಸು ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆಯನ್ನು ವಿಸ್ತರಿಸುವುದು, ಸಾರ್ವಜನಿಕ ರಂಗದ ಬ್ಯಾಂಕುಗಳಿಗೆ ಆಡಳಿತಾತ್ಮಕ ಸ್ವಾಯತ್ತತೆ ನೀಡುವುದು, ಹೂಡಿಕೆದಾರರಿಗೆ ಮತ್ತು ಉಳಿತಾಯದಾರರಿಗೆ ಮುಖ್ಯವಾಗಿ ಪಿಂಚಣಿದಾರರಿಗೆ ಮತ್ತು ಹಿರಿಯ ನಾಗರಿಕರಿಗೆ ಇನ್‌ಸೆಂಟಿವ್ಸ್ ನೀಡುವುದು, ಕಾರ್ಮಿಕರ ಭವಿಷ್ಯನಿಧಿ ಬೋರ್ಡಿನ ಅನುಮತಿ ಪಡೆಯದೆ ಯಾವುದೇ ತೀರ್ಮಾನ ಮಾಡದಿರುವುದು, ಎಲ್ಲಾ ಬ್ಯಾಂಕುಗಳ ಮುಖ್ಯವಾಗಿ ನಗರ ಸಹಕಾರಿ ಬ್ಯಾಂಕುಗಳ ನಿಯಂತ್ರಣವನ್ನು ಪರಿಣಾಮಕಾರಿ ಯಾಗಿಸುವುದು, ಎಲ್‌ಐಸಿ ಮತ್ತು ಜಿಐಸಿ ಸಾರ್ವಜನಿಕ ರಂಗದಲ್ಲೇ ಉಳಿದು ತಮ್ಮ ಸಾಮಾಜಿಕ ಪಾತ್ರವನ್ನು ಮುಂದುವರೆಸುವುದು, ಖಾಸಗಿ ಬ್ಯಾಂಕು ಮತ್ತು ವಿಮಾ ಕಂಪೆನಿಗಳ ಮೇಲೆ ಹೇರಲಾದ ಸಾಮಾಜಿಕ ಕರ್ತವ್ಯಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ನೋಡಿಕೊಳ್ಳುವುದು.

ಕಾರ್ಮಿಕರು: ಕಾರ್ಮಿಕರ ಕಲ್ಯಾಣಕ್ಕೆ ಬದ್ಧ, ಮುಖ್ಯವಾಗಿ ಶೇಕಡಾ 93 ರಷ್ಟಿರುವ ಅಸಂಘಟಿತ ವಲಯದ ಕಾರ್ಮಿಕರು, ನೇಕಾರರು, ಕೈಮಗ್ಗದ ಕೆಲಸಗಾರರು, ಬೀದಿ ಕಾರ್ಮಿಕರು ಮೊದಲಾದವರಿಗೆ ಸಾಮಾಜಿಕ ಸುರಕ್ಷೆ, ಆರೋಗ್ಯ ವಿಮೆ ಮತ್ತು ಇತರ

ಪುಟ 8 ಕ್ಕೆ

ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ

ಸಿಪಿಐ(ಎಂ)ನ ಪ್ರಸ್ತಾವಗಳು

ಕನಿಷ್ಠ ಸಾಮಾನ್ಯ ಕಾರ್ಯಕ್ರಮವು ಒಳಗೊಳ್ಳಬೇಕಾದ ಪ್ರಮುಖ ಅಂಶಗಳು

1. ಕೋಮುವಾದೀಕರಣ ಪ್ರಕ್ರಿಯೆಯನ್ನು ತಿರುಗಿಸುವುದು. ಪ್ರಭುತ್ವ ಮತ್ತು ಅದರ ಸಂಸ್ಥೆಗಳೊಳಗೆ, ಶಿಕ್ಷಣ, ಸಂಶೋಧನಾ ವಿಭಾಗಗಳು, ಸಾಂಸ್ಕೃತಿಕ ಸಂಸ್ಥೆಗಳೊಳಗೆ ನುಸುಳಿರುವ ಕೋಮುವಾದವನ್ನು ಹೊರಹಾಕಿ ಜಾತ್ಯಾತೀತ ವ್ಯವಸ್ಥೆಯನ್ನು ಬಲಪಡಿಸುವುದು.

2. ಕೃಷಿ, ಆಮದು ನೀತಿ, ಸಾರ್ವಜನಿಕ ರಂಗ, ಸಣ್ಣ ಪ್ರಮಾಣದ ಕೈಗಾರಿಕೆಗಳು, ಮೂಲಭೂತ ಸೌಕರ್ಯಗಳು, ಹಣಕಾಸು ನೀತಿಗಳು ಮೊದಲಾದ ರಂಗಗಳಿಗೆ ಸಂಬಂಧಪಟ್ಟ ವಾಜಪೇಯಿ ಸರ್ಕಾರದ ಹಾನಿಕಾರಕ ನೀತಿಗಳಿಂದ ಸ್ಪಷ್ಟವಾಗಿ ಭಿನ್ನವಾದ ಆರ್ಥಿಕ ಧೋರಣೆಗಳನ್ನು ಅನುಸರಿಸುವುದು.

3. ಮೂಲಭೂತ ಅಗತ್ಯತೆಗಳು ಮತ್ತು ಸಾಮಾಜಿಕ ಪ್ರಶ್ನೆಗಳು: ಜನತೆಗೆ ಆಹಾರದ ಭದ್ರತೆಯನ್ನು ಒದಗಿಸಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದು. ತುರ್ತಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಗೆ ಕ್ರಮ ಕೈಗೊಳ್ಳುವುದು. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಹೊಸ ಮಧ್ಯಪ್ರವೇಶ.

4. ಕೇಂದ್ರ- ರಾಜ್ಯ ಸಂಬಂಧಗಳು: ರಾಜ್ಯಗಳ ಹಿತದೃಷ್ಟಿಯಿಂದ ಕೇಂದ್ರ- ರಾಜ್ಯ ಸಂಬಂಧಗಳನ್ನು ಪುನರ್ರಚಿಸುವುದು ಅಗತ್ಯವಿದೆ. ಹಿಂದಿನ ಸರ್ಕಾರದ ಆರ್ಥಿಕ ನಿರಂಕುಶಾಧಿಕಾರದಿಂದ ರಾಜ್ಯಗಳನ್ನು ವಿಮೋಚಿಸಬೇಕಾಗಿದೆ.

5. ವಿದೇಶಾಂಗ ನೀತಿ: ಬಿಜೆಪಿ ನೀತಿಯನ್ನು ಹೊರ ಎಸೆಯಬೇಕಾಗಿದೆ. ಅಮೇರಿಕಾದ ವ್ಯೂಹಾತ್ಮಕ ಯೋಜನೆಗಳಿಂದ ಪ್ರತ್ಯೇಕವಾದ, ಬಹುಧ್ರುವೀಕರಣವನ್ನು ಪ್ರೋತ್ಸಾಹಿಸುವ ಸ್ವತಂತ್ರ ವಿದೇಶಾಂಗ ನೀತಿಯನ್ನು ರೂಪಿಸಬೇಕು.

6. ಪ್ರಜಾಸತ್ತಾತ್ಮಕ ಹಕ್ಕುಗಳು: ನಾಗರೀಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಡಿತಮಾಡುವ ಕ್ರಮಗಳನ್ನು ಬದಲಾಯಿಸಬೇಕು ಮತ್ತು ದುಡಿಯುವ ಜನತೆಯ ಪ್ರತಿಭಟಿಸುವ ಹಕ್ಕಿಗೆ ರಕ್ಷಣೆ.

ಮೇಲಿನ ಈ 6 ಪ್ರಮುಖ ಅಂಶಗಳ ಆಧಾರದಲ್ಲಿ ಈ ಕೆಳಗಿನ ಪ್ರಸ್ತಾವಗಳನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರದಲ್ಲಿ ಸೇರಿಸಬೇಕೆಂದು ಸಿಪಿಐ(ಎಂ) ಸೂಚಿಸಿತು.

1. ಜಾತ್ಯಾತೀತತೆಯನ್ನು ಬಲಪಡಿಸುವುದು: ಆರಂಭದಲ್ಲೇ ಇದರ ಪ್ರಸ್ತಾಪವಿರಬೇಕು. ಜಾತ್ಯಾತೀತತೆಯನ್ನು ಪುನರ್‌ಸ್ಥಾಪಿಸಿ ಬಲಪಡಿಸಲು ಪ್ರಭುತ್ವದ ಸಂಸ್ಥೆಗಳಲ್ಲಿ, ಶಿಕ್ಷಣ ವ್ಯವಸ್ಥೆಯಲ್ಲಿ, ಸಂಶೋಧನೆ ಮತ್ತು ಸಾಂಸ್ಕೃತಿಕ ಅಂಗಗಳಲ್ಲಿ ಹರಡಿರುವ ಕೋಮುವಾದಿ ಪ್ರಭಾವವನ್ನು ಕಿತ್ತುಹಾಕಬೇಕು.

ಅಯೋಧ್ಯಾ ಕುರಿತಾದ ಮತ್ತು ಪೂಜಾ ಸ್ಥಳಗಳ ಕಾಯ್ದೆ ಕುರಿತಾದ ಪ್ರಸ್ತಾಪವನ್ನು ಇಲ್ಲಿ ತರಬಹುದು. ಕೋಮು ಸೌಹಾರ್ದತೆಯನ್ನು ಹಾಳುಮಾಡುವ ಮತ್ತು ಅಶಾಂತಿಯನ್ನು ಉಂಟುಮಾಡುವ ಕೋಮುವಾದಿ ಪ್ರಚಾರವನ್ನು ತಡೆಯಲು ಸರ್ಕಾರ ಎಚ್ಚರವಹಿಸಲು ಮತ್ತು ದೃಢವಾಗಿ ಮಧ್ಯಪ್ರವೇಶ ಮಾಡಲು ಬದ್ಧವಾಗಿದೆ ಎಂದು ಇಲ್ಲಿ ಸ್ಪಷ್ಟಪಡಿಸಬೇಕು.

2. ಆರ್ಥಿಕ ಧೋರಣೆಗಳು : ಅ) ಭೂ ಸುಧಾರಣೆಗಳಿಗೆ ಒಂದು ಪ್ರಮುಖ ಸ್ಥಾನವಿರಬೇಕು. ರಾಜ್ಯ ಸರ್ಕಾರಗಳು ಭೂಮಿತಿ ಕಾಯ್ದೆಗಳನ್ನು ಜಾರಿ ಮಾಡುವ, ಅವುಗಳಲ್ಲಿನ ಲೋಪದೋಷಗಳನ್ನು ತೆಗೆದುಹಾಕುವ, ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಮತ್ತು ಗ್ರಾಮೀಣ ಬಡವರಿಗೆ ವಿತರಣೆ ಮಾಡುವಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವ ಭರವಸೆ ನೀಡಬೇಕು.

ಬ) ನವರತ್ನಗಳಲ್ಲದೆ, ಸಾರ್ವಜನಿಕ ರಂಗದ ಲಾಭದಾಯಕ ಘಟಕಗಳನ್ನು ಮತ್ತು ಆಯಕಟ್ಟಿನ ಕ್ಷೇತ್ರದ ಘಟಕಗಳನ್ನು ಖಾಸಗೀಕರಣ ಮಾಡಲಾಗದು ಎಂಬ ದೃಢವಾದ ಬದ್ಧತೆ ವ್ಯಕ್ತಪಡಿಸಬೇಕು. ಮೂಲಭೂತ ಸೌಕರ್ಯಗಳ ವಿಷಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ರಂಗದ ಪಾಲುದಾರಿಗೆ ಇತ್ಯಾದಿ ವಿಷಯಗಳು ಇರಬೇಕಾಗಿಲ್ಲ.

3) ಉದ್ಯೋಗ : ಉದ್ಯೋಗ ಗ್ಯಾರಂಟಿ ಕಾಯ್ದೆ ಜಾರಿಗೆ ಬರುವ ತನಕ, ತಕ್ಷಣದಿಂದಲೇ 'ಕೂಲಿಗಾಗಿ ಕಾಳು' ಯೋಜನೆ ಆರಂಭಿಸುವ ಪ್ರಸ್ತಾವ ಇರಬೇಕು.

4. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು 'ದೀರ್ಘಕಾಲಿಕ ಧಾನ್ಯ ನೀತಿ ಸಮಿತಿ'ಯ ಶಿಫಾರಸಿನಂತೆ ಸಾರ್ವತ್ರಿಕವಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ಇರಬೇಕು. ಅಲ್ಲಿಯವರೆಗೆ ಕಾರ್ಯಕ್ರಮದ ಕರಡಿನಲ್ಲಿ ಸೂಚಿಸಲಾದ ಕ್ರಮಗಳು ಇರಬಹುದು.



5. ಮಹಿಳೆಯರಿಗೆ ಶಾಸನಸಭೆಗಳಲ್ಲಿ ಮೀಸಲಾತಿಯನ್ನು ನೀಡುವ ಮಸೂದೆಯೊಂದಿಗೆ ಗೃಹ ಹಿಂಸೆ ತಡೆಗಟ್ಟುವ ಕಾನೂನು ತರುವ ಭರವಸೆಯನ್ನು ನೀಡಬೇಕು.

6. ಕೇಂದ್ರ- ರಾಜ್ಯ ಸಂಬಂಧಗಳ ಪ್ರಶ್ನೆ ತುಂಬಾ ಗಂಭೀರವಾದದ್ದು. ಎಲ್ಲಾ ರಾಜ್ಯಗಳು ಆರ್ಥಿಕ ಬಿಕ್ಕಟ್ಟನ್ನು ಅನುಭವಿಸುತ್ತಿವೆ. ಇದನ್ನು ಪ್ರಾದೇಶಿಕ ಅಭಿವೃದ್ಧಿ ಪ್ರಶ್ನೆಯೊಂದಿಗೆ ಜೋಡಿಸದೆ ಪ್ರತ್ಯೇಕವಾಗಿ ಪರಿಗಣಿಸಬೇಕು. ಸರ್ಕಾರಿ ಆಯೋಗದಂತಹ ಇನ್ನೊಂದು ಆಯೋಗ ರಚನೆ ತಕ್ಷಣದ ತುರ್ತು ಸಮಸ್ಯೆಗಳಿಗೆ ಪರಿಹಾರವಾಗದು. ಈ ಕೆಳಗಿನ ಕ್ರಮಗಳನ್ನು ಪರಿಶೀಲಿಸಬೇಕು.

1. ಸಾಲ ಮನ್ನಾ ಮತ್ತು ಸಾಲ ವರ್ಗಾವಣೆಯಂತಹ ಕ್ರಮಗಳ ಮೂಲಕ ಗರಿಷ್ಠ ಪ್ರಮಾಣದ ಪರಿಹಾರ ನೀಡಬೇಕು.
2. ರಾಜ್ಯಗಳ ಸಾಲದ ಬಡ್ಡಿ ದರಗಳನ್ನು ಇಳಿಸಬೇಕು.
3. ತಕ್ಷಣದ ಕ್ರಮವಾಗಿ ರಾಜ್ಯಗಳಿಗೆ ಕೇಂದ್ರದ ತೆರಿಗೆ ಪಾಲನ್ನು ಶೇಕಡ 33 ಕ್ಕೆ ಏರಿಸಬೇಕು.

7. ಹಣಕಾಸು ನೀತಿ: ಪ್ರಮುಖ ತೆರಿಗೆ ಸುಧಾರಣೆಗಳಲ್ಲಿ, ಹೊಸ ಮಾದರಿಯ ತೆರಿಗೆಗಳನ್ನು ಆರಂಭಿಸುವ ಪ್ರಸ್ತಾಪವಿರಬೇಕು. ಕಪ್ಪುಹಣವನ್ನು ಹೊರತೆಗೆದು ಉತ್ಪಾದಕ ಉದ್ದೇಶಗಳಿಗೆ ಬಳಸುವ ಪ್ರಸ್ತಾಪ ಇರಬೇಕು.

8. ಪಂಚಾಯತ್ ರಾಜ್: ಪಂಚಾತ್‌ರಾಜ್ ಸಂಸ್ಥೆಯನ್ನು ಬಲಪಡಿಸುವ ಹೆಸರಿನಲ್ಲಿ ರಾಜ್ಯ ಸರ್ಕಾರಗಳನ್ನು ಕಡೆಗಣಿಸಿ ನೇರವಾಗಿ ಪಂಚಾಯತ್‌ಗಳಿಗೆ ಹಣ ನೀಡುವ ಪ್ರಸ್ತಾವವನ್ನು ಸಿಪಿಐ(ಎಂ) ಬೆಂಬಲಿಸಲಾರದು. ಇಲ್ಲಿ ಸಂವಿಧಾನದ 6ನೇ ಶೆಡ್ಯೂಲ್ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಸ್ತರಿಸುವ ಪ್ರಸ್ತಾಪವು ಸಹ ಇರಬೇಕು.

9. ಪ್ರಾದೇಶಿಕ ಅಭಿವೃದ್ಧಿಯ ಕುರಿತಾದ ವಿಭಾಗದ ಕೊನೆಯ ಪ್ಯಾರದಲ್ಲಿ ಗಂಗಾ- ಪದ್ಮಾ ಪ್ರದೇಶದ ಭೂಸವೆತ ತಡೆಗಟ್ಟಲು ಕ್ರಮ ಕೈಗೊಳ್ಳುವುದನ್ನು ಸೇರಿಸಬೇಕು.

10. ಕಾರ್ಮಿಕರ ಹಕ್ಕುಗಳ ರಕ್ಷಣೆಯಾಗಬೇಕಾದರೆ ಮಾಲೀಕರಿಗೆ ಮನಸ್ಸಿಗೆ ಬಂದಂತೆ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವ ಹಕ್ಕು ಇರಬಾರದು. ಮಾಲೀಕರಿಗೆ ನಮ್ಯತೆ ನೀಡುವ ಪ್ರಸ್ತಾಪವನ್ನು ತೆಗೆದುಹಾಕಬೇಕು. ಬದಲಾಗಿ ಕಾರ್ಮಿಕ ಕಾನೂನುಗಳಿಗೆ ಯಾವುದೇ ಬದಲಾವಣೆಯನ್ನು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿದ ನಂತರವಷ್ಟೇ ಮಾಡಬೇಕು.

11. ವಿದ್ಯುತ್ ವಿತರಣೆಯೂ ಸೇರಿದಂತೆ ಸಾರ್ವಜನಿಕ ಸೇವೆಗಳ ಖಾಸಗೀಕರಣವನ್ನು ಪ್ರೋತ್ಸಾಹಿಸಬಾರದು ಏಕೆಂದರೆ ಅವುಗಳಿಂದ ಜನಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ. ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ 2003ರ ವಿದ್ಯುತ್ ಕಾಯ್ದೆಯನ್ನು ಪರಿಷ್ಕರಿಸಬೇಕು.

12. ಹೊಸ ತಂತ್ರಜ್ಞಾನವನ್ನು ಪ್ರೋತ್ಸಾಹಿಸುವ ಮತ್ತು ಉತ್ಪಾದಕ ಸಂಪನ್ಮೂಲಗಳನ್ನು ವೃದ್ಧಿಸುವ ದೃಷ್ಟಿಯಿಂದ ವಿದೇಶಿ ನೇರ ಹೂಡಿಕೆಯನ್ನು ಸ್ವಾಗತಿಸಬಹುದು. ಆದರೆ 'ಎಫ್‌ಐಐಎಸ್‌ಗೆ ಪ್ರೋತ್ಸಾಹ' ಎಂಬ ಪ್ರಸ್ತಾಪ ಅಗತ್ಯವಿಲ್ಲ.

13. ಆದಿವಾಸಿಗಳಿಗೆ ಅರಣ್ಯ ಪ್ರವೇಶಾಧಿಕಾರ ಹಕ್ಕು ಇದೆ ಎಂದು ಮತ್ತು ಅವರು ಅರಣ್ಯ ಪ್ರದೇಶಗಳಲ್ಲಿ ಪರಂಪರಾಗತವಾಗಿ ಸ್ವಾಧಿನದಲ್ಲಿಟ್ಟುಕೊಂಡಿರುವ ಭೂಮಿಯನ್ನು ಸಕ್ರಮಗೊಳಿಸುವ ಭರವಸೆ ನೀಡಬೇಕು.

14. ಪ್ರಜಾಸತ್ತಾತ್ಮಕ ಹಕ್ಕುಗಳು: POTA ವನ್ನು ರದ್ದು ಮಾಡುವ ಜೊತೆಯಲ್ಲಿ ಮುಷ್ಕರದ ಹಕ್ಕಿಗೆ ಒಂದು ನ್ಯಾಯಬದ್ಧ ವಿಧಾನವಾಗಿ ರಕ್ಷಣೆ ನೀಡಬೇಕು.

15. ವಿಶ್ವ ವ್ಯಾಪಾರ ಸಂಘಟನೆ:WTOದ ಲ್ಲಿ ಈ ಹಿಂದೆ ಮಾಡಲಾದ ಎಲ್ಲ ಒಪ್ಪಂದಗಳನ್ನು ಪರಿಪಾಲಿಸಬೇಕು ಎಂದು ಹೇಳುವ ಬದಲು, ರಾಷ್ಟ್ರೀಯ ಹಿತಗಳನ್ನು ಕಾಪಾಡಲು, ಭಾರತದ ಕೃಷಿ ಮತ್ತು ಕೈಗಾರಿಕೆಗಳಿಗೆ ಒದಗಿಸಲು, ಪುನರ್‌ಚೌಕಾಸಿ ಮಾಡುವುದಕ್ಕೆ ಒತ್ತು ಕೊಡಬೇಕು. ಈ ಹಿನ್ನೆಲೆಯಲ್ಲಿ ಕ್ಯಾನ್‌ಕುನ್‌ನಲ್ಲಿ ಮೂಡಿಬಂದ ಅಭಿವೃದ್ಧಿಶೀಲ ರಾಷ್ಟ್ರಗಳ ವೇದಿಕೆಯನ್ನು ಬಳಸಬೇಕು.

16. ವಿದೇಶಾಂಗ ನೀತಿ: ವಿದೇಶಾಂಗ ನೀತಿಯ ಒಕ್ಕಣೆಯು ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದಷ್ಟನ್ನು ಸಹ ಪ್ರತಿಬಿಂಬಿಸುತ್ತಿಲ್ಲ. ವ್ಯೂಹಾತ್ಮಕ ಸಂಬಂಧಗಳಿಗಾಗಿ ಅಮೇರಿಕ ಒಂದನ್ನು ಮಾತ್ರ ಪರಿಗಣಿಸಿರುವುದು ಒಪ್ಪಲಾಗದು ಮತ್ತು ಅದು ಸ್ವತಂತ್ರ ವಿದೇಶಾಂಗ ನೀತಿ ಪ್ರಸ್ತಾವಕ್ಕೆ ವಿರುದ್ಧವಾಗಿದೆ. ಈ ಭಾಗದಲ್ಲಿ ಸ್ಪಷ್ಟಪಡಿಸಬೇಕಾದದ್ದು:

1. ಭಾರತವು ತನ್ನ ಅಲಿಪ್ತ ನೀತಿ ಪರಂಪರೆಗೆ ಅನುಗುಣವಾಗಿ ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುಸರಿಸುತ್ತದೆ.
2. ವಿದೇಶಾಂಗ ನೀತಿಯು ಬಹು ಧ್ರುವೀಕರಣವನ್ನು ಬೆಂಬಲಿಸುತ್ತದೆ ಮತ್ತು ಇರಾಕ್ ಮೇಲೆ ಸಂಭವಿಸಿದಂತೆ ಯಜಮಾನಿಕೆ ಹಾಗೂ ಆಕ್ರಮಣದಂತಹ ಹೇರಿಕೆಯ ಏಕಪಕ್ಷೀಯ ಪ್ರಯತ್ನಗಳನ್ನು ವಿರೋಧಿಸುತ್ತದೆ.
3. ಬಹುಧ್ರುವೀಕರಣದ ಹಿನ್ನೆಲೆಯಲ್ಲಿ, ಅಮೇರಿಕವೂ ಸೇರಿದಂತೆ ರಶಿಯಾ, ಯುರೋಪ್ ಮತ್ತು ಚೀನಾದೊಂದಿಗೆ ಹತ್ತಿರದ ಸಂಬಂಧ ಬೆಳೆಸುವ ಬದ್ಧತೆ, ಬ್ರೆಜಿಲ್, ದಕ್ಷಿಣ ಆಫ್ರಿಕಾದಂತಹ ಪ್ರಮುಖ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಹತ್ತಿರದ ಸಂಬಂಧವನ್ನು ಬೆಳೆಸುವ ಪ್ರಸ್ತಾಪ ಇರಬೇಕು.
4. ಪಶ್ಚಿಮ ಏಷ್ಯಾದ ಬಗ್ಗೆ ನಮ್ಮ ನೀತಿಯಲ್ಲಿ ತಿದ್ದುಪಡಿ ಅಗತ್ಯವಿದೆ ಮತ್ತು ಅರಬ್ ರಾಷ್ಟ್ರಗಳ ಜೊತೆ ಭಾರತದ ಪರಂಪರಾಗತ ಸಂಬಂಧವನ್ನು ಮತ್ತು ಪಾಲೆಸ್ತೀನ್ ಜನತೆಗೆ ನಮ್ಮ ಬೆಂಬಲವನ್ನು ಪುನರುಚ್ಚರಿಸುವುದು ಅಗತ್ಯವಿದೆ.

ಕೊನೆಯದಾಗಿ, ಹೊಸ ರಾಜ್ಯಗಳ ರಚನೆಯ ಕುರಿತು ಸಿಪಿಐ(ಎಂ) ಮೂಲಭೂತ ನಿಲುವು ಸ್ಪಷ್ಟವಾಗಿದೆ. ದೀರ್ಘ ಹೋರಾಟಗಳ ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾಗಿದ್ದ ಈ ಹೋರಾಟ ಜನತೆಯ ಪ್ರಜಾಸತ್ತಾತ್ಮಕ ಆಶೋತ್ತರಗಳನ್ನು ಪ್ರತಿಬಿಂಬಿಸಿತ್ತು. ಅಂತಹ ರಾಜ್ಯಗಳನ್ನು ಮತ್ತೆ ವಿಭಜಿಸಬಾರದು. ಆದ್ದರಿಂದ ಭಾಷೆಯ ಆಧಾರದಲ್ಲಿ ರಚನೆಯಾದ ರಾಜ್ಯಗಳನ್ನು ವಿಭಜಿಸಿ ಹೊಸ ರಾಜ್ಯಗಳನ್ನು ರಚಿಸುವ ಪ್ರಸ್ತಾಪವನ್ನು ಸಿಪಿಐ(ಎಂ) ಒಪ್ಪುವುದಿಲ್ಲ.

ಸಾಮಾನ್ಯ ಕನಿಷ್ಟ ಕಾರ್ಯಕ್ರಮ..

ಪುಟ 7 ರಿಂದ

ಯೋಜನೆಗಳನ್ನು ವಿಸ್ತರಿಸುವುದು.

ಕಾರ್ಮಿಕರನ್ನು ಮನಸ್ಸಿಗೆ ಬಂದ ತೆಗೆದುಹಾಕುವ ಕ್ರಮಕ್ಕೆ ಆಸ್ಪದ ನೀಡದಿರುವುದ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಗ ಅಗತ್ಯವೆನಿಸಿದರೆ ಕಾರ್ಮಿಕರ ಮತ್ತು ಅವ ಕುಟುಂಬಗಳ ಹಿತಗಳಿಗೆ ಧಕ್ಕೆಯಾಗದಂ ಕಾರ್ಮಿಕ ಸಂಘಗಳೊಂದಿಗೆ ಸಮಗ್ರವಾ ಚರ್ಚಿಸಿದ ನಂತರವಷ್ಟೇ ಅಗತ್ಯ ತಿದ್ದುಪಡಿಗಳ ಮಾಡುವುದು, ಕಾರ್ಮಿಕರಿಗೆ ಸಂಬಂಧಪಟ್ಟ ಎ ಪ್ರಸ್ತಾವಗಳನ್ನು ತ್ರಿಪಕ್ಷೀಯವಾಗಿ ಚರ್ಚಿಸಿ ನಂತರವೇ ಜಾರಿಗೆ ತರುವುದು. ಮುಷ್ಕರದ ಹ ಸೇರಿದಂತೆ ಕಾರ್ಮಿಕರು ಗಳಿಸಿದ ಹಕ್ಕುಗಳ ಮತ್ತು ಸೌಲಭ್ಯಗಳನ್ನು ಕಡಿತಮಾಡದಿರುವುದು

ಸಾರ್ವಜನಿಕರಂಗ: ಒಂದು ಬಲಿಷ್ಠವಾದ ಮ ಪರಿಣಾಮಕಾರಿಯಾದ ಸಾರ್ವಜನಿಕ ರಂಗ ಬದ್ಧತೆ, ಲಾಭದಾಯಕ ಕಂಪೆನಿಗಳ ಖಾಸಗೀಕರ ಮಾಡದಿರುವುದು ಮತ್ತು ಅಂತಹ ಲಾಭದಾಯ ಕಂಪೆನಿಗಳಿಗೆ ಅಗತ್ಯವಾದ ಆಡಳಿತಾತ್ಮಕ ಮ ವಾಣಿಜ್ಯದ ಸ್ವಾಯತ್ತತೆ ನೀಡುವುದು.

ಎಲ್ಲಾ ಖಾಸಗೀಕರಣದ ಪ್ರಕರಣಗಳ ಒಂದೊಂದನ್ನು ಪ್ರತ್ಯೇಕವಾ ಪರಿಶೀಲಿಸಲಾಗುವುದು, 'ನವರತ್ನ' ಕಂಪೆನಿಗಳ ಸಾರ್ವಜನಿಕ ರಂಗದಲ್ಲೇ ಉಳಿಸಿಕೊಳ್ಳುವುದ ಸಾರ್ವಜನಿಕ ರಂಗದ ರೋಗಗ್ರಸ್ತ ಉದ್ದಿಮೆಗ ಆಧುನೀಕರಣ ಹಾಗೂ ಪುನಶ್ಚೇತನ ಕ್ರಮವಹಿಸುವುದು, ಸತತವಾ ನಷ್ಟಕ್ಕೀಡಾಗುತ್ತಿರುವ ಉದ್ದಿಮೆಗಳನ್ನ ಕಾರ್ಮಿಕರಿಗೆ ಬರಬೇಕಾದ ಬಾಕಿ ಹಾಗ ಪರಿಹಾರಗಳನ್ನು ನೀಡಿದ ಬಳಿಕವಷ್ಟೇ ಮಾರಾ ಮಾಡುವುದು ಅಥವಾ ಮುಚ್ಚುವುದು.

ಸಾರ್ವಜನಿಕ ರಂಗದ ಕಂಪೆನಿಗಳ ಮತ ರಾಷ್ಟ್ರೀಕೃತ ಬ್ಯಾಂಕುಗಳು ಬಂಡವಾಳ ಮಾರುಕಟ್ಟೆ ಪ್ರವೇಶಿಸಿ ತಮ್ಮ ಸಂಪನ್ಮೂಲಗಳನ ಹೆಚ್ಚಿಸಿಕೊಳ್ಳಲು ಪ್ರೋತ್ಸಾಹ ನೀಡುಲಾಗುವುದು

ಹಣಕಾಸು ನೀತಿ: 2009 ರೊಳಗಾಗಿ ಹಣಕಾಸ ಕೊರತೆಯನ್ನು ಕೊನೆಗಾಣಿಸುವುದು, ಎಲ ಸಬ್ಸಿಡಿಗಳು ಬಡ ಮತ್ತು ಸಣ್ಣ ಹಾಗೂ ಅಂಚಿ ರೈತರಿಗೆ, ಕೃಷಿ ಕಾರ್ಮಿಕರಿಗೆ ಮತ್ತು ನಗರಗ ಬಡವರಿಗೆ ಮಾತ್ರ ತಲಪುವ ಗು ಇಟ್ಟುಕೊಳ್ಳುವುದು. ಇದಕ್ಕಾಗಿ ಒಂದ ಕಾರ್ಯಯೋಜನೆಯನ್ನು 90 ದಿನಗಳ ಒಳಗಾ ಸಂಸತ್ತಿನಲ್ಲಿ ಮಂಡಿಸುವುದು. ಕೊರತೆಯನ ಕಡಿಮೆ ಮಾಡುವ ಉದ್ದೇಶದಿಂ ಬೆಳವಣಿಗೆಗಾಗಿರುವ ಹೂಡಿಕೆಯನ್ನಾಗಲಿ ಅಭಿವೃದ್ಧಿಗಾಗಿ ತೆಗೆದಿಡುವ ಮೊತ್ತವನ್ನಾಗಲಿ ಕಡಿ ಮಾಡಲಾಗದು.

ಎಲ್ಲಾ ವಿವಾದಾಸ್ಪದ ಅಂಶಗಳನ ಇತ್ಯರ್ಥಪಡಿಸಿದ ನಂತರ ವಿಎಟಿ ತೆರಿ ಪದ್ಧತಿಯನ್ನು ಜಾರಿಗೆ ತರುವುದು, ತೆರಿಗೆದಾರ ವ್ಯಾಪ್ತಿಯನ್ನು ವಿಸ್ತರಿಸುವ, ತೆರಿಗೆ ಸಂಗ್ರಹವನ ಹೆಚ್ಚಿಸುವ, ತೆರಿಗೆ ಆಡಳಿತವನ್ನು ಇನ್ನಷ ಪರಿಣಾಮಕಾರಿಗೊಳಿಸಲು ಅಗತ್ಯ ಕ್ರಮ, ತೆರಿ ದರಗಳು ಸ್ಥಿರವಾಗಿದ್ದು ಅಭಿವೃದ್ಧಿ ಹಾಗ ಹೂಡಿಕೆಯ ಪರವಾಗಿ ಇರುವಂ

Printed & Published by Communist Party of India(Marxist), Karnataka

...ಡಿಕೊಳ್ಳುವುದು, ಕಪ್ಪು ಹಣವನ್ನು, ಆಸ್ತಿಯನ್ನು ...ರ ತೆಗೆಯಲು ವಿಶೇಷ ಯೋಜನೆಗಳನ್ನು ಕೈಗೊಳ್ಳುವುದು.

ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಯಲು ಪರಿಣಾಮಕಾರಿ ಕ್ರಮಗಳು, ಜೂಜುಕೋರರ, ಅಕ್ರಮ ದಾಸ್ತಾನುದಾರರ, ಕಾಳಸಂತೆಕೋರರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಕಠಿಣ ಕ್ರಮ ಕೈಕೊಳ್ಳಲಾಗುವುದು.

ಬಂಡವಾಳ ಮಾರುಕಟ್ಟೆ: ಬಂಡವಾಳ ಮಾರುಕಟ್ಟೆಯ ಆರೋಗ್ಯಕರ ಬೆಳವಣಿಗೆಗೆ ಬದ್ಧತೆ, ಎಫ್‌ಐಐಗೆ ಪ್ರೋತ್ಸಾಹ ಮುಂದುವರಿಕೆ, ಜೂಜುಕೋರ ಬಂಡವಾಳದ ಹರಿಯುವಿಕೆಯಿಂದ ಹಣಕಾಸು ವ್ಯವಸ್ಥೆಗೆ ಧಕ್ಕೆಯಾಗುವುದನ್ನು ತಡೆಯಲು ಗಮನ, ಸಣ್ಣ ಹೂಡಿಕೆದಾರರ ಹಿತ ಕಾಪಾಡಲು ಕ್ರಮ, ಎಸ್‌ಇಬಿಐ ಅನ್ನು ಇನ್ನಷ್ಟು ಬಲಪಡಿಸುವುದು, ಮಾರುಕಟ್ಟೆ ಏರುಪೇರು ಮಾಡುವ ಮತ್ತು ಆ ಮೂಲಕ ಮಾರುಕಟ್ಟೆಯಲ್ಲಿ ಭೀತಿಯನ್ನು ಉಂಟುಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವುದು.

ಆರ್ಥಿಕ ಸುಧಾರಣೆಗಳು: ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯನ್ನು ಖಚಿತಪಡಿಸುವ ಮಾನವೀಯ ಮುಖದ ಆರ್ಥಿಕ ಸುಧಾರಣೆಗಳಿಗೆ ಬದ್ಧತೆ, ಕೃಷಿ, ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಮುಂದುವರೆಸುವುದು, ಗ್ರಾಮೀಣ ಸಮೃದ್ಧಿಯನ್ನು ಆಳವಾಗಿಸುವುದು, ಸಾರ್ವಜನಿಕ ವ್ಯವಸ್ಥೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವುದು ಸಾಮಾನ್ಯ ನಾಗರೀಕರ ಜೀವನದಲ್ಲಿ ಗುಣಾತ್ಮಕ ಬದಲಾವಣೆ ತರುವುದೇ ಆರ್ಥಿಕ ಸುಧಾರಣೆಗಳ ಗುರಿಯಾಗಿರಬೇಕು.

ರಕ್ಷಣೆ, ಆಂತರಿಕ ಭದ್ರತೆ: ಸಶಸ್ತ್ರ ದಳಗಳ ಆಧುನೀಕರಣದ ವಿಳಂಬವನ್ನು ತೆಗೆದುಹಾಕುವುದು ಮತ್ತು ಅದಕ್ಕಾಗಿ ಮೀಸಲಿಟ್ಟ ಹಣವನ್ನು ಪೂರ್ಣವಾಗಿ ಖರ್ಚು ಮಾಡುವುದು.

ರಕ್ಷಣಾ ಮಂತ್ರಾಲಯದ ಅಡಿಯಲ್ಲಿ ಮಾಜಿ ಸೈನಿಕರ ಕಲ್ಯಾಣ ಇಲಾಖೆಯನ್ನು ಆರಂಭಿಸುವುದು. ಬಹುದಿನಗಳಿಂದ ಇತ್ಯರ್ಥವಾಗದೆ ಇರುವ 'ಒಂದು ಹುದ್ದೆ, ಒಂದು ಪಿಂಚಣಿ' ವಿಷಯವನ್ನು ಪುನರ್ ಪರಿಶೀಲಿಸುವುದು, ರಾಷ್ಟ್ರೀಯ ಸಂರಕ್ಷಣಾ ಮಂಡಳಿಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವುದು, ಒಂದು ವಿಶ್ವಾಸಾರ್ಹವಾದ ಅಣ್ವಸ್ತ್ರ ಕಾರ್ಯಕ್ರಮಕ್ಕೆ ಬದ್ಧತೆ, ಅದೇ ಸಮಯದಲ್ಲಿ ಅಣ್ವಸ್ತ್ರ ಹೊಂದಿರುವ ನೆರೆಯ ರಾಷ್ಟ್ರಗಳೊಂದಿಗೆ ವಿಶ್ವಾಸ ಬೆಳೆಸುವ ಧೋರಣೆಗೆ ಬದ್ಧತೆ, ಸಾರ್ವತ್ರಿಕ ನಿಶ್ಶಸ್ತ್ರೀಕರಣ ಹಾಗೂ ಅಣ್ವಸ್ತ್ರರಹಿತ ವಿಶ್ವ ನಿರ್ಮಾಣದಲ್ಲಿ ನೇತೃತ್ವದ ಪಾತ್ರವಹಿಸುವುದು.

POTA ದುರ್ಬಳಕೆಯಾಗಿರುವ ಬಗ್ಗೆ ಆತಂಕ, ಭಯೋತ್ಪಾದಕತೆಯ ವಿರುದ್ಧದ ಹೋರಾಟದಲ್ಲಿ ರಾಜಿ ಇಲ್ಲ, ಆದರೆ ದುರುಪಯೋಗಕ್ಕೆ ಒಳಗಾದ POTA ವನ್ನು ರದ್ದು ಮಾಡಿ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕ್ರಮವಹಿಸಲಾಗುವುದು.

ಲಭ್ಯ ಇರುವ ಕಾನೂನುಗಳನ್ನು ಬಳಸಿ, ದೇಶದಲ್ಲಿ ಸಾಮಾಜಿಕ ಸೌಹಾರ್ದತೆಯನ್ನು ಕೆಡಿಸುವ, ಧಾರ್ಮಿಕ ವಿವಾದಗಳನ್ನು ಪ್ರಚಾರ ಮಾಡುವ ಮತ್ತು ಕೋಮು ದ್ವೇಷವನ್ನು ಹರಡುವ ವ್ಯಕ್ತಿಗಳ ಮತ್ತು ಸಂಘಟನೆಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ಜರುಗಿಸಲಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ: ದೇಶದಲ್ಲಿ ಲಭ್ಯವಿರುವ ಕಾರ್ಯಕ್ರಮಗಳನ್ನು ಆರಂಭಿಸುವುದು, ವಿದೇಶಗಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನಿಗಳ, ತಂತ್ರಜ್ಞಾನಿಗಳ ಮತ್ತು ಇತರ ತಜ್ಞರ ಕೌಶಲ್ಯ, ಪರಿಣತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುವುದು.

ವಿದೇಶಾಂಗ ನೀತಿ: ಹಿಂದಿನ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವುದು. ದಕ್ಷಿಣ ಏಷ್ಯಾದ ದೇಶಗಳೊಂದಿಗೆ ಸಂಬಂಧಗಳನ್ನು ಬಲಪಡಿಸುವುದು. ಪಾಕಿಸ್ತಾನದೊಂದಿಗೆ ಮಾತುಕತೆ ಮುಂದುವರೆಸುವುದು, ಶ್ರೀಲಂಕಾದ ಸಮಗ್ರತೆಗೆ ಧಕ್ಕೆಯಾಗದಂತೆ ತಮಿಳರ ನ್ಯಾಯವಾದ ಆಶೋತ್ತರಗಳನ್ನು ಈಡೇರಿಸುವ ಶಾಂತಿ ಮಾತುಕತೆಗಳಿಗೆ ಬೆಂಬಲ, ಬಾಂಗ್ಲಾದೇಶದೊಂದಿಗೆ ಇತ್ಯರ್ಥವಾಗಬೇಕಾದ ವಿಷಯಗಳನ್ನು ಇತ್ಯರ್ಥಪಡಿಸುವುದು, ನದಿ ನೀರು ಹಂಚಿಕೆ ಬಗ್ಗೆ ನೇಪಾಳದೊಂದಿಗೆ ಮಾತುಕತೆ, ಚೀನಾದೊಂದಿಗೆ ವ್ಯಾಪಕ ಸಂಬಂಧಗಳ ವೃದ್ಧಿ ಮತ್ತು ಗಡಿ ವಿವಾದ ಕುರಿತಾದ ಮಾತುಕತೆ ಮುನ್ನಡೆಸುವುದು. ಪಾಲೆಸ್ತೀನ್ ಜನತೆಯ ಹೋರಾಟಕ್ಕೆ ಹಿಂದಿನಿಂದ ನೀಡುತ್ತಾ ಬಂದಿರುವ ಬೆಂಬಲದ ಮುಂದುವರಿಕೆ, ಇರಾಕ್‌ನಿಂದ ಭಾರತೀಯ ಕೂಲಿಯಾಳುಗಳನ್ನು ವಾಪಸ್ ಕರೆಯಿಸಲು ಕ್ರಮ, ಅಮೇರಿಕದೊಂದಿಗೆ ಸಂಬಂಧವನ್ನು ಬಲಪಡಿಸುತ್ತಿರುವಾಗಲೇ ಜಾಗತಿಕ ಬೆಳವಣಿಗೆಗಳ ಬಗ್ಗೆ ಸ್ವತಂತ್ರ ನಿಲುವುಗಳಿಗೆ ಬದ್ಧವಾಗಿರುವುದು, ರಷ್ಯಾ ಹಾಗೂ ಯುರೋಪಿನ ಸಂಗಡವೂ ಸಂಬಂಧಗಳನ್ನು ಗಟ್ಟಿಗೊಳಿಸಲು ಬದ್ಧವಾಗಿರುವುದು.

WTO ಮಾತುಕತೆಗಳಲ್ಲಿ ದೇಶದ, ಮುಖ್ಯವಾಗಿ ರೈತರ ಹಿತಕಾಪಾಡಲು ಬದ್ಧ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ನಡುವೆ ಬೆಳೆದು ಬರುತ್ತಿರುವ ಸೌಹಾರ್ದತೆಯನ್ನು ಬಲಪಡಿಲು ಬದ್ಧ.

ಭಾಷಾ ನೀತಿ: ಎಲ್ಲ ಭಾಷೆಗಳನ್ನು ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಸೇರಿಸುವ ಪ್ರಸ್ತಾಪವನ್ನು ಪರಿಶೀಲಿಸುವುದು, ತಮಿಳು ಭಾಷೆಯನ್ನು ಒಂದು ಶಾಸ್ತ್ರೀಯ ಭಾಷೆ ಎಂದು ಸಾರುವುದು.

ಸರ್ಕಾರದ ರಚನೆ ಬಗ್ಗೆ ಸಿಪಿಐ(ಎಂ) ನಿಲುವು

ಪುಟ 5 ರಿಂದ

ರಾಜಕೀಯ ನಿಲುಮೆಯನ್ನು ಉಲ್ಲಂಘಿಸುವುದು ಎಂದರ್ಥ. ಕಾರ್ಮಿಕ ವರ್ಗ ಮತ್ತು ದುಡಿಯುವ ಇತರೆ ಜನ ವಿಭಾಗಗಳ ಹಿತಾಸಕ್ತಿಗಳನ್ನು ರಕ್ಷಿಸುವ ಸ್ವತಂತ್ರ ಪ್ರತಿನಿಧಿ ಎಂಬ ಪಕ್ಷದ ಗುರುತು ಸರ್ಕಾರಕ್ಕೆ ಸೇರುವುದರಿಂದ ಮಸುಕುಗೊಳ್ಳುತ್ತದೆ. ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಭಾಗವಾಗುವುದೆಂದರೆ ಕಾಂಗ್ರೆಸ್ಸಿನ ಕಿರಿಯ ಪಾಲುದಾರಿಕೆಯನ್ನು ಒಪ್ಪಿಕೊಳ್ಳಲು ಅವಕಾಶ ನಿರ್ಮಿಸಿದಂತೆ.

ಕಾಂಗ್ರೆಸ್ ಮತ್ತದರ ಕೂಟದ ಗುಣವನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕೂಟದ ಎಲ್ಲಾ ಜಾತ್ಯತೀತ ಪಕ್ಷಗಳು ಉದಾರೀಕರಣ ನೀತಿಗಳಿಗೆ ಬದ್ಧವಾಗಿವೆ. ಆ ಸರ್ಕಾರದ ಭಾಗವಾಗುವುದೆಂದರೆ ಸ್ಥಿರ ಸರ್ಕಾರದ ಹೆಸರಿನಲ್ಲಿ ಆರ್ಥಿಕ ನೀತಿಗಳ ಜೊತೆ ರಾಜಿ ಮಾಡಿಕೊಳ್ಳುವುದು ಎಂದರ್ಥ.

ಸರ್ಕಾರಕ್ಕೆ ಸೇರಬೇಕೆನ್ನುವವರ ವಾದಗಳು

ಸರ್ಕಾರಕ್ಕೆ ಸೇರಬೇಕೆನ್ನುವ ಎಡಪಕ್ಷಗಳು ಮತ್ತು ಸಿಪಿಐ(ಎಂ) ನ ಹಿತೈಷಿಗಳು ಎರಡು ವಾದಗಳನ್ನು ಮುಂದಿಡುತ್ತಾರೆ. ಮೊದಲನೆಯಾಗಿ, ಎಡಪಕ್ಷಗಳು ಸರ್ಕಾರಕ್ಕೆ ಸೇರಿದರೆ ಮಾತ್ರವೇ ಸ್ಥಿರತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದು. ಎರಡನೆಯದಾಗಿ, ಎಡಪಕ್ಷಗಳು ಸೇರಿದರೆ ಮಾತ್ರವೇ ಜಾತ್ಯತೀತ ಸರ್ಕಾರ ವಿಶ್ವಾಸಾರ್ಹತೆ ಹೆಚ್ಚುತ್ತದೆ ಎಂಬುದು.ಈ ಅಭಿಪ್ರಾಯಗಳನ್ನು ಕೇಂದ್ರ ಸಮಿತಿ ಪರಿಗಣಿಸಿತಾದರೂ ಅಂಗೀಕರಿಸಲಿಲ್ಲ. ಸರ್ಕಾರದ ಸ್ಥಿರತೆಯ ಬಗ್ಗೆ ಹೇಳುವುದಾದರೆ ಒಟ್ಟಾರೆಯಾಗಿ ಒಂದು ಗುಂಪಾಗಿ ಸರ್ಕಾರವನ್ನು ಬೆಂಬಲಿಸುತ್ತಿರುವ ಎಡಪಕ್ಷಗಳು ಸರ್ಕಾರ ಸ್ಥಿರವಾಗಿರುತ್ತದೆ ಎಂಬುದನ್ನು ಖಾತ್ರಿಗೊಳಿಸುತ್ತದೆ. ಈ ಸರ್ಕಾರವನ್ನು ಅಸ್ಥಿರಗೊಳಿಸಿ, ಬಿಜೆಪಿ ಅಧಿಕಾರಕ್ಕೆ ಮರಳುತ್ತದೆ ಎಂಬುದಕ್ಕೆ ಎಡಪಕ್ಷಗಳು ಅವಕಾಶ ನೀಡುವುದಿಲ್ಲ, ಅಂತಹ ಪ್ರಯತ್ನಗಳನ್ನು ಸೋಲಿಸುತ್ತದೆ.

ಸರ್ಕಾರದ ವಿಶ್ವಾಸಾರ್ಹತೆಗೆ ಸಂಬಂಧಿಸಿ ಹೇಳುವುದೆಂದರೆ, ಈ ಸರ್ಕಾರಕ್ಕೆ ವಿಶ್ವಾಸಾರ್ಹತೆ ಬರುವುದು ಜಾತ್ಯತೀತತೆ,ಆರ್ಥಿಕ ನೀತಿಗಳ ವಿಚಾರದಲ್ಲಿ ವಾಜಪೇಯಿ ಸರ್ಕಾರದ ನೀತಿಗಳಿಂದ ಬೇರೆಯಾದ ನೀತಿಗಳನ್ನು ಜಾರಿಗೊಳಿಸುವುದರಿಂದ ಮತ್ತು ಸಾಮ್ರಾಜ್ಯಶಾಹಿ ಪರ ನಿಲುವನ್ನು ತಿರುವು ಮುರುವುಗೊಳಿಸುವುದರಿಂದ. ತಮ್ಮ ವಿಶ್ವಾಸಾರ್ಹತೆಯನ್ನು ಎಡಪಕ್ಷಗಳು ಕಳೆದುಕೊಂಡು ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ವಿಶ್ವಾಸಾರ್ಹತೆಯನ್ನು ತಂದುಕೊಡಲು ಸಾಧ್ಯವಿಲ್ಲ. ಜಾತ್ಯತೀತ ಸರ್ಕಾರ ಉಳಿಸುವಲ್ಲಿ ಮತ್ತು ಅಗತ್ಯವಿದ್ದಾಗ ಸ್ವತಂತ್ರ ನಿಲುವೆಯನ್ನು ಕೈಗೊಳ್ಳುವಲ್ಲಿ ಪ್ರಮುಖ ಎಡಪಕ್ಷವಾದ ಸಿಪಿಐ(ಎಂ) ಪ್ರಜ್ಞಾಪೂರ್ವಕ ನಿಲುವು ತೆಗೆದುಕೊಳ್ಳುತ್ತದೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಂಗೀಕರಿಸುವ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಆಧಾರದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಸರ್ಕಾರ ಕುರಿತು ಯಾವ ನಿಲುವು ತಳೆಯುತ್ತವೆ ಎಂಬುದು ತೀರ್ಮಾನವಾಗುತ್ತದೆ. ಜಾತ್ಯತೀತೆಯನ್ನು ರಕ್ಷಿಸಲು, ಜನತೆಯ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿ ಪ್ರಭಾವವನ್ನು ತಡೆಯಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಪಾತ್ರವಹಿಸುತ್ತವೆ. ಹೀಗೆ ಮಾಡುವಾಗ ಸಿಪಿಐ(ಎಂ) ಸರ್ಕಾರದಿಂದ ದೂರ ಸರಿದು ಜನತೆಯ ಹಿತಾಸಕ್ತಿ ರಕ್ಷಿಸಲು ಮಾತನಾಡಲು ಹಿಂಜರಿಯುವುದಿಲ್ಲ.

ಎಡ ಕೋಟೆಯಲ್ಲಿ ಹೆಚ್ಚಿದ ಶಕ್ತಿ

ಈ ಚುನಾವಣೆಯಲ್ಲಿ ಸಿಪಿಐ(ಎಂ) ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿ ದೊಡ್ಡ ಜಯ ಸಾಧಿಸಿದೆ. ಈ ಶಕ್ತಿಯಿಂದಾಗಿ ನಮ್ಮ ಸ್ವತಂತ್ರ ಪಾತ್ರವನ್ನು ಖಾತ್ರಿಗೊಳಿಸಬೇಕು. ಏಕೆಂದರೆ ಈ ಶಕ್ತಿ ಹೆಚ್ಚಿರುವುದು ಕಾಂಗ್ರೆಸ್ ಮತ್ತದರ ಜನವಿರೋಧಿ ನೀತಿಗಳ ವಿರುದ್ಧದ ನಿರಂತರ ಹೋರಾಟದಿಂದ. ಈ ರಾಜ್ಯಗಳಲ್ಲಿ ಜನತೆಯನ್ನು ದೂರ ಸರಿಸುವ ಯಾವ ಪ್ರಯತ್ನವನ್ನೂ ಮಾಡಬಾರದು ಎಂಬುದು ಕೇಂದ್ರ ಸಮಿತಿಯ ಸ್ಪಷ್ಟ ಅಭಿಪ್ರಾಯ. ದುರ್ಬಲ ರಾಜ್ಯಗಳಲ್ಲಿ ಕೂಡ ಪಕ್ಷವನ್ನು ಕಟ್ಟಲು ಮತ್ತು ವಿಸ್ತರಿಸಲು ಪಕ್ಷದ ಸ್ವತಂತ್ರ ಕಾರ್ಯ ನಿರ್ವಹಣೆ ಅತ್ಯಗತ್ಯ.

ಈ ಹಿಂದಿನ ಅನುಭವ:

1996-98 ರ ವರೆಗಿನ ಸಂಯುಕ್ತ ರಂಗ ಸರ್ಕಾರದ ಅನುಭವವನ್ನು ಕ್ರೋಢೀಕರಿಸುತ್ತ 16ನೇ ಮಹಾಧಿವೇಶನವು "ಸಂಯುಕ್ತ ರಂಗವು ಉದಾರೀಕರಣ ನೀತಿಗಳನ್ನೇ ಅತ್ಯಂತ ಕಾಳಜಿಯಿಂದ ಜಾರಿಗೊಳಿಸಿತು. ಖಾಸಗೀಕರಣ ಪ್ರಕ್ರಿಯೆ, ಮುಖ್ಯ ವಲಯಗಳನ್ನು ವಿದೇಶಿ ನೇರ ಹೂಡಿಕೆಗೆ ತೆರೆಯುವುದು, ಹಿಂಬಾಗಿಲ ತೆರಿಗೆಗಳ ಮೂಲಕ ಜನತೆಯ ಮೇಲೆ ತೀವ್ರ ಹೊರೆಯನ್ನು ಹೊರಿಸಿದ್ದು, ನೇರ ತೆರಿಗೆಗಳನ್ನು ಕಡಿತಗೊಳಿಸುವ ಮೂಲಕ ಶ್ರೀಮಂತರಿಗೆ ರಿಯಾಯಿತಿಗಳನ್ನು ನೀಡಿತು. ಕಾಂಗ್ರೆಸ್ಸಿನ ಆರ್ಥಿಕ ನೀತಿಗಳನ್ನೇ ಮುಂದುವರೆಸಲಾಯಿತು ಮತ್ತು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿನ ಅನೇಕ ಜನಪರ ಕಾರ್ಯಕ್ರಮಗಳನ್ನು ಮರೆಮಾಚಿಸಲಾಯಿತು.

ಕಾಂಗ್ರೆಸ್ಸಿನಿಂದ ಬಾಹ್ಯಬೆಂಬಲ ಪಡೆದ ಕಾಂಗ್ರೆಸ್ಸೇತರ ಸಂಯುಕ್ತರಂಗ ಸರ್ಕಾರದ್ದೇ ಈ ಕಥೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಆರ್ಥಿಕ ನೀತಿಗಳು ಹೇಗಿರುತ್ತವೆ ಎಂಬುದನ್ನು ಯಾರಾದರೂ ಊಹಿಸ ಬಹುದು. ಕಾಂಗ್ರೆಸ್ ನೇತೃತ್ವದ ಸರ್ಕಾರವಿರುವಾಗ ಸಿಪಿಐ(ಎಂ) ಭಾಗವಹಿಸುವು ದರಿಂದಲೇ ಆರ್ಥಿಕ ನೀತಿಗಳನ್ನು ಬದಲಾಯಿಸಿ ಬಿಡಬಹುದು ಎಂಬ ಭ್ರಮೆ ಯಾರಿಗೂ ಇರುವುದು ಬೇಡ.


ಸರ್ಕಾರವನ್ನು ಸೇರುವ ಕುರಿತು ಸಿಪಿಐ(ಎಂ)ನ ಮೂಲಭೂತ ತಿಳುವಳಿಕೆಯೆಂದರೆ ನೀತಿಗಳನ್ನು ರೂಪಿಸುವಾಗ ಮತ್ತು ಅವುಗಳನ್ನು ಜಾರಿ ಗೊಳಿಸುವಲ್ಲಿಯೂ ಸಹ ಸಿಪಿಐ(ಎಂ)ಗೆ ನಿರ್ಣಾಯಕ ಶಕ್ತಿಯಿರಬೇಕು ಎಂಬುದು. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಅಂತಹದಕ್ಕೆ ಮಹತ್ವದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಹೆಚ್ಚಾದ ಶಕ್ತಿಯೇ ಆಳುವ ವರ್ಗದ ನೀತಿಗಳ ಮೇಲೆ ಪ್ರಭಾವ ಬೀರಿ ಬದಲಾಯಿಸಿ ಬಿಡಬಲ್ಲವು ಎಂಬುದು ತಪ್ಪಾಗುತ್ತದೆ.

ಎಡಶಕ್ತಿಗಳ ಸ್ವತಂತ್ರ ಪಾತ್ರ:

ವರ್ಗದೃಷ್ಟಿ ಮತ್ತು ಕಾಂಗ್ರೆಸ್ಸಿನ ನೀತಿಗಳ ದಿಕ್ಕಿನಿಂದಾಗಿ ಜನತೆಯ ತೀವ್ರ ಅತೃಪ್ತಿ ಬುಗಿಲೇಳುತ್ತದೆ' ಎಂಬುದು ನಿರೀಕ್ಷಿತ. ಸಂಯುಕ್ತರಂಗ ಸರ್ಕಾರದ ಅವದಿಯಲ್ಲೇ ಇಂತಹ ಅತೃಪ್ತಿ 1998 ರಲ್ಲಿ ಎಡಪಕ್ಷಗಳೇತರ ಸಂಯುಕ್ತರಂಗದ ಪಕ್ಷಗಳಿಗೆ ಸೋಲು ತಂದವು. ಇಂತಹ ಅತೃಪ್ತಿಯನ್ನು ಬಳಸಿ, ಜನತೆಯ ಜೀವನ ಪ್ರಶ್ನೆಗಳ ಆಧಾರದ ಹೋರಾಟಗಳಿಗೆ ನೇತೃತ್ವ ಕೊಟ್ಟು ಎಡ-ಜಾತ್ಯಾತೀತ ಶಕ್ತಿಗಳ ಬಲವರ್ದನೆಯನ್ನು ಮಾಡಬೇಕು. ಸರ್ಕಾರಕ್ಕೆ ಸೇರಿದರೆ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿಗೆ ಜನತೆಯ ಅತೃಪ್ತಿಯನ್ನು ಬಳಸಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ. ದುಡಿಯುವ ಜನರನ್ನು ಪ್ರತಿನಿಧಿಸುವ ಪ್ರಜಾಸತಾತ್ಮಕ ಜನ ಸಂಘಟನೆಗಳು ಪಕ್ಷವು ಸರ್ಕಾರದಲ್ಲಿದ್ದಂತಹ ಸಂದರ್ಭದಲ್ಲಿ ಅಂಗವಿಕಲವಾಗುತ್ತವೆ. ಸರ್ಕಾರದ ಕಾರ್ಯಕ್ರಮತೆಗೆ ಪಕ್ಷ ಜವಾಬ್ದಾರವಾಗಬೇಕಾಗುತ್ತದೆ.

ಸಿಪಿಐ(ಎಂ) ಬಗ್ಗೆ ಇರುವ ಪ್ರಧಾನ ದೂರೆಂದರೆ "ಜವಾಬ್ದಾರಿಯಿಲ್ಲದೆ ಅಧಿಕಾರ ಅನುಭವಿಸುತ್ತದೆ" ಎಂಬುದು: ಇದು ಬಂಡವಾಳ ಶಾಹಿ ಮಾಧ್ಯಮಗಳ ವ್ಯವಸ್ಥಿತ ಪ್ರಚಾರ. ಈ ಕಾಲಘಟ್ಟದಲ್ಲಿ ಸಿಪಿಐ(ಎಂ) ಪಕ್ಷವು ಅಧಿಕಾರ ಹಂಚಿಕೊಳ್ಳುವುದಾಗಲೀ, ಅಧಿಕಾರ ನಡೆಸುವುದಾಗಲೀ ಇಲ್ಲ. ಅದರ ಜವಾಬ್ದಾರಿ ಇರುವುದು ಜನತೆಗೆ ಮತ್ತು ಜಾತ್ಯಾತೀತ ಸರ್ಕಾರವನ್ನು ತರಬೇಕು ಎಂಬುದಕ್ಕೆ. ಏನೇ ಆದರೂ, ಎಡ ಪರ್ಯಾಯ ನೀತಿಗಳಿಗೆ ಪಕ್ಷ ಹೋರಾಡುತ್ತದೆ ಮತ್ತು ಎಡ, ಜಾತ್ಯಾತೀತ ಶಕ್ತಿಗಳ ಮುನ್ನಡೆಗಾಗಿ ಜನರನ್ನು ಸಂಘಟಿಸಿ ಹೋರಾಡುತ್ತದೆ.

ಈ ಚುನಾವಣೆಯಲ್ಲಿ ಸೋತಿದೆ ಎಂಬ ಕಾರಣಕ್ಕಾಗಿ ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳನ್ನು ತಪ್ಪಾಗಿ ಅಂದಾಜಿಸಬಾರದು. ಈ ಶಕ್ತಿಗಳ ಜತೆ ಸೆಣಸಲು ರಾಜಕೀಯ, ಸೈದ್ಧಾಂತಿಕ ಮತ್ತು ಸರ್ಕಾರದ ಸ್ಥಾನಮಾನಗಳನ್ನು ಬಲಗೊಳಿಸ ಬೇಕೆಂಬುದಕ್ಕೆ ಸಿಪಿಐ(ಎಂ) ಎಚ್ಚರದಿಂದ ಕೆಲಸ ಮಾಡುತ್ತದೆ.



ಕಂಪನಿಗಳ ಕರ್ಮಕಾಂಡ

ಜಿ.ಎಸ್.ಮಣಿ

ಇದೊಂದು ಕಂಪನಿಯ ಕರ್ಮಕಾಂಡದ ಕತೆ. ಈ ಕಂಪನಿ ಒಂದು ತರಹದ ಜವಳಿಯನ್ನು ಉತ್ಪಾದಿಸಿ ರಫ್ತು ಮಾಡುತ್ತದೆ. ಶೇಕಡಾ ನೂರರಷ್ಟು ರಫ್ತು ಕಂಪನಿಯೆಂದರೆ ಕಡಿಮೆಯೆ? ಅದು ಉಣ್ಣೆ ಬಟ್ಟೆಗಳನ್ನು ಉತ್ಪಾದಿಸಿ ರಫ್ತು ಮಾಡುವ ಕಂಪನಿ. ದೇಶದಾದ್ಯಂತ ಹಲವೆಡೆ ಅದರ ಉತ್ಪಾದನಾ ಘಟಕಗಳಿವೆ. ಇಷ್ಟೊಂದು ರಫ್ತು ಮಾಡುವ ಕಂಪನಿಗೆ ಅಪಾರ ಪ್ರಮಾಣದ ವಹಿವಾಟಿದೆ, ಅಪಾರ ಪ್ರಮಾಣದಲ್ಲಿ ಹಣಕಾಸಿನ ಅವಶ್ಯಕತೆಯೂ ಇರಲೇಬೇಕಲ್ಲವೆ?

ಈ ಅಪಾರ ಪ್ರಮಾಣದ ಹಣಕಾಸನ್ನು ಒದಗಿಸಲು ಏಳೆಂಟು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಒಟ್ಟುಗೂಡಿ ಒಂದು ಕನ್ಸಾರ್ಟಿಯಮ್ ಅನ್ನು ಮಾಡಿಕೊಂಡು ಸಹಸ್ರಾರು ಕೋಟಿ ರೂಪಾಯಿಗಳ ಸಾಲ ನೀಡಿವೆ. ಈ ಸಾಲಕ್ಕೆ ಆಧಾರ? ಆಧಾರ ಕಾಗದಗಳು ಮಾತ್ರವಲ್ಲ. ಈ ಬ್ಯಾಂಕು/ಹಣಕಾಸು ಸಂಸ್ಥೆಗಳ ಹಣದಿಂದಲೇ ಪಡೆದ ಕಾರ್ಖಾನೆ ಮತ್ತು ಇತರ ಆಸ್ತಿಗಳು ಈ ಸಾಲಕ್ಕೆ ಆಧಾರ.

ಆರಂಭದಲ್ಲಿ ಚೆನ್ನಾಗಿಯೇ ನಡೆದ ಕಂಪನಿ ನಿಧಾನಕ್ಕೆ ನಷ್ಟ ಅನುಭವಿಸತೊಡಗುತ್ತದೆ. ಕಂಪನಿ ನಷ್ಟ ಅನುಭವಿಸತೊಡಗಿದರೆ ಬ್ಯಾಂಕುಗಳು ಹಲವು ರಿಯಾಯತಿ ನೀಡಬೇಕಾಗುತ್ತದೆ. ಯಾಕೆಂದರೆ ದೇಶಕ್ಕೆ ಅತ್ಯಮೂಲ್ಯವಾದ ವಿದೇಶೀ ವಿನಿಮಯವನ್ನು ಈ ಕಂಪನಿ ತರುತ್ತದಲ್ಲವೆ? ಕಾರ್ಮಿಕರು ಕಡಿಮೆ ಸಂಬಳಕ್ಕೆ ದುಡಿಯಲೇಬೇಕು. ಯಾಕೆಂದರೆ ಕಂಪನಿ ನಷ್ಟದಲ್ಲಿದೆ. ತರಲೆ ಮಾಡಿದ ಕಾರ್ಮಿಕರನ್ನು ಓಡಿಸಲೇಬೇಕಾಗುತ್ತದೆ. ಆದರೆ ಕಂಪನಿ ನಷ್ಟದಲ್ಲಿರುವಾಗ ಕಾರ್ಮಿಕರು ತರಲೆ ಮಾಡಿದರೆ ಸಹಿಸಲು ಸಾಧ್ಯವೇ ನೀವೇ ಹೇಳಿ?


ಬ್ಯಾಂಕುಗಳಲ್ಲಿನ ಸಾಲದ ವ್ಯವಸ್ಥೆ ಹೇಗೆ ಅನುಕೂಲವಾಗುತ್ತದೆ. ನೋಡಿ ರಫ್ತುದಾರರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ನೀಡಲಾಗುತ್ತದೆ. ಪ್ಯಾಕಿಂಗ್ ಕ್ರೆಡಿಟ್ ರೂಪದಲ್ಲಿ ಒಮ್ಮೆ ಸರಕನ್ನು ಹಡಗಿಗೆ ಹೇರಿದ ಮೇಲೆ ವಿದೇಶೀ ಕೊಳ್ಳುವಾತನ ಮೇಲೆ ಹುಂಡಿಗಳನ್ನು ತಯಾರಿಸಿ ಬ್ಯಾಂಕುಗಳಲ್ಲಿ ಅದರ ಮೇಲೆ ಹಣಪಡೆಯಲಾಗುತ್ತದೆ. ಈ ಹಣದಿಂದ ಪ್ಯಾಕಿಂಗ್ ಕ್ರೆಡಿಟ್ ತೀರಿಸಲಾಗುತ್ತದೆ. ಇಲ್ಲದಿದ್ದರೆ ವಿದೇಶೀ ಕೊಳ್ಳುಗನಿಂದ ಹಣಪಡೆಯಲು ಈ ಹುಂಡಿಗಳನ್ನು ಬ್ಯಾಂಕುಗಳ ಮೂಲಕವೇ ಕೊಳ್ಳುವ ಬ್ಯಾಂಕಿಗೆ ಕಳುಹಿಸಲಾಗುತ್ತದೆ.

ಎಲ್ಲರೂ ಪ್ರಾಮಾಣಿಕ ವ್ಯವಹಾರ ಮಾಡಿದರೆ ಈ ಎಲ್ಲ ಪದ್ಧತಿಗಳಲ್ಲಿ ಯಾವುದೇ ನ್ಯೂನ್ಯತೆ ಕಾಣಲಾರದು. ಆದರೆ ಬಂಡವಾಳಿಗರು ಈ ಎಲ್ಲವನ್ನು ತಮ್ಮ ಲಾಭಕ್ಕಾಗಿ ಹೇಗೆ ಉಪಯೋಗಿಸಿಕೊಳ್ಳುತ್ತಾರೆಂಬುದನ್ನು ನೋಡಿದರೆ ಬಂಡವಾಳಶಾಹಿ ವ್ಯವಸ್ಥೆ ಮೂಲದಲ್ಲಿ ಭ್ರಷ್ಟವಾಗಿರುವುದು ಸ್ಪಷ್ಟವಾಗಿಬಿಡುತ್ತದೆ. ಉದ್ದಿಮೆ ನಡೆಸುವ ಬಂಡವಾಳಿಗರು ಏನೆಲ್ಲ ಮಾಡುತ್ತಾರೆಂಬುದನ್ನು ನೋಡೋಣ.

ಬ್ಯಾಂಕಿನಿಂದ ಪ್ಯಾಕಿಂಗ್ ಕ್ರೆಡಿಟ್ ಅನ್ನು ಒಂದು ಬ್ಯಾಂಕಿನಿಂದ ಪಡೆದ ರಫ್ತುದಾರ(ಬಂಡವಾಳಿಗ) ಕನ್ಸಾರ್ಟಿಯಮ್‌ನ ಬೇರೊಂದು ಬ್ಯಾಂಕಿನ ಮೂಲಕ ಹುಂಡಿಯನ್ನು ಕಳುಹಿಸುತ್ತದೆ. ಪ್ಯಾಕಿಂಗ್ ಕ್ರೆಡಿಟ್ ಪಡೆದ ಬ್ಯಾಂಕಿಗೆ ಸಬೂಬುಗಳನ್ನು ಹೇಳುತ್ತದೆ. ಈ ಸಬೂಬುಗಳಿಗೆ ಸಾಕ್ಷ್ಯಾಧಾರ ಸೃಷ್ಟಿಸಲು ವಿದೇಶಗಳಲ್ಲಿ ಈ ಬಂಡವಾಳಿಗರು ಕಛೇರಿಗಳನ್ನೇ ತೆರೆದಿರುತ್ತಾರೆ. ಅತಿ ಕಡಿಮೆ ಬಡ್ಡಿದರದಲ್ಲಿ ಪ್ಯಾಕಿಂಗ್ ಕ್ರೆಡಿಟ್ ದೊರೆಯುವುದರಿಂದ ಬಂಡವಾಳಿಗನಿಗೆ ಸಾಕಷ್ಟು ಪ್ರಮಾಣದಲ್ಲಿ ಲಾಭವಾಗುತ್ತದೆ.

ಹೀಗೆ ಒಂದು ಬ್ಯಾಚ್ ಸರಕನ್ನು ರಫ್ತು ಮಾಡಿ ಅದಕ್ಕೆ ಪ್ರತಿಯಾಗಿ ಕೊಳ್ಳುಗನಿಂದ ಕಚ್ಚಾ ಸಾಮಗ್ರಿಯನ್ನು ತರಿಸಿಕೊಂಡು ಅದನ್ನು ಮತ್ತೆ ಸರಕಾಗಿಸಿ ರಫ್ತು ಮಾಡಿ ಹಣ ಪಡೆಯುತ್ತಾನೆ.

ಇದೆಲ್ಲವನ್ನು ಮಾಡುವುದರ ಜೊತೆಗೆ ಉದ್ದಿಮೆಯಿಂದ ಹಣವನ್ನು ಹೊರಕ್ಕೆ ಕಳುಹಿಸುತ್ತಾನೆ. ಉದ್ದಿಮೆ ನಷ್ಟ ತೋರಿಸುತ್ತದೆ. ನಷ್ಟ ಮಾಡಿರುವ ಉದ್ದಿಮೆಗೆ ಹಲವು ರಿಯಾಯತಿಗಳನ್ನು ಬ್ಯಾಂಕುಗಳು ಕೊಡಲೇಬೇಕಾಗುತ್ತದೆ. ಅವು ಕೊಡುತ್ತವೆ. ಸಂಬಂಧಪಟ್ಟ ಸರ್ಕಾರಿ ಸಂಸ್ಥೆಗಳೂ ಸಹ ವಿದ್ಯುತ್ ನಿಗಮ, ಇತ್ಯಾದಿಗಳು ರಿಯಾಯಿತಿ ನೀಡುತ್ತದೆ. ಕಾರ್ಮಿಕರಿಗೆ ಸಂಬಳ ಮತ್ತು ಭತ್ಯೆಗಳಲ್ಲಿ ಕಡಿತ ಮಾಡಲಾಗುತ್ತದೆ. ಬಂಡವಾಳಿಗನ ಪಾಲಿನಲ್ಲಿ ಯಾವುದೇ ಕೊರತೆ ಕಾಣುವುದಿಲ್ಲ. ಆತ ದೇಶದೊಳಗೇ ಬೇರೆ ಪ್ರದೇಶಗಳಿಗೆ ಹೋಗಿ ಮೋಜು ಮಾಡುತ್ತಾನೆ. ಇಲ್ಲವೇ ವ್ಯವಹಾರದ



ನೆಪದಲ್ಲಿ ವಿದೇಶಕ್ಕೆ ಹೋಗಿ ಮಜಾ ಮಾಡುತ್ತಾನೆ.

ಬ್ಯಾಂಕುಗಳಿಗೆ ಮರುಪಾವತಿಸಲು ಕಂಪನಿಯಲ್ಲಿ ಹಣವಿಲ್ಲ ಕಾರ್ಮಿಕರಿಗೆ ಸಂಬಳ ನೀಡಲು ಹಣವಿಲ್ಲ. ಆದರೆ ಈ ಎಲ್ಲ ಮೋಜುಗಳಿಗೆ ಹಣವಿರುತ್ತದೆ.

ಈಗ ಇನ್ನೊಂದು ವಿಷಯವನ್ನು ನೋಡೋಣ. ಎಲ್ಲ ಸರ್ಕಾರಿ ಅಧಿಕಾರಿಗಳು ಮತ್ತು ಬ್ಯಾಂಕಿನ ಅಧಿಕಾರಿಗಳು ಪ್ರಾಮಾಣಿಕರೂ, ನಿಷ್ಠರೂ ಆಗಿದ್ದರೆ ಏನಾಗುತ್ತದೆ?

ಬಂಡವಾಳಿಗ ಮೇಲಿನ ಆಟಗಳನ್ನು ಸುಲಭವಾಗಿ ಆಡಲು ಸಾಧ್ಯವಾಗುವುದಿಲ್ಲ. ದೇಶದ ಸರ್ಕಾರೀ ವ್ಯವಸ್ಥೆ, ಬ್ಯಾಂಕುಗಳು ಇತ್ಯಾದಿ ಭ್ರಷ್ಟವಾಗಿದ್ದು ಅಸಮರ್ಥವಾಗಿದ್ದರೇ ಮಾತ್ರ ಬಂಡವಾಳಶಾಹಿಗಳಿಗೆ ಲಾಭ. ಈ ಕಾರಣಕ್ಕಾಗಿಯೇ ಅವರು ಇಡೀ ವ್ಯವಸ್ಥೆಯನ್ನು ಭ್ರಷ್ಟಗೊಳಿಸಿರುತ್ತಾರೆ. ಇಡೀ ಸಮೂ ಮಾಧ್ಯಮಗಳನ್ನು ಭ್ರಷ್ಟಗೊಳಿಸಿ, ಪ್ರಾಮಾಣಿ ಸಾಧ್ಯವೇ ಇಲ್ಲ ಎಂಬ ವಾತಾವರಣವನ್ನು ಅವ ಸೃಷ್ಟಿಸುತ್ತಾರೆ.

ತಾವೇ ವ್ಯವಸ್ಥೆಯನ್ನು ಭ್ರಷ್ಟಗೊಳಿಸಿ, ವ್ಯವಸ್ಥೆ ಬಗ್ಗೆ ದೂರುತ್ತಾರೆ.

ಕಾರ್ಪೊರೇಷನ್ ಗವರ್ನೆನ್ಸ್, ಅಥವಾ ಕಂಪ ಆಡಳಿತ ಎಂಬುದನ್ನು ಈ ಉದಾರೀಕರಣ ದಿನಗಳಲ್ಲಿ ಹೆಚ್ಚು ಪ್ರಚಲಿತಗೊಳಿಸುವ ಪ್ರಯ ಮಾಡಲಾಗುತ್ತಿದೆ. ಆಂಧ್ರದ ಮಾಜಿ ಮುಖ್ಯಮಂ ಚಂದ್ರಬಾಬು ನಾಯ್ಡು 'ಮುಖ್ಯ ಕಾರ್ಯನಿರ್ವಾ ಅಧಿಕಾರಿ' ಎಂದು ಬಿಂಬಿಸಲಾಯಿತು. ಅಂದ ಈತ ಸಮರ್ಥ ಆಡಳಿತಗಾರ. ಎಲ್ಲರಿಗ ಲಾಭವಾಗುವಂತೆ ರಾಜ್ಯವನ್ನು ನಡೆಸಿಕೊಂಡ ಹೋಗುತ್ತಾನೆ ಎಂಬ ಇತ್ಯಾದಿ ಪ್ರಚಾರ ಬಿರುದಿಗೆ. ಇದು ಎಷ್ಟು ಅನಿಷ್ಟಕಾರಿ ಎಂಬುದನ್ ಶ್ರಮಿಕವರ್ಗ ಅನುಭವಿಸಿ ಸ್ಪಷ್ಟ ಉತ್ತರವನ್ ಆಗಲೇ ನೀಡಿದೆ.

ಆದರೆ ಉದಾರೀಕರಣ ವಾದಿಗಳಿಗೆ ಈ ಗೀ ಇನ್ನೂ ಬಿಟ್ಟಿಲ್ಲ.

ಆರ್ಥಿಕ ಸುಧಾರಣೆಗಳನ್ನು ವಿರೋಧಿಸು ಎಡಪಕ್ಷಗಳ ವಿಚಾರಧಾರೆಯನ್ನು ಇವರ ಟೀಕಿಸುತ್ತಾರೆ. ಅವರ ದೃಷ್ಟಿಯಲ್ಲಿ ಜಗತ್ತಿ ತೊಂಬತ್ತರಷ್ಟಿರುವ ಶ್ರಮಿಕ ವರ್ಗದ ಜನರಿ ಬಂಡವಾಳಿಗ ಮೋಸ ಮಾಡುವುದು ತಪ್ಪಲ್ ದುಡಿವ ಜನ ತಮ್ಮ ದುಡಿಮೆಗೆ ಪ್ರತಿಫಲ ಕೇಳಿದ ಮಾತ್ರ ಅದು ಘೋರ ಅಪರಾಧ. ಇದ ಬಂಡವಾಳಶಾಹಿಯ ನೈತಿಕತೆ. ಅವರ ನ್ಯಾಯ ಧರ್ಮ ಎಲ್ಲವೂ ಇದೇ. ಅವರ ನಿಜಸ್ವರೂ ಬಿಚ್ಚಿಡುವ ಸತ್ಯ ಹೇಳುವವರೆಲ್ಲ ಅಪರಾಧಿಗಳು

ಹೇಗಿದೆ ಈ ಕಂಪನಿ ನ್ಯಾಯ?

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಹಿಂದಿನ ಸಂಚಿಕೆಯಿಂದ

ನಾಗರೀಕ ಸಮಾಜ, ಸರ್ಕಾರ ಏನು ಮಾಡಬಹುದು?

ಅಂತರಾಷ್ಟ್ರೀಯ ಯುದ್ಧ ವಿರೋಧ ನೀತಿ ಜಾರಿಗೊಳ್ಳಬೇಕು.

ವಿಶ್ವಶಾಂತಿ ಪ್ರಕ್ರಿಯೆ ಜಾರಿಗೆ ಬರಬೇಕು.

ಸರ್ಕಾರ ಸಾಮ್ರಾಜ್ಯಶಾಹಿ ಒತ್ತಡಗಳಿಗೆ ಮಣಿದು ಯುದ್ಧವನ್ನು ಪ್ರೋತ್ಸಾಹಿಸಬಾರದು.

ಸಮಗ್ರ ಪ್ರಾಥಮಿಕ ಆರೋಗ್ಯ ವ್ಯವಸ್ಥೆ

2000 ಇಸವಿಯವರೆಗೆ ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್ ಹಾಗೂ ವಿಶ್ವ ಬ್ಯಾಂಕ್ ಕೆಲವು ಆಯ್ದ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತಾ ಬಂದು ಸಮಗ್ರ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯನ್ನು ಕಡೆಗಣಿಸಿದೆ.

'ಎಲ್ಲರಿಗೂ ಆರೋಗ್ಯ ಈಗಲೇ'

ಜನಾರೋಗ್ಯಕ್ಕೆ ಜನಾಂದೋಲನ (ಮುಂಬೈ ಘೋಷಣೆ)

ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ತರಬೇತಿ ಪಡೆದ ವೈದ್ಯರು ಮೊದಲನೇ ಜಗತ್ತಿಗೆ ವಲಸೆ ಹೋಗುತ್ತಿದ್ದು ಬಿಲಿಯಾಂತರ ಡಾಲರ್‌ಗಳ ವರ್ಗಾವಣೆಯಾಗುತ್ತದೆ ಹಾಗೂ ಇಲ್ಲಿಯ ಆರೋಗ್ಯ ವ್ಯವಸ್ಥೆ ವೈದ್ಯರಿಲ್ಲದೆ ತೊಂದರೆ ಗೀಡಾಗಿದೆ. ಈ ವರ್ಗಾವಣೆಯಿಂದ ಇತರೇ ದೇಶದ ಖಾಸಗೀ ಕ್ಷೇತ್ರಕ್ಕೆ ಬಿಲಿಯಾಂತರ ಡಾಲರ್ ಲಾಭವಾಗಿ ಪರಿಣಮಿಸಿದೆ.

ಭಾರತದಲ್ಲಿ ಹಾಗೂ ಜಗತ್ತಿನ ಅನೇಕ ದೇಶಗಳಲ್ಲಿ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳು ವಿಶೇಷ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಪದ್ಧತಿಗಳು ಪ್ರಾಥಮಿಕ ಆರೋಗ್ಯ ವ್ಯವಸ್ಥೆಗೆ ಅಪಾರ ಸಹಾಯಕವಾಗಿದೆ. ಆದರೆ ಈ ಪದ್ಧತಿಗಳನ್ನು ಕಡೆಗಣಿಸಲಾಗಿದೆ.

ಸುಮಾರು ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಸಾವಿರಾರು ದಾಯಿಗಳು (Traditional Birth Attendant) ಹೆರಿಗೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಇವರು ಹೆರಿಗೆ ಮಾಡಿಸುವುದಲ್ಲದೆ ಮಹಿಳೆಯರ ಲೈಂಗಿಕ ಆರೋಗ್ಯದ ಬಗೆಗೂ ಸಲಹೆ ನೀಡುತ್ತಾ ಬಂದಿದ್ದಾರೆ. ಇವರ ಸೇವೆ ಹಾಗೂ ನಿಪುಣತೆಯನ್ನು ಗುರುತಿಸಲಾಗಿಲ್ಲ. ಇವರಿಗೆ ಹೆಚ್ಚಿನ ತರಬೇತಿ ಹಾಗೂ ಸಲಹೆ ಅಗತ್ಯವಾಗಿದೆ. ಗ್ರಾಮೀಣ ದಾಯಿ ಹಾಗೂ ಸಮಗ್ರ ಆರೋಗ್ಯ ಕಾರ್ಯಕರ್ತೆಯರನ್ನು ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಗುರುತಿಸಿ ಸೇರಿಸಿಕೊಳ್ಳಬೇಕಾಗಿದೆ.

ಅಲ್ಮಾ ಆಟಾ ಘೋಷಣೆ ಲಿಂಗ ಸಮಾನತೆ, ಪರಿಸರ ನೈರ್ಮಲ್ಯ, ಅಂಗವಿಕಲತೆ, ಮಾನಸಿಕ ಆರೋಗ್ಯ, ಹಾಗೂ ಸಾಂಪ್ರದಾಯಿಕ ಚಿಕಿತ್ಸೆಗಳಿಗೆ ವಿಶೇಷ ಒತ್ತು ಕೊಟ್ಟಿರಲಿಲ್ಲ. ಈ ವಿಷಯಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ. ವೈದ್ಯಕೀಯ ಶಿಕ್ಷಣವೂ ಕೂಡಾ ಇದನ್ನು ಕೂಡಲೇ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ.

ನಾಗರಿಕ ಸಮಾಜ ಹಾಗೂ ಸರ್ಕಾರಕ್ಕೆ ಕರೆ

ಆರೋಗ್ಯ ವ್ಯವಸ್ಥೆಗಳು ಸುಲಭವಾಗಿ ದೊರಕುವಂತೆ ಉತ್ತಮ ಗುಣಮಟ್ಟವನ್ನು ಹೊಂದುವಂತೆ ಹಾಗೂ ಸಮಾನತೆಯನ್ನು ಕಾಯ್ದುಕೊಳ್ಳುವಂತೆ ಸರಕಾರದ ಮೇಲೆ ಒತ್ತಡ ತರಬೇಕು. ಅಲ್ಮಾ ಆಟಾ ಶೀರ್ಮಾನದಂತೆ ಸ್ಥಳೀಯ ಅಗತ್ಯತೆಗೆ ತಕ್ಕಂತೆ ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಎಲ್ಲ ವಿಷಯಗಳನ್ನು ಜಾರಿಗೆ ತರಬೇಕು.

ಮುಂದುವರಿಯುವುದು

ಪಕ್ಷಾಂತರಿಗಳಿಗೆ ಪಾಠ.......

ಪುಟ 3 ರಿಂದ

ಎಂದು ಹೇಳುವ ಮೂಲಕ ರಾಜಕೀಂ ಅಪ್ರಬುದ್ಧತೆಯನ್ನು ಮೆರೆದರು. ಪ್ರಮೋ ಹೆಗಡೆಯವರು ಆಯ್ಕೆಯಾಗುತ್ತಾರೆಂದು ಲ ಹಾಕಿದರೂ ಈ ಲೆಕ್ಕ ತಿರುವು ಮುರುವಾಗಿ ಸೋ ಬಂದೊದಗಿತು.

ಇವರೊಂದಿಗೆ ಇನ್ನೂ ಕೆಲವರು ಹೋಗಿದ್ದಾ ಅದರಲ್ಲಿ ಕೆಲವರು ಹೋಗಿದ್ದಾರೆ ಎನ್ನುವುದ ಬಿಟ್ಟರೆ, ಬೇರೆ ಏನೂ ವ್ಯತ್ಯಾಸ ಇಲ್ಲ. ಇನ ಕೆಲವರು ಬಾಯಲ್ಲಿ ಸಿದ್ಧಾಂತ ಉಸುರುತ್ತಿದ್ದವರ ಹಾಗಾಗಿ ಅವರ ಬಗ್ಗೆ ಪ್ರಸ್ತಾಪಿಸಲಿಲ್ಲ.

ಪ್ರಭಾಕರ ರಾಣೆ, ದಿನಕರ ಶೆ ಮುಂತಾದವರು ಚುನಾವಣೆಯಲ್ಲಿ ಸೋತಿದ್ದಾ ನಿಜ; ಆದರೂ ರಾಜ್ಯದಲ್ಲಿ ಆ ಪಕ್ಷದ ಸಾಧ ದೊಡ್ಡದು. ಸರ್ಕಾರವನ್ನು ರಚಿಸುತ್ತಾ ಇವೆಲ್ಲಕ್ಕಿಂತ ಹೆಚ್ಚಾಗಿ ಮೂರನೇರಂಗವ ಜಾತ್ಯತೀತ ರಂಗವನ್ನು ಅವರು ಬಲಪಡಿಸ ಹೋದವರು; ಖಂಡಿತವಾಗಿ ಈ ಎರಡ ಕ್ಷೇತ್ರದಲ್ಲಿ ಇವರು ಪಕ್ಷಕ್ಕೊಂದು ಮಾನ್ ತಂದುಕೊಟ್ಟಿದ್ದಾರೆ.

ಈ ಹಿಂದೆ ಹೇಳಿದ ನಾಯಕರೆ ಮೊದಲಿನಂತೆ ಕಾಂಗ್ರೆಸ್-ಬಿಜೆಪಿಯನ್ನು ಚುನಾವಣೆಯನ್ನು ವಿರೋಧಿಸಿ ತೃತೀಯ ರಂಗವ (ಕಾಂಗ್ರೆಸ್- ಬಿಜೆಪಿಯೇತರ) ಬಲಪಡಿಸಿದ ಖಂಡಿತ ಈ ಜಿಲ್ಲೆಯಲ್ಲಿ ಬಿಜೆಪಿ ತ ಸದಸ್ಯಬಲವನ್ನು ಹೆಚ್ಚಿಸಿಕೊಳ್ಳುತ್ತಿರಲಿ ಪಕ್ಷಾಂತರಿಗಳು ಈಗಲಾದರೂ ಇದನ ಅರ್ಥಮಾಡಿಕೊಳ್ಳಬೇಕಾಗಿದೆ.

● ನಿಸಗ

"ಕ್ಯೂಬನ್ನರನ್ನು ನಾಶ ಮಾಡಬಹುದು - ಗುಲಾಮರಾಗಿಸಲು ಸಾಧ್ಯವಿಲ್ಲ"

ಜಗತ್ತಿನ ಸುತ್ತ
ಶರತ್ ಚಂದ್ರ

ವಿಶ್ವದ ಅತಿದೊಡ್ಡ ಭಯೋತ್ಪಾದಕ ಬುಶ್‌ನನ್ನು ತಡೆಯುವ ತಾಕತ್ತು ಇರುವುದು ಕ್ಯೂಬದ ಕ್ಯಾಸ್ಟ್ರೋಗೆ ಮಾತ್ರ. ಇತ್ತೀಚೆಗೆ ಕ್ರಾಂತಿಕಾರಿ ಕ್ಯೂಬನ್ನರನ್ನು ಕೆಣಕಿದ ಅಮೆರಿಕನ್ ಭಯೋತ್ಪಾದಕನಿಗೆ ಕ್ಯಾಸ್ಟ್ರೋ ನೀಡಿದ ದಿಟ್ಟ ಉತ್ತರ ಇಲ್ಲಿದೆ

ಅಮೆರಿಕದ ಅಧ್ಯಕ್ಷ ಬುಶ್‌ನಿಗೆ 'ವಿನಾಶಕಾಲೇ ...ರೀತ ಬುದ್ಧಿ' ಅಂತ ಕಾಣ್ತದೆ. ಇರಾಕ್‌ನಲ್ಲಿ ...ತಿಗೆ ಸಿಕ್ಕಿಹಾಕಿಕೊಂಡಿದ್ದರೂ, ಕ್ಯೂಬಾದ ...ಲೆ ತನ್ನ ಕೆಟ್ಟ ದೃಷ್ಟಿ ಬೀರಿದ್ದಾನೆ. ಮೇ 6 ರಂದು ...ಬಾದ ಮೇಲೆ ಇನ್ನಷ್ಟು ಆಕ್ರಮಕಾರಿ ಕ್ರಮಗಳನ್ನು ...ೀಷಿಸಿದ್ದಾನೆ. ಕ್ಯೂಬಾದಲ್ಲಿ ಪ್ರತಿ-ಕ್ರಾಂತಿ ...ಸಲು ಬಾಡಿಗೆ ಸೈನಿಕರನ್ನು 'ಪ್ರಜಾಸತ್ತೆಗೆ ...ತರ್ರಾಷ್ಟ್ರೀಯ ಸ್ವಯಂ-ಸೇವಕರ' ಹೆಸರಿನಲ್ಲಿ ...ಸುವುದು, ಇಂತಹ ಮತ್ತು ಇತರ ಬುಡಮೇಲು ...ಗಳಿಗೆ 5.9 ಕೋಟಿ ಡಾಲರುಗಳ ನಿಧಿ, ...ರಿಕದಲ್ಲಿರುವ ಅನಿವಾಸಿ ಕ್ಯೂಬನ್ನರಿಗೆ ಕ್ಯೂಬಾ ...ಟಿಗೆ ಇನ್ನಷ್ಟು ಹೆಚ್ಚಿನ ನಿರ್ಬಂಧಗಳು, ಮೆಕ್ಸಿಕೊ ...ರ್ಕಾರದ ಮೇಲೆ ಒತ್ತಡ ಹೇರಿ ಅಲ್ಲಿಗೆ ಅಧಿಕೃತ ...ಟಿಗೆ ತೆರಳಿದ ಕ್ಯೂಬನ್ ಕಮ್ಯುನಿಸ್ಟ್ ಪಕ್ಷದ ...ಯಕರ ಬಂಧನ, ತನ್ನ ಎಲ್ಲಾ ಕೊಳಕು ...ತ್ರಗಳನ್ನು ಬಳಸಿ ಚಿಕ್ಕ ದೇಶಗಳ ಮೇಲೆ ಭಾರಿ ...ತ್ತಡ ತಂದು ಜಿನೇವಾ ಮಾನವ ಹಕ್ಕು ...ಮಿಶನ್‌ನಲ್ಲಿ ಕ್ಯೂಬಾದ ವಿರುದ್ಧ ನಿರ್ಣಯ - ...ವೆಲ್ಲಾ ಅಮೆರಿಕದ ಹೊಸ ಆಕ್ರಮಣಕಾರಿ ...ಮಗಳು.


...ಎಂದಿನಂತೆ ಅಮೆರಿಕದ ಈ ...ಕ್ರಾಮಕ ಕ್ರಮಗಳನ್ನು ...ಮೆಟ್ಟಿಸಲು ಇಡೀ ಕ್ಯೂಬಾ ಎದ್ದು ...ತಿದೆ. ಮೇ 14 ರಂದು ...ಮೆರಿಕದ ಹಿತಾಸಕ್ತಿ ...ತಿನಿಧಿಸುವ ಕಛೇರಿ ಮುಂದೆ ...ಹತ್ ಪ್ರದರ್ಶನದಲ್ಲಿ ಹತ್ತು ಲಕ್ಷ ...ಕ್ಯೂಬನ್ನರು ಭಾಗವಹಿಸಿದ್ದರು. ಈ ...ಹತ್ ಪ್ರತಿಭಟನಾ ರ್‍ಯಾಲಿ ...ದ್ದೇಶಿಸಿ ಮಾತನಾಡಿದ ಕ್ಯಾಸ್ಟ್ರೋ "ಕ್ಯೂಬನ್ನರನ್ನು ನಾಶ ...ಮಾಡಬಹುದು - ಆದರೆ ಎಂದೂ ...ಗುಲಾಮರನ್ನಾಗಿಸಲು ಸಾಧ್ಯವಿಲ್ಲ" ...ಎಂದು ಬುಶ್‌ಗೆ ಎಚ್ಚರಿಕೆ ...ನೀಡಿದರು. ಬುಶ್ ಮತ್ತು ಆತನ ಕೇಡಿ ...ಸರ್ಕಾರವನ್ನು ಅತ್ಯಂತ ಖಾರವಾಗಿ ಮೂದಲಿಸಿದ ...ಕ್ಯಾಸ್ಟ್ರೋ ತಾನು ಅಮೆರಿಕದ ಈ ಕ್ರಮಗಳನ್ನು ...ವಿರೋಧಿಸಿ ಹೋರಾಡುತ್ತಾ ರಣರಂಗದಲ್ಲಿ ...ಮಡಿಯಲು ಸಿದ್ಧ ಎಂದು ಘೋಷಿಸಿದ್ದಾರೆ. ಕಳೆದ ...5 ವರ್ಷಗಳಲ್ಲಿ ಕ್ಯೂಬಾವನ್ನು ನಾಶ ಮಾಡಲು ...ಪ್ರಯತ್ನ ವಿಫಲವಾದಂತೆ ಬುಶ್‌ನ ಕೊನೆಯ ...ಪ್ರಯತ್ನವೂ ವಿಫಲವಾಗುವುದು ಎಂದು ದೃಢ ...ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಬುಶ್ ಇತ್ತೀಚೆಗೆ ಕೈಗೊಂಡಿರುವ ...ಆಕ್ರಮಣಕಾರಿ ಕ್ರಮಗಳ ವಿವರಣಗಳು ಮತ್ತು ...ಕ್ಯಾಸ್ಟ್ರೋ ಭಾಷಣದ ಆಯ್ದ ಭಾಗಗಳು ಇಲ್ಲಿವೆ.

...ಬುಶ್ ಘೋಷಿಸಿದ ಹೊಸ ಕ್ಯೂಬಾ - ...ವಿರೋಧಿ ಕ್ರಮಗಳು

ಮೇ 6 ರಂದು ಅಧ್ಯಕ್ಷ ಬುಶ್ ಘೋಷಿಸಿದ ...ಹೊಸ ಕ್ಯೂಬಾ-ವಿರೋಧಿ ಕ್ರಮಗಳನ್ನು ಕ್ಯೂಬಾ ...ಕಮ್ಯುನಿಸ್ಟ್ ಪಕ್ಷದ ಮುಖಪತ್ರ ಗ್ರಾನ್ಮಾದಲ್ಲಿ ...ಪಟ್ಟಿ ಮಾಡಿದೆ. ಅದರ ಸಾರಾಂಶ ಇಲ್ಲಿದೆ!

1. 50 ಕೋಟಿ ಡಾಲರುಗಳ ಹೊಸ ನಿಧಿ ಕ್ಯೂಬಾದ ಕ್ರಾಂತಿಯ ವಿನಾಶದತ್ತ ಕೆಳಗಿನ ನಿರ್ದಿಷ್ಟ ಕ್ರಮಗಳಿಗೆ ಬಳಸಲಾಗುವುದು.
   - ಕ್ಯೂಬಾದಲ್ಲಿ ಪ್ರತಿ-ಕ್ರಾಂತಿ ನಡೆಸಲು ಮೂರನೇ ದೇಶಗಳ ನಾಗರಿಕರನ್ನು 'ಪ್ರಜಾಸತ್ತೆಗೆ ಅಂತರ್ರಾಷ್ಟ್ರೀಯ ಸ್ವಯಂ ಸೇವಕರ' ಹೆಸರಲ್ಲಿ ಕಳಿಸುವುದು.
   - ದಕ್ಷಿಣ ಅಮೆರಿಕದ ಯುವಕರನ್ನು ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ತರಬೇತಿ ಮಾಡಿ ಕ್ಯೂಬಾಕ್ಕೆ ಕ್ರಾಂತಿ-ವಿರೋಧಿ ಚಟುವಟಿಕೆ ನಡೆಸಲು ಕಳಿಸುವುದು.
   - ಯುದ್ಧ-ವಿಮಾನ ಒಂದರ ಮೇಲಿಂದ ಕ್ಯೂಬಾ-ವಿರೋಧಿ ಅಪಪ್ರಚಾರಕ್ಕೆ ರೇಡಿಯೋ ಪ್ರಸಾರ (ಯುದ್ಧ- ನಡೆಸುವ ಪ್ರಸಾರವನ್ನು 'ಜಾಮ್' ಮಾಡಲು ಸಾಧ್ಯವಾಗದೆ ಇರುವಂತೆ ಮಾಡಲು)
   - ಕ್ಯೂಬಾದಲ್ಲಿ 'ಪ್ರಜಾಸತ್ತೆ' (ಕ್ರಾಂತಿ-ವಿರೋಧಿ ಚಟುವಟಿಕೆ ಎಂದು ಓದಿಕೊಳ್ಳಬೇಕು) ತರಲು ಮೂರನೇ ದೇಶಗಳಲ್ಲಿ ಪ್ರಚಾರ-ಪ್ರಕ್ಷೋಭೆ
2. ಅಮೆರಿಕದಲ್ಲಿರುವ ಅನಿವಾಸಿ ಕ್ಯೂಬನ್ನರಿಗೆ ತಾಯ್ನಾಡಿಗೆ ಭೇಟಿ ನೀಡುವ, ಹಣ ಕಳಿಸುವುದರ ಹಕ್ಕಿನ ಮೇಲೆ ಇನ್ನಷ್ಟು ಹೆಚ್ಚಿದ ನಿರ್ಬಂಧಗಳು
   - ಇನ್ನು ಮೇಲೆ ಕ್ಯೂಬನ್ನರು ತಮ್ಮ ತಂದೆ, ತಾಯಿ, ಮಕ್ಕಳು, ಮೊಮ್ಮಕ್ಕಳು, ಅಜ್ಜ-ಅಜ್ಜಿ, ಗಂಡ-ಹೆಂಡತಿಯಂತಹ ನೇರ ಸಂಬಂಧಿಗಳನ್ನು ಮಾತ್ರ ಅಮೆರಿಕಕ್ಕೆ ಕಳಿಸಬಹುದು.
   - ಇಂತಹ ಹೆಚ್ಚಿನ ಸಂಬಂಧಿಗಳು ಕಮ್ಯುನಿಸ್ಟ್ ಪಕ್ಷದ ಸದಸ್ಯರು ಅಥವಾ ಸರ್ಕಾರಿ ಅಧಿಕಾರಿಗಳಾಗಿದ್ದು ಹಣ ಕಳಿಸುವಂತಿಲ್ಲ.
   - ಈಗ ವರ್ಷಕ್ಕೊಮ್ಮೆ ತಾಯ್ನಾಡಿಗೆ ಭೇಟಿ ನೀಡುವ ಅವಕಾಶವನ್ನು ಮೂರು ವರ್ಷಗಳಿಗೊಮ್ಮೆ ಮೊಟಕುಗೊಳಿಸಲಾಗಿದೆ.
   - ತಾಯ್ನಾಡಿಗೆ ಭೇಟಿ ನೀಡಿದಾಗ ಕ್ಯೂಬಾದಲ್ಲಿ ಖರ್ಚು ಮಾಡಬಹುದಾದ ಈಗಿನ 164 ಡಾಲರುಗಳಿಂದ 50 ಡಾಲರುಗಳಿಗೆ ಕಡಿತ
3. ಕ್ಯೂಬಾದಲ್ಲಿ ಬಂಡವಾಳ ಹೂಡಿರುವ ಕಂಪನಿಗಳ ಮೇಲೆ ಅಮೆರಿಕದಲ್ಲಿ ಕಾನೂನು ಕ್ರಮ ಜರುಗಿಸುವ, ಸಿಬ್ಬಂದಿಗೆ ಅಮೆರಿಕನ್ ವೀಸಾ ನಿರಾಕರಿಸುವ ಬಗ್ಗೆ ಪರಿಶೀಲನೆ





ಬುಶ್‌ಗೆ ಕ್ಯಾಸ್ಟ್ರೋ ಎಚ್ಚರಿಕೆ

4. ಮೂರನೇ ದೇಶಗಳಲ್ಲಿ ಕ್ಯೂಬಾದ ಕಂಪನಿಗಳ ಆರ್ಥಿಕ ಚಟುವಟಿಕೆಗೆ ಹಾನಿ ಮಾಡಲು ಕ್ರಮಗಳು
5. ಕ್ಯೂಬಾಕ್ಕೆ ಪ್ರವಾಸ ನಿರುತ್ತೇಜನಗೊಳಿಸಲು ಮೂರನೇ ದೇಶಗಳಲ್ಲಿ ಕ್ರಮ
6. ಮೆಕ್ಸಿಕೊ-ಕ್ಯೂಬಾ ಕಮ್ಯೂನಿಸ್ಟ್ ಪಕ್ಷಗಳ ವಾರ್ಷಿಕ (ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಂತಹ ಭೇಟಿ) ವಿಚಾರ ವಿನಿಮಯ ಸಭೆಗೆ ತೆರಳಿದ್ದ ಕ್ಯೂಬನ್ ಪಕ್ಷದ ಅಧಿಕಾರಿಯನ್ನು ಗೂಢಾಚಾರ ಎಂದು ಆಪಾದಿಸಿ ವಾಪಸ್ಸು ಕಳಿಸಿದ್ದು. ಈ ರೀತಿ ಮಾಡುವಂತೆ ಮೆಕ್ಸಿಕೊ ಸರ್ಕಾರದ ಮೇಲೆ ಅಮೆರಿಕ ಒತ್ತಡ ಹೇರಿತ್ತು.
7. ಜಿನೇವಾದಲ್ಲಿ ನಡೆದ ಮಾನವ ಹಕ್ಕು ಕಮಿಶನ್‌ನಲ್ಲಿ ಕ್ಯೂಬಾವನ್ನು ಖಂಡಿಸುವ ನಿರ್ಣಯ ಅಮೆರಿಕ ಮಂಡಿಸಿತ್ತು. ಅದರ ಪರವಾಗಿ ಓಟು ಹಾಕಲು ಹಲವು ಚಿಕ್ಕದೇಶಗಳ ಮೇಲೆ ಭಾರಿ ಒತ್ತಡ ಹೇರಿತ್ತು. ನಿರ್ಣಯಕ್ಕೆ 22 ಪರ, 21 ವಿರುದ್ಧ ಮತ್ತು 10 ಗೈರು ಹಾಜರು - ಮತಗಳು ಬಂದಿದ್ದವು. ಉದಾಹರಣೆಗೆ ಭೂತಾನ್ ನಿರ್ಣಯ ಪರ ಓಟು ಮಾಡುವಂತೆ ಮನವೊಲಿಸಿತು. ಭಾರತದಲ್ಲಿನ ಅಮೆರಿಕದ ರಾಯಭಾರಿ ಸ್ವತಃ ಭೂತಾನ್‌ಗೆ ಭೇಟಿ ಇತ್ತಿದ್ದನಂತೆ. ಗ್ವಾಟಾನಾಮಾ ಕೊಲ್ಲಿಯಲ್ಲಿ ಅಮೆರಿಕದ ಮಿಲಿಟರಿ ಯಾತನಾ ಶಿಬಿರದ ವಿರುದ್ಧ ಕ್ಯೂಬಾ ಮಂಡಿಸಿದ್ದ ನಿರ್ಣಯಕ್ಕೆ ಚರ್ಚೆಗೆ ತೆಗೆದುಕೊಳ್ಳುವಂತೆ ಕಮಿಷನ್ ಮೇಲೆ ಭಾರಿ ಒತ್ತಡ.

ಕ್ಯಾಸ್ಟ್ರೋ ಭಾಷಣದ ಆಯ್ದ ಭಾಗಗಳು

ಮಿಸ್ಟರ್ ಜಾರ್ಜ್ ಬುಶ್, ಹತ್ತು ಲಕ್ಷ ಕ್ಯೂಬನ್ನರು ಇಲ್ಲಿ ಅಮೆರಿಕನ್ ಹಿತಾಸಕ್ತಿ ಕಚೇರಿ ಮುಂದೆ ಸೇರಿದ್ದೇವೆ. ಇದು ಈ ಪ್ರತಿಭಟನೆಯಲ್ಲಿ ಭಾಗವಹಿಸಬಯಸುವ ಕ್ಯೂಬನ್ನರ ಸಣ್ಣ ಭಾಗ ಮಾತ್ರ.........

ನಿಮ್ಮ ಮತ್ತು ನಿಮ್ಮ ಒಡನಾಡಿಗಳ ಜಗತ್ತಿನಲ್ಲಿ ಮಾನವ ಹಕ್ಕುಗಳ ಬಗ್ಗೆ ಬರೆಯುವ ಪ್ರತಿ ಒಂದು ಶಬ್ದ ಸಹ ಹಸಿ ಹಸಿ ಸುಳ್ಳು. ನೀವೆಲ್ಲಾ ಜಗತ್ತಿನ ಲೂಟಿ ಮಾಡುವವರಿಗೆ ಮಾನವ ಹಕ್ಕು ಬಗ್ಗೆ ಮಾತನಾಡುವ ಹಕ್ಕಿಲ್ಲ.......

ನಿಮಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಬಗ್ಗೆ ಮಾತನಾಡುವ ನೈತಿಕ ಹಕ್ಕು ಇಲ್ಲ, ಇಡೀ ಜಗತ್ತನ್ನು ಹಲವು ಭಾರಿ ನಾಶ ಮಾಡಬಲ್ಲ ಪೈಶಾಚಿಕ ಅಸ್ತ್ರಗಳನ್ನು ಪೇರಿಸಿಟ್ಟಿರುವ ನಿಮಗೆ ಆ ಹಕ್ಕು ಎಂದೂ ಇರಲಿಲ್ಲ. ಎಲ್ಲಾ ದೇಶಗಳ ಜನರ ಮಾನವ ಹಕ್ಕುಗಳನ್ನು ನಾಶ ಮಾಡಿ, ಜಗತ್ತಿನ ಎಲ್ಲಾ ಸಂಪನ್ಮೂಲಗಳ ಮತ್ತು ಮಾರುಕಟ್ಟೆಗಳನ್ನು ಲೂಟಿ ಮಾಡಲು ಹೊರಟಿರುವ, ನಿಮ್ಮ ಕೊಳೆತು ನಾರುತ್ತಿರುವ ಸಾಮಾಜಿಕ-ರಾಜಕೀಯ ವ್ಯವಸ್ಥೆಯನ್ನು ಜಗತ್ತಿನ ಮೇಲೆ ಹೊರಿಸಲು ಕಾತರಿಸುತ್ತಿರುವ - ನಿಮಗೆ ಸ್ವಾತಂತ್ರ್ಯ, ಮಾನವ ಹಕ್ಕುಗಳಂತಹ ಪವಿತ್ರ ಶಬ್ದಗಳನ್ನು ಉಚ್ಚರಿಸಲು ಹಕ್ಕೂ ಇಲ್ಲ.......

ತೀವ್ರ ಚುನಾವಣಾ ಅಕ್ರಮಗಳಿಂದ ಅಧ್ಯಕ್ಷರಾದ ನಿಮಗೆ ಪ್ರಜಾಪ್ರಭುತ್ವ ಎಂಬ ಶಬ್ದ ಹೇಳಲೂ ಹಕ್ಕು ಇಲ್ಲ. ಮಾನವ ಕೋಟಿ ಮೇಲೆ ಮಳೆಗರೆಯಲು ಪೇರಿಸಿಟ್ಟಿರುವ ಮಾರಕಾಸ್ತ್ರಗಳ ಮೇಲೆ ಕೂತಿರುವ ನೀವು 'ಸ್ವಾತಂತ್ರ್ಯ' ಬಗ್ಗೆ ಮಾತನಾಡಿದರೆ ಯಾರು ನಂಬುತ್ತಾರೆ?....

ಜಗತ್ತಿನ ಅತ್ಯಂತ ಅಭಿವೃದ್ಧಿ ದೇಶಗಳಿಗಿಂತಲೂ ಸಾಕ್ಷರತೆ, ಜ್ಞಾನ ಮತ್ತು ಸಂಸ್ಕೃತಿ ಮಟ್ಟದಲ್ಲಿ ಹೆಚ್ಚಿನ ಸಾಧನೆ ಮಾಡಿರುವ ಕ್ಯೂಬಾದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು 'ಭಯೋತ್ಪಾದಕ' ಎಂದು ಕರೆಯುತ್ತೀರಲ್ಲಾ? ಕ್ಯೂಬಾ ತನ್ನ ಎಲ್ಲಾ ನಾಗರಿಕರಿಗೆ ನಿಮ್ಮ ದೇಶಕ್ಕಿಂತ ಹೆಚ್ಚಿನ ವೈದ್ಯಕೀಯ ಮತ್ತು ಶಿಕ್ಷಣ ಸವಲತ್ತು ಒದಗಿಸಿದೆ. ಹಾಗಿದ್ದರೆ ಯಾರ ವ್ಯವಸ್ಥೆ ಉತ್ತಮ? ನಿಮ್ಮದೋ ನಮ್ಮದೋ?......

ಕ್ಯೂಬನ್ನರನ್ನು ನಾಶ ಮಾಡಬಹುದು. ಆದರೆ ನಿಮಗೆ ಚೆನ್ನಾಗಿ ಗೊತ್ತು - ಅವರನ್ನು ಗುಲಾಮರನ್ನಾಗಿಸಲು ಸಾಧ್ಯವಿಲ್ಲ. ಪುನಃ ಅಮೆರಿಕದ ನವ-ವಸಾಹತುಶಾಹಿ ಮಾಡಲು ಸಾಧ್ಯವಿಲ್ಲ.

ಇವತ್ತು ಜಗತ್ತಿನಲ್ಲಿ ಕ್ಯೂಬಾ ಜೀವನ-ಪರ ಹೋರಾಟದಲ್ಲಿ ತೊಡಗಿದೆ. ನೀವು ಮರಣದ-ಪರ ಹೋರಾಟದಲ್ಲಿ ತೊಡಗಿದ್ದೀರಿ. ನೀವು ಮಾರಕಾಸ್ತ್ರಗಳಿಂದ ಸಾವಿರಾರು ನಾಗರಿಕರನ್ನು ಕೊಲ್ಲುವುದರಲ್ಲಿ ತೊಡಗಿದ್ದೀರಿ. ಆದರೆ ಕ್ಯೂಬಾದ ಡಾಕ್ಟರುಗಳು ಹಲವು ದೇಶಗಳಲ್ಲಿ ಮಕ್ಕಳು, ತಾಯಂದಿರು, ವೃದ್ಧರು ಮತ್ತು ರೋಗಿಗಳ ಜೀವ ಉಳಿಸಿಕೊಳ್ಳಲು ಹೋರಾಟ ನಡೆಸಿದ್ದಾರೆ....

ನೀವು ಯುದ್ಧಕ್ಕೆ ಆಹ್ವಾನ ಕೊಟ್ಟೇ ಒಪ್ಪಿರುವುದರಿಂದ ನಾನು ನಿಮಗೆ ರೋಮನ್ ಯುದ್ಧಕ್ಕೆ ತೆರಳುವ ಮುನ್ನ ಹೇಳಿದಂತೆ ಹೇಳಬೇಕಾಗಿದೆ...

ಸೀಸರನೇ ನಿನಗೆ ಜಯವಾಗಲಿ!
ಸಾಯಲು ಹೊರಟ ನಾವು ನಿನಗೆ ಪ್ರಣಾಮ ಮಾಡುತ್ತಿದ್ದೇವೆ!
ನಾನು ನಿನ್ನ ಮುಖ ನೋಡಲು ಸಾಧ್ಯವಾಗುವುದಿಲ್ಲ
ಎಂಬುದು ನನ್ನ ಒಂದೇ ವ್ಯಥೆ!
ಏಕೆಂದರೆ ನಾನು ಸಾವಿರಾರು ಮೈಲಿಗಳಾಚೆ ನನ್ನ ತಾಯ್ನಾಡಿನ ರಕ್ಷಣೆಯ ಹೋರಾಟದಲ್ಲಿ ಸಾಯಲು ಸಿದ್ಧನಾಗಿರುತ್ತೇನೆ!



ನಿರೀಕ್ಷೆ ಹುಸಿಗೊಳಿಸಿದ 'ಯುವ'

ಮೂವರು ಯುವಕರು - ಒಬ್ಬ ಅವಿದ್ಯಾವಂತನಾಗಿ ಪುಂಡಾಡಿಕೆಯಿಂದಲೇ ಬದುಕಿಗಾಗಿ ದಾರಿ ಕಂಡುಕೊಂಡವ, ಇನ್ನೊಬ್ಬ ವಿದ್ಯಾರ್ಥಿ ಮುಖಂಡ, ರಾಜಕೀಯಕ್ಕಿಳಿದು ಬದಲಾವಣೆಗಾಗಿ ಬಯಸುವವ, ಮಗದೊಬ್ಬ ವಿದ್ಯಾವಂತ ಒಳ್ಳೆಯ ಉದ್ಯೋಗ ಅರಿಸಿ ಉತ್ತಮ ಭವಿಷ್ಯತ್ತಿನ ನಿರೀಕ್ಷೆಯಲ್ಲಿರುವವ. ಈ ಮೂವರ ನಡುವಿನ ಸಂಘರ್ಷವೇ 'ಯುವ'

ಖ್ಯಾತ ನಿರ್ದೇಶಕ ಮಣಿರತ್ನಂ ಅವರ ಸಾಕಷ್ಟು ನಿರೀಕ್ಷೆ ಹುಟ್ಟಿಸಿದ್ದ ಈ ಚಿತ್ರದಲ್ಲಿ ದ್ವಂದ್ವಗಳಿದ್ದು ನೋಡುಗರಿಗೆ ಗೊಂದಲ ಮೂಡಿಸುತ್ತದೆ. ಮಣಿರತ್ನಂ ಅವರ ಉದ್ದೇಶ ಬಹುಶಃ ವಿದ್ಯಾರ್ಥಿಗಳು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬುದಿರಬಹುದು. ಅವರ ನಿಲುವೇನೋ ಸರಿ. ಆದರೆ ರಾಜಕಾರಣದಲ್ಲಿ ಪಾಲ್ಗೊಳ್ಳುವಿಕೆ ಯಾವ ರೀತಿಯಲ್ಲಿ ಇರಬೇಕೆಂಬುದರ ಬಗ್ಗೆ ಅವರಿಗೆ ಗೊಂದಲವಿದ್ದಂತೆ ಅಥವಾ ಸ್ಪಷ್ಟತೆಯಿಲ್ಲದಂತೆ ಕಾಣುತ್ತದೆ. ರಾಜಕಾರಣದಲ್ಲಿ ಬದಲಾವಣೆ ಬಯಸುವ ವಿದ್ಯಾರ್ಥಿ ಮುಖಂಡ ಹಿಂಸೆಯ ಪ್ರತಿರೂಪವಾಗಿರುವುದು ವಿಪರ್ಯಾಸ. ರಾಜಕೀಯ ಪ್ರವೇಶಿಸಲು ಹೊಡೆದಾಟ, ಬಡಿದಾಟಗಳು ಅನಿವಾರ್ಯ ಎಂಬುದು ಭ್ರಮಾಲೋಕದ ಕಲ್ಪನೆ. ಮಣಿರತ್ನಂ ಇದರಿಂದ ಹೊರಬರದೆ ಅವಾಸ್ತವಿಕವಾದುದನ್ನು ಹೇಳಲೊರಟಿದ್ದಾರೆ. ನಿಜ, ವಿದ್ಯಾರ್ಥಿಗಳು ರಾಜಕಾರಣದಲ್ಲಿ ಭಾಗವಹಿಸಬೇಕಾದ್ದು ಇಂದಿನ ಅಗತ್ಯ. ರಾಜಕಾರಣ ಎಂಬುದು ಹೊಲಸು ಎಂದು ದೂರ ನಿಲ್ಲುವುದರಿಂದ ಉಪಯೋಗವಿಲ್ಲ. ಅದರಲ್ಲಿ ಪಾಲ್ಗೊಂಡು ಹೊಲಸು ತೊಳೆಯಬೇಕು. ಭ್ರಷ್ಟ ವ್ಯವಸ್ಥೆಯ ಬದಲಾವಣೆಗೆ ತುಡಿಯುವ ಮನಸ್ಸಿಗೆ ರಾಜಕೀಯ ಜ್ಞಾನ ಅತ್ಯಗತ್ಯ.

ಭ್ರಷ್ಟ ರಾಜಕಾರಣಿಯೊಬ್ಬನ ಎದುರಿಗೆ ಸ್ಪರ್ಧೆಗೆ ನಿಲ್ಲುತ್ತಾನೆ ವಿದ್ಯಾರ್ಥಿ ಮುಖಂಡ. ಅವನ ನಿಲುವುಗಳನ್ನು ಒಪ್ಪಿ ಅವನಿಗೆ ಬೆಂಬಲವಾಗಿ ನಿಲ್ಲುತ್ತಾನೆ ಮತ್ತೊಬ್ಬ ಯುವಕ. ಇವರಿಬ್ಬರನ್ನು ಮುಗಿಸಲು ರಾಜಕಾರಣಿಯ ಹಿಂಬಾಲಕನಾದ ಮತ್ತೊಬ್ಬ ಯುವಕ. ಅಂತಿಮವಾಗಿ ರಾಜಕಾರಣಿ ಸೋಲುತ್ತಾನೆ, ಗೂಂಡಾಗಿರಿಯೇ ಬದುಕಾದ ಯುವಕ ಜೈಲು ಪಾಲಾಗುತಾನೆ, ವಿದ್ಯಾರ್ಥಿ ಮುಖಂಡ ಗೆದ್ದು ಅಸೆಂಬ್ಲಿ ಪ್ರವೇಶಿಸುತ್ತಾನೆ ಇಷ್ಟು ಚಿತ್ರದ ಕಥೆ.

ಇದರ ಮಧ್ಯೆ ಸಾಕಷ್ಟು ಹೊಡೆದಾಟ, ಬಡಿದಾಟ, ಪ್ರಿಯತಮೆಯರೊಂದಿಗೆ ಸಲ್ಲಾಪ ಎಲ್ಲವೂ ಹೇರಳವಾಗಿದೆ. ಇಂದಿನ ಯುವಜನರಿಗಿರುವ ನಿರುದ್ಯೋಗ ಸಮಸ್ಯೆ, ಬದುಕಿನ ಸಮಸ್ಯೆಗಳ ಬಗ್ಗೆ ಸೂಕ್ಷ್ಮವಾಗಿ ಬೆಳಕು ಚೆಲ್ಲಿದರೂ ಹಿಂಸೆಯ ವೈಭವೀಕರಣದಲ್ಲಿ ಅದು ಗೌಣವಾಗಿಬಿಡುತ್ತದೆ.

ಯುವಜನ ಎಂದರೆ ಬರೀ ಹೊಡೆದಾಟಗಳಿಗೆ ಮಾತ್ರ ಸೀಮಿತ ಎಂದಾಗಲಿ ಅಥವಾ ರಾಜಕೀಯದಲ್ಲಿ ಭಾಗವಹಿಸುವುದು ಎಂದರೆ ಪುಂಡಾಡಿಕೆಗಾಗಿ ಎಂದು ಭಾವಿಸಬೇಕಾದ ಅಗತ್ಯವಿಲ್ಲ. ಸೃಜನಾತ್ಮಕವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳುವುದೇ ಅಲ್ಲದ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಬೇಕಾದ ಅನಿವಾರ್ಯತೆಯನ್ನು ಮನಗಾಣಿಸಿ ಕೊಡಬೇಕಾಗಿದೆ. ದೇಶದ ಭವಿಷ್ಯದ ನಿರ್ಧಾರದಲ್ಲಿ ಪಾಲ್ಗೊಳ್ಳುವ ಹಕ್ಕು ವಿದ್ಯಾರ್ಥಿ ಯುವಜನರಿಗೂ ಇದೆ. ಮಣಿರತ್ನಂ ಈ ಅಂಶವನ್ನು ಕಡೆಗಣಿಸಿ ರಾಜಕೀಯ ಎಂದರೆ ಹೊಡೆದಾಟ ಅನಿವಾರ್ಯ ಎಂಬಂತೆ ಬಿಂಬಿಸಿದ್ದಾರೆ.

ಇನ್ನುಳಿದಂತೆ ಚಿತ್ರದ ತಾರಾಗಣದಲ್ಲಿ ಅಭಿಷೇಕ್ ಬಚ್ಚನ್ ರೌಡಿಯಾಗಿ ಕ್ರೌರ್ಯವೇ ಮೈವೆತ್ತಂತೆ ಅಭಿನಯಿಸಿದ್ದರೆ, ವಿದ್ಯಾರ್ಥಿ ಮುಖಂಡನಾಗಿ ಅಜಯ್ ದೇವಗನ್ ಮತ್ತು ವಿವೇಕ್ ಒಬೆರಾಯ್ ಅಭಿನಯಿಸಿದ್ದಾರೆ, ರೌಡಿಯ ಹೆಂಡತಿಯಾಗಿ ಪಡಬಾರದ ಪಾಡು ಬೀಳುವ ರಾಣಿ ಮುಖರ್ಜಿ ಗಮನ ಸೆಳೆಯುತ್ತಾರೆ. ಉಳಿದಂತೆ ಕರೀನಾಕಪೂರ್, ಇಶಾ ಡಿಯೋಲ್ ಅಪರೂಪಕ್ಕೊಮ್ಮೆ ಮುಖ ತೋರಿಸುತ್ತಾರೆ. ಸಂಗೀತದಲ್ಲಿ ರೆಹಮಾನ್ ಗಮನ ಸೆಳೆಯುವಲ್ಲಿ ವಿಫಲರಾಗಿದ್ದಾರೆ.

ಜನಾದೇಶ - 2004 "ಬಿಜೆಪಿಗೆ ತಾತ್ವಿಕ ಸೋಲು - ಕಮ್ಯೂನಿಸ್ಟರ ತತ್ವಬದ್ಧ ರಾಜಕೀಯಕ್ಕೆ ಮನ್ನಣೆ"

ಯು.ಆರ್.ಅನಂತಮೂರ್ತಿ

"2004 ರ ಮಹಾಚುನಾವಣೆ ಜನಾದೇಶ ಮತಾಂಧತೆಯ ವಿರುದ್ಧ ಬಂದಿದೆ. ಜನರ ಭಾವನೆಗಳನ್ನು ಕೆದಕಿ ಮತ ಪಡೆಯುವುದು ಒಂದು ತಾತ್ಕಾಲಿಕ ಪ್ರಕ್ರಿಯೆಯಷ್ಟೆ. ಎಲ್ಲಾ ಕಾಲಕ್ಕೂ ಅದು ಸತ್ಯವಾಗುವುದಿಲ್ಲ ಎಂಬ ಕಟು ಸತ್ಯವನ್ನು ಭಾರತದ ಸಾಮಾನ್ಯ ಜನ ಮೆರೆದಿದ್ದಾರೆ" ಎಂದು ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ಯು.ಆರ್. ಅನಂತಮೂರ್ತಿ ವಿಶ್ಲೇಷಿಸಿದ್ದಾರೆ.

"ಜನಾದೇಶ 2004- ಒಂದು ಸಂವಾದ" ಕಾರ್ಯಕ್ರಮವನ್ನು ಬೆಂಗಳೂರು ನಗರದ ನಯನ ಸಭಾಂಗಣದಲ್ಲಿ ದಿನಾಂಕ 21.05.2004 ರಂದು ಕೋಮುವಾದದ ವಿರುದ್ಧ ಸಾಹಿತಿ, ಕಲಾವಿದರು ಮತ್ತು ನಾಗರಿಕರ ವೇದಿಕೆ' ಏರ್ಪಡಿಸಿದ್ದ ಸಭೆಯಲ್ಲಿ ಡಾ.ಅನಂತಮೂರ್ತಿ ತಮ್ಮ ವಿಚಾರ ಮಂಡಿಸಿದರು.


"ಐದು ವರ್ಷ ಆಡಳಿತ ನಡೆಸಿದ ನಂತರ ಪಕ್ಷಗಳನ್ನು ಜನ ಬದಲಾಯಿಸುತ್ತಾರೆ. ಆದರೆ ಚಿಂತನೆ ನಡೆಸುವ, ವಾಗ್ವಾದದಲ್ಲಿ ಪ್ರವೀಣರಾಗಿರುವ ಬಂಗಾಳಿಗಳು ಕಮ್ಯೂನಿಸ್ಟ್ ನೇತೃತ್ವದ ರಂಗವನ್ನು ಸತತವಾಗಿ ಆರಿಸುತ್ತಲೇ ಇದ್ದಾರೆ. ಪದೇ ಪದೇ ಫ್ಯಾಶನ್ ಬದಲಾಯಿಸುವಂತೆ ಪಕ್ಷಗಳನ್ನು ಬದಲಾಯಿಸುತ್ತಿಲ್ಲ. ತತ್ವಬದ್ಧರಾಗಿದ್ದರೆ ಭ್ರಷ್ಟರಲ್ಲದಿದ್ದರೆ ಜನ ಮತ್ತೆ ಆರಿಸುತ್ತಾರೆ. ಪಶ್ಚಿಮ ಬಂಗಾಳದಲ್ಲಿ ಆಗಿರುವುದೇ ಅದೇ. ಏಕೆಂದರೆ ಕಮ್ಯೂನಿಸ್ಟರು ಜನರ ಹಿತ ಕಾಯುವುದನ್ನೇ ತಮ್ಮ ಕಾಯಕವನ್ನಾಗಿ ಮಾಡಿಕೊಂಡಿದ್ದಾರೆ. ದೇಶದಲ್ಲಿ ತತ್ವಬದ್ಧ ರಾಜಕೀಯಕ್ಕೆ ಭವಿಷ್ಯವಿದೆ ಎನ್ನುವುದಕ್ಕೆ ಪಶ್ಚಿಮ ಬಂಗಾಳವೇ ನಿದರ್ಶನ" ಎಂದು ಅವರು ಹೇಳಿದರು.

ಇಡೀ ಆರ್ಥಿಕ ವ್ಯವಸ್ಥೆಗೆ ಷೇರು ಮಾರುಕಟ್ಟೆಯೇ ಅತ್ಯಂತ ಮುಖ್ಯ ಎಂದು ಬಿಂಬಿಸುತ್ತಿರುವ ಮಾಧ್ಯಮಗಳ ಪ್ರವೃತ್ತಿಯನ್ನು ಅವರು ಕಟುವಾಗಿ ಟೀಕಿಸಿದರು. ಷೇರು ಮಾರುಕಟ್ಟೆಗೂ ಸಾಮಾನ್ಯ ಜನರ ದಿನನಿತ್ಯದ ಬದುಕಿಗೂ ಯಾವ ಸಂಬಂಧ? ಜನರಿಗ ಬೇಕಾಗಿರುವುದು ಅನ್ನ ನೀರು, ಸೂರು ಉದ್ಯೋಗ ಸಿಗಬೇಕು. ನಿರುದ್ಯೋಗ ಯುವಕರನ್ನ ಭಯೋತ್ಪಾದನೆಯೆಡೆಗೆ ಸೆಳೆಯುತ್ತದೆ. ಆದ್ದರಿಂದ ಅದರ ಕಡೆ ಹೆಚ್ಚು ಗಮನ ನೀಡಬೇಕು. ಈ ಸತ್ಯವನ್ನು ಎಡಪಂಥೀಯರು ಚೆನ್ನಾಗಿ ಅರಿತಿದ್ದಾರೆ. ಕಾಂಗ್ರೆಸ್‌ಗೆ ಸ್ವಲ್ಪ ಅರಿವಿದೆ. ಇಂದಿನ ಭಾರತಕ್ಕೆ ಬೇಕಾಗಿರುವುದು 'ಹಿಂದುತ್ವ' ಅಲ್ಲ. 'ಗರೀಬಿ ಹಟಾವೋ' ಎಂದು ಮಾರ್ಮಿಕವಾಗಿ ನುಡಿದರು.

ಸಾಹಿತ್ಯ, ಶಿಕ್ಷಣ, ಚರಿತ್ರೆಯ ಮೇಲೆ ಹಿಡಿತ ಸಾಧಿಸಿದರೆ ಎಲ್ಲವನ್ನೂ ಗೆದ್ದ ಹಾಗೆ ಎಂದು ತಿಳಿದಿದ್ದ ಮುರಳಿ ಮನೋಹರ್ ಜೋಷಿ ಚುನಾವಣೆಯಲ್ಲಿ ಸೋತಿರುವುದು ನಿಜಕ್ಕೂ ಸಂತಸದ ಸಂಗತಿ.

"ಒಟ್ಟಿನಲ್ಲಿ ಜನಾದೇಶ ಬಿಜೆಪಿಯ ವಿರುದ್ಧ ಇದೆ. ಸ್ಪಷ್ಟವಾಗಿ ಎಡಪಂಥವಾದದ ಪರವಾದ ಜನಾದೇಶ'' ಎಂದು ಡಾ.ಯು.ಆರ್. ಅನಂತಮೂರ್ತಿ ಪ್ರತಿಪಾದಿಸಿದರು.

ದೇಶ ಕಂಡ ಅತ್ಯಂತ ನೀಚ ಮನುಷ್ಯ ನರೇಂದ್ರ ಮೋದಿಯ ಪರ ಗುಜರಾತ್‌ನ ಜನ ಸಂಪೂರ್ಣ ಮತ ನೀಡದಿರಲು ಧೈರ್ಯ ಮಾಡಿರುವುದು ನಿಜಕ್ಕೂ ವಿಶ್ವಾಸ ಮೂಡಿಸುವ ವಿಚಾರವಾಗಿದೆ. ಆದರೆ ದುಃಖದ ಸಂಗತಿಯೆಂದರೆ ಕರ್ನಾಟಕ ಗುಜರಾತ್ ಆಗಿಬಿಡುತ್ತದೆಯೇ ಎನ್ನುವುದು. ಲೋಕಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಆರಿಸಿಬಂದಿರುವುದು ಕಳವಳ ಹುಟ್ಟಿಸುವ ಸಂಗತಿ. ಸಮಾಧಾನಕರ ವಿಚಾರವೆಂದರೆ ಕೋಮುವಾದಿಗಳಿಗೆ ಬಹುಮತ ನೀಡದೆ ಅತ್ಯಂತ ಬುದ್ಧಿವಂತಿಕೆಯಿಂದ ಜನಮತ ನೀಡಿರುವುದಾಗಿದೆ. ಕರ್ನಾಟಕದಲ್ಲಿ ಕೂಡ ಶೇಕಡಾವಾರು ಮತ ಹಾಗೂ ಗೆದ್ದ ಸ್ಥಾನಗಳನ್ನು ಲೆಕ್ಕ ಹಾಕಿದರೆ ಜನಾದೇಶ ಜಾತ್ಯಾತೀತ ಶಕ್ತಿಗಳ ಪರವಾಗಿದೆ.



ಆದ್ದರಿಂದ ಕರ್ನಾಟಕದ ಹಿತದೃಷ್ಟಿಯಿಂದ, ಕರ್ನಾಟಕದ ಧರ್ಮನಿರಪೇಕ್ಷ ಪರಂಪರೆಗೆ ಅನುಗುಣವಾಗಿ ಜನತಾದಳ (ಜಾತ್ಯಾತೀತ) ಹಾಗೂ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರಚಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ದೇಶದ ಪ್ರಧಾನಿ ಪಟ್ಟವನ್ನೇ ತ್ಯಾಗ ಮಾಡಿ ಹಿರಿಮೆ ಮೆರೆದಿರುವ ಸೋನಿಯಾ ಗಾಂಧಿಯವರ ಹಾದಿಯನ್ನು ತುಳಿದು, (ಕರ್ನಾಟಕದ ಜನರ ಅವಕೃಪೆಗೆ ಪಾತ್ರವಾಗಿರುವ) ಕಾಂಗ್ರೆಸ್ ಧುರೀಣರು ಮುಖ್ಯಮಂತ್ರಿ ಸ್ಥಾನವನ್ನು ತ್ಯಾಗ ಮಾಡಬೇಕು ಎಂಬ ಕಿವಿಮಾತನ್ನು ಅನಂತಮೂರ್ತಿ ಹೇಳಿದರು.

ದುರಹಂಕಾರ, ಸಂವೇದನಾ ಹೀನತೆಯ ವಿರುದ್ಧ ಜನಾದೇಶ

- ನ್ಯಾಯಮೂರ್ತಿ ಎ.ಜೆ.ಸದಾಶಿವ

"ಪ್ರಜಾಪ್ರಭುತ್ವದ ಮೂಲ ಸೆಲೆಯೇ ಚುನಾವಣೆ. ..... ಮತದಾನವು ಆಳುವವರನ್ನು ಜನರತ್ತ ನೋಡುವಂತೆ ಮಾಡಿದೆ, ಅವರ ಬೇಡಿಕೆಗಳನ್ನು ಪರಿಗಣಿಸುವಂತೆ ಒತ್ತಡ ಬೀರಿದೆ" ಎಂದು ನಿವೃತ್ತ ನ್ಯಾಯಾದೀಶ ನ್ಯಾಯಮೂರ್ತಿ ಎ.ಜೆ.ಸದಾಶಿವ ಹೇಳಿದರು.

"ಜನಗಳ ನಿಜವಾದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೆ ವಿದೇಶಿಮೂಲ, ಮಂದಿರ ನಿರ್ಮಾಣಗಳಂತಹ ಭಾವುಕ ವಿಚಾರಗಳನ್ನು ಉದ್ದೇಶಪೂರ್ವಕ ವಾಗಿಯೇ ಬಳಸಲಾಯಿತು. ಮಾಧ್ಯಮಗಳು ಕೂಡ ಸಂವಾದಗಳಲ್ಲಿ ಇಂತಹ ವಿಚಾರಗಳನ್ನೇ ಕೈಗೆತ್ತಿಕೊಂಡಿದೆ ಮತ್ತು ಸಾಮಾನ್ಯ ಮತದಾರನ ಅನಿಸಿಕೆಗೆ ಬೆಲೆ ನೀಡದೆ ಪಕ್ಷಗಳ ಕಾರ್ಯಕರ್ತರ ಮುಖಂಡರ ಹೇಳಿಕೆಗಳಿಗೇ ಹೆಚ್ಚು ಒತ್ತು ನೀಡಿದವು. ಆದರೆ ನಮ್ಮ ಮತದಾರರು ದೇವಸ್ಥಾನ, ಧರ್ಮ, ಜಾತಿ ಮುಖ್ಯವಲ್ಲ, ನೆಮ್ಮದಿಯ ಜೀವನ ಬೇಕು, ಗೊಂದಲ ಕೋಮು ಘರ್ಷಣೆ ಬೇಡ ಎಂದು ಸ್ಪಷ್ಟ ಜನಾದೇಶ ನೀಡಿದ್ದಾರೆ" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. "2004 ರ ಜನಾದೇಶ ದುರಹಂಕಾರ, ಸಂವೇದನಾ ಹೀನತೆಯ ವಿರುದ್ಧದ ತೀರ್ಪು" ಎಂದು ತಮ್ಮ ತೀರ್ಪನ್ನು ನ್ಯಾಯಮೂರ್ತಿಗಳು ನೀಡಿದರು.

"ಮಾಧ್ಯಮಗಳ ಸಮೀಕ್ಷೆ, ಪತ್ರಕರ್ತರ ಸಮೀಕ್ಷೆಗಳನ್ನು ಮೀರಿ ಜನರು ಮತ ನೀಡಿದ್ದಾರೆ. ಜನರ ಅಭಿಪ್ರಾಯವನ್ನು ಪತ್ರಿಕೆಗಳಾಗಲೀ, ವಿದ್ಯುನ್ಮಾನ ಮಾಧ್ಯಮಗಳಾಗಲೀ ತೀರ್ಮಾನಿಸುವುದಿಲ್ಲ. ಭಾರತದ ಸಾಮಾನ್ಯ ಜನ ತಮ್ಮ ಅನುಭವಗಳ ಆಧಾರದಲ್ಲಿ, ಜನಾದೇಶ ನೀಡಿದ್ದಾರೆ" ಎಂದು ನ್ಯಾಯಮೂರ್ತಿ ಎ.ಜೆ.ಸದಾಶಿವ ವಿಶ್ಲೇಷಿಸಿದರು.

ಸಂವಾದದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ.ಕೆ. ಮರುಳಸಿದ್ದಪ್ಪ, ಚಿಂತಕ, ಚಿತ್ರಕಲಾವಿದರಾದ ಪ್ರೊ.ಜಿ.ಕೆ.ಗೋವಿಂದ ರಾವ್, ಸಾಹಿತಿಗಳಾದ ಪ್ರೊ.ಕಿ.ರಂ. ನಾಗರಾಜರವರು ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ವೇದಿಕೆಯ ಸಂಚಾಲಕರಾದ ಆರ್.ಜಿ.ಹಳ್ಳಿ ನಾಗರಾಜ್ ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡಿದರೆ ಮತ್ತೊಬ್ಬ ಸಂಚಾಲಕಿ ಪ್ರತಿಭಾ ನಂದಕುಮಾರ್ ವಂದನಾರ್ಪಣೆ ಮಾಡಿದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH